# ವಿಪ್ರನುಡಿ

ಸ್ವಾವಲಂಬನೆ–ಸಂಘಟನೆ–ಸಂಸ್ಕಾರ

ಸಂಪುಟ–37 ಶ್ರೀಶುಭಕೃತ್/ಶೋಭಕೃತ್ ನಾಮ ಸಂವತ್ಸರ, ವೈಶಾಖ–ಜೇಷ್ಠ ಮಾಸ ಮೇ–2023, ಸಂಚಿಕೆ–3, ಪುಟಗಳು–36 ಬೆಲೆ ರೂ.15/–


## ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿರುವ ವಿಪ್ರ ಸಮುದಾಯದ ನೂತನ ಶಾಸಕರಿಗೆ ಹಾರ್ದಿಕ ಅಭಿನಂದನೆಗಳು



ಶ್ರೀ ಎಲ್.ಎ. ರವಿ ಸುಬ್ರಮಣ್ಯ
ಬಸವನಗುಡಿ ಕ್ಷೇತ್ರ



ಶ್ರೀ ಸುರೇಶ್ ಕುಮಾರ್
ರಾಜಾಜಿನಗರ ಕ್ಷೇತ್ರ



ಶ್ರೀ ಶಿವರಾಮ್ ಹೆಬ್ಬಾರ್,
ಯಲ್ಲಾಪುರ ಕ್ಷೇತ್ರ



ಶ್ರೀ ಉದಯ್ ಬಿ. ಗರುಡಾಚಾರ್
ಚಿಕ್ಕಪೇಟೆ ಕ್ಷೇತ್ರ



ಶ್ರೀ ಸಿ.ಕೆ. ರಾಮಮೂರ್ತಿ
ಜಯನಗರ ಕ್ಷೇತ್ರ



ಶ್ರೀ ವೇದವ್ಯಾಸ ಕಾಮತ್
ಮಂಗಳೂರು ಕ್ಷೇತ್ರ



ಶ್ರೀ ಕಿರಣ್ ಕುಮಾರ್ ಕೊಡ್ಗಿ
ಕುಂದಾಪುರ ಕ್ಷೇತ್ರ



ಶ್ರೀ ಟಿ.ಎಸ್. ವತ್ಸ
ಕೃಷ್ಣರಾಜ ಕ್ಷೇತ್ರ



ಆರ್.ವಿ.ದೇಶಪಾಂಡೆ
ಹಳಿಯಾಳ ಕ್ಷೇತ್ರ



ದಿನೇಶ್ ಗುಂಡೂರಾವ್
ಗಾಂಧಿನಗರ ಕ್ಷೇತ್ರ



ವಿಶ್ವಾಸ್ ವೈದ್ಯ
ಸವದತ್ತಿ ಕ್ಷೇತ್ರ

ಇವರೆಲ್ಲರೂ ಸಹ ಅತ್ಯಧಿಕ ಬಹುಮತದಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ, ಎಲ್ಲ ವಿಪ್ರ ಸಮುದಾಯದ ನೂತನ ಶಾಸಕರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಅಭಿನಂದನೆಗಳು, ಇವೆರೆಲ್ಲರೂ ಸಹ ರಾಜ್ಯದ ಹಾಗೂ ಸಮುದಾಯದ ಕೆಲಸ ಕಾರ್ಯಗಳಿಗೆ ಸ್ಪಂದಿಸಲಿ ಎಂದು ಮಹಾಸಭೆಯ ಹಾರೈಕೆ.

# ಶೃಂಗೇರಿಯಲ್ಲಿ ಐತಿಹಾಸಿಕ ಶುಕ್ಲ ಯಜುರ್ವೇದ ಮಹಾ ಸಮಾವೇಶ


















**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

ವಿಪ್ರನುಡಿ ಪ್ರಕಟಣಾ ಸಮಿತಿ

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
ಜ್ಯೋತಿಷಿ ಬ।। ಡಾ। ಮುದ್ರಾಡಿ ವಾಸುದೇವ ಭಟ್
ನಾರಾಯಣ ಭಟ್ ಹುಳೇಗಾರು
ಪ್ರಭಾಕರ ಕೆ.ಸಿ
ಕಾರ್ತಿಕ್ ಬಾಪಟ್
ಹೆಚ್.ವಿ. ಸುಬ್ಬರಾವ್

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ಅದ್ಭಿಃ ಗಾತ್ರಾಣಿ ಶುಧ್ಯಂತಿ ಮನಃ ಸತ್ಯೈವ ಶುದ್ಧತಿ ।**
**ವಿದ್ಯಾತಪೋಭ್ಯಾಂ ಭೂತಾತ್ಮಾ ಬುದ್ಧಿಃ ಜ್ಞಾನೇನ ಶುಧ್ಯತಿ ॥**

"ಶರೀರ, ಅದರ ಅವಯವಗಳು ನೀರಿನಿಂದ, ಮನಸ್ಸು ಸತ್ಯದಿಂದ ಶುದ್ಧವಾಗುತ್ತವೆ. ಜೀವವು ವಿದ್ಯೆಯಿಂದ, ತಪಸ್ಸುಗಳಿಂದ ಶುದ್ಧವಾಗುತ್ತದೆ. ಬುದ್ಧಿಯು ಜ್ಞಾನದಿಂದ ಶುದ್ಧವಾಗುತ್ತದೆ.

ದೇಹ, ಮನಸ್ಸು, ಬುದ್ಧಿ, ಜೀವಗಳು ಯಾವುದರಿಂದ ಶುದ್ಧವಾಗುತ್ತವೆ ಎಂಬ ವಿಷಯವನ್ನು ಪ್ರಸ್ತಾಪಿಸುವ ಮನುಸ್ಮೃತಿಯ ಸುಂದರ ಶ್ಲೋಕವಿದು. ದೇಹಕ್ಕೆ ಅಂಟಿದ ಕೊಳೆಯನ್ನು ಹೋಗಲಾಡಿಸುವುದೇ ಶುದ್ಧಿ, ಎಲ್ಲರಿಗೂ ತಿಳಿದಿರುವ ಈ ವಿಷಯವನ್ನು ಧರ್ಮಶಾಸ್ತ್ರವು ನಮಗೆ ತಿಳಿಸಿಕೊಡಬೇಕೇ? ಎಂದು ಕೆಲವರು ಪ್ರಶ್ನಿಸಬಹುದು. ಆದರೆ ಮನುವಿನ ಅಭಿಪ್ರಾಯವೇನಿದೆ ಎಂದು ತಿಳಿದುಕೊಳ್ಳೋಣ. ವೇದಗಳ, ಸ್ಮೃತಿಶಾಸ್ತ್ರಗಳ ಪ್ರಕಾರ ಜಪ, ತಪ, ದೇವರ ಪೂಜೆ, ಆಹಾರ ಸೇವನೆ ಮುಂತಾದ್ದನ್ನು ಮಾಡುವಾಗ ಮನುಷ್ಯನು ಶುಚಿಯಾಗಿರಬೇಕೆಂಬ ನಿಯಮವಿದೆ. ಅದಕ್ಕಾಗಿ ಸ್ನಾನ ಮಾಡಲೇಬೇಕು. ಹವಾನಿಯಂತ್ರಿತ ಮನೆಯೊಳಗೆ ಇದ್ದೇನೆ, ನಾನು ಶುದ್ಧವಾಗಿದ್ದೇನೆ ಎಂಬ ಯುಕ್ತಿವಾದವು ಸರಿಯಲ್ಲ.

ಮರ್ಕಟದಂತೆ ಅಸ್ಥಿರವಾದ ಮನಸ್ಸು ಯಾವಾಗಲೂ ಕೆಟ್ಟ ವಿಷಯಗಳನ್ನೇ ಯೋಚಿಸುತ್ತಿರುತ್ತದೆ. ಅದೇ ಮನಸ್ಸಿನ ಕೊಳೆ. ಬಾಯಿಯಿಂದ ಕೆಟ್ಟ ಮಾತಾಡದಿರಬಹುದು, ಕೈಯಿಂದ ಕೆಟ್ಟ ಕೆಲಸ ಮಾಡದಿರಬಹುದು. ಆದರೆ ಮನಸ್ಸಿನಲ್ಲಿ ದುಷ್ಟ ಆಲೋಚನೆ ಬಂದರೆ, ಕಾರ್ಯಗತವಾದರೆ, ವ್ಯಕ್ತಿ ನಾಶ ಸಿದ್ಧ. ಆದ್ದರಿಂದ ಗುರು–ಹಿರಿಯರಲ್ಲಿ ಪಶ್ಚಾತ್ತಾಪದಿಂದ ಸತ್ಯವಾಕ್ಯವನ್ನು ಹೇಳಿದರೆ, ಮನಸ್ಸು ಶುದ್ಧವಾಗುತ್ತದೆ. ಮನುಸ್ಮೃತಿಯ ಪ್ರಕಾರ ಮಾನಸಿಕ ದೋಷವನ್ನು ಸತ್ಯವಚನವು ಮಾತ್ರ ಶುದ್ಧೀಕರಿಸಬಲ್ಲದು, ಮಾತು ಮತ್ತು ಶರೀರದ ಅಪರಾಧಗಳಿಗೆ ಕೇವಲ ಸತ್ಯವಾಕ್ಯ ಪರಿಹಾರವಲ್ಲ. ಅವುಗಳಿಗೆ ಸೂಕ್ತ ದಂಡನೆಯನ್ನು ಅನುಭವಿಸಲೇಬೇಕು. ಮುಂಡಕ ಉಪನಿಷತ್ತಿನ ಪ್ರಕಾರ ವಿದ್ಯೆಯಲ್ಲಿ ಎರಡು ವಿಧ. ಮತ್ತು ಲೌಕಿಕ ಪ್ರಪಂಚ, ವ್ಯವಹಾರಕ್ಕೆ ಬೇಕಾದ್ದೆಲ್ಲವನ್ನು ತಿಳಿದುಕೊಳ್ಳುವುದು ಪರಾವಿದ್ಯೆ, ಅಪರಾವಿದ್ಯೆ. ಆತ್ಮಜ್ಞಾನವನ್ನು ಪಡೆಯುವುದು, ತಮ್ಮ ಬಗ್ಗೆ ಅರಿವನ್ನು ಹೊಂದುವುದು ವಿದ್ಯೆ (ದ್ವೇ ವಿದ್ಯೇ ವೇದಿತವ್ಯೇ । ಪರೇ ಅಪರೇ ಚ) ಇದಕ್ಕಾಗಿ ತಪಸ್ಸು, ಧ್ಯಾನ, ಆಧ್ಯಾತ್ಮಜ್ಞಾನ ಅಗತ್ಯ. ಯಾವುದು ಸರಿ, ತಪ್ಪು, ಧರ್ಮ–ಅಧರ್ಮ, ಗುಣ–ದೋಷಗಳನ್ನು ತಿಳಿಸಿಕೊಡುವುದು ಮನಸ್ಸಿನ ಅಂಗವಾದ ಬುದ್ಧಿ. ಶಾಸ್ತ್ರಗಳ ಪಠನ, ಗುರುಗಳ ಉಪದೇಶದಿಂದ ಬುದ್ಧಿನಿರ್ಮಲವಾಗುತ್ತದೆ. ಆದ್ದರಿಂದ ಭಗವದ್ಗೀತೆಯಲ್ಲಿ ಕೃಷ್ಣನು ಬುದ್ಧಿ ಯೋಗವನ್ನು ಪ್ರಸ್ತಾಪಿಸಿದ್ದಾನೆ. ಅದನ್ನು ಪಾಲಿಸುವುದರ ಮೂಲಕ ಇಹ–ಪರಗಳಲ್ಲಿ ಸೌಖ್ಯವನ್ನು ಹೊಂದಬಹುದು ಎಂದು ಗೀತಾಚಾರ್ಯನ ಸಲಹೆ.

**– ಪ್ರೊ. ಎಂ.ಕೆ. ಶ್ರೀಧರ್**

**ಸೂಚನೆ :** ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.
–ಸಂಪಾದಕ ಮಂಡಳಿ

**ಹಿಂದಿನ ಸಂಚಿಕೆಯಿಂದ**

# ತತ್ವ ಬೋಧ

**ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ**

**ಕಥಮಿತಿ ಚೇತ್। ಅವಿದ್ಯೋಪಾಧಿಃ ಸನ್ ಆತ್ಮಾ ಜೀವಃ ಇತಿ ಉಚ್ಯತೇ। ಮಾಯೋಪಾಧಿಃ ಸನ್ ಆತ್ಮಾ ಈಶ್ವರಃ ಇತಿ ಉಚ್ಯತೇ। ಏವಮ್ ಉಪಾಧಿಭೇದಾದ್ ಜೀವೇಶ್ವರಭೇದದೃಷ್ಟಿಃ ಯಾವತ್ಪರ್ಯಂತಂ ತಿಷ್ಠತಿ, ತಾವತ್ಪರ್ಯಂತಂ ಜನ್ಮಮರಣಾದಿರೂಪಸಂಸಾರಃ ನ ನಿವರ್ತತೇ। ತಸ್ಮಾತ್ ಕಾರಣಾತ್ ಜೀವಃ ಏವ ಈಶ್ವರಃ ಈಶ್ವರಃ ಏವ ಜೀವಃ ಇತಿ ಇತರಾಭೇದದೃಷ್ಟಿಂ ಜಾನೀಯಾತ್।**

**ಅನುವಾದ :–** ಹೇಗೆಂದರೆ – ಅವಿದ್ಯೆಯೆಂಬ ಉಪಾಧಿಯನ್ನು ಹೊಂದಿದ ಆತ್ಮನು ಜೀವ ಎನಿಸಿಕೊಳ್ಳುವನು. ಮಾಯೆಯನ್ನು ಉಪಾಧಿಯಾಗಿ ಹೊಂದಿದ ಆತ್ಮನು ಈಶ್ವರ ಎನ್ನಲ್ಪಡುವನು. ಹೀಗೆ ಉಪಾಧಿಭೇದದಿಂದಾಗಿ ಜೀವ–ಈಶ್ವರ–ಭೇದದೃಷ್ಟಿ ಇರುವವರೆಗೆ ಜನ್ಮಮರಣಾದಿರೂಪವಾದ ಸಂಸಾರವು ನಿವೃತ್ತವಾಗುವುದಿಲ್ಲ. ಹಾಗಾಗಿ ಜೀವನೇ ಈಶ್ವರ ಹಾಗೂ ಈಶ್ವರನೇ ಜೀವ ಎಂದು ಪರಸ್ಪರ ಅಭೇದದೃಷ್ಟಿಯನ್ನು ತಿಳಿದುಕೊಳ್ಳಬೇಕು.

**ವಿವರಣೆ :–** ಜೀವ ಹಾಗೂ ಈಶ್ವರ ಇವೆರಡರ ನಡುವೆ ವಾಸ್ತವವಾದ ಭೇದವಿಲ್ಲದಿದ್ದರೂ ಭಿನ್ನವಾದಂತೆ ಕಾಣಿಸುತ್ತವೆ. ಇದಕ್ಕೆ ಕಾರಣ ಏನೆಂಬುದನ್ನು ವಿವರಿಸಿದ್ದಾರೆ. ಅವಿದ್ಯೆ ಎಂಬ ಉಪಾಧಿಯ ಸಂಬಂಧದಿಂದಾಗಿ ಆತ್ಮನು ಜೀವನೆನಿಸಿಕೊಂಡರೆ, ಮಾಯೆ ಎಂಬ ಉಪಾಧಿಯ ಸಂಬಂಧದಿಂದಾಗಿ ಅದೇ ಆತ್ಮನು ಈಶ್ವರ ಎನಿಸಿಕೊಳ್ಳುವನು. ಈ ರೀತಿ ಉಪಾಧಿಗಳ ಭೇದದಿಂದಾಗಿಯೇ ಜೀವ–ಈಶ್ವರರು ಬೇರೆ ಬೇರೆ ಎಂದು ತಿಳಿಯಲ್ಪಡುತ್ತವೆ ಹೊರತು ವಾಸ್ತವವಾಗಿ ಭೇದವಿಲ್ಲ. ಉಪಾಧಿಯಿಂದಾಗಿ ಕಾಣಿಸಿಕೊಳ್ಳುವ ಭೇದವನ್ನು ಅಜ್ಞಾನದಿಂದಾಗಿ ಪಾರಮರ್ಥಿಕವೆಂದು ತಿಳಿದುಕೊಳ್ಳುತ್ತಾರೆ. ಈ ರೀತಿಯ ಭೇದದೃಷ್ಟಿಯೇ ಸಂಸಾರಕ್ಕೆ ಕಾರಣವಾಗುತ್ತದೆ. ಜೀವ ಹಾಗೂ ಈಶ್ವರ ಇಬ್ಬರೂ ವಾಸ್ತವದಲ್ಲಿ ಅಖಂಡವೂ ಶದ್ಧವೂ ಆದ ಚೈತನ್ಯವೇ ಎಂದು ತಿಳಿದುಕೊಳ್ಳುವುದೇ ಮೋಕ್ಷಕ್ಕೆ ಮಾರ್ಗವಾಗಿದೆ.

**ನನು ಸಾಹಂಕಾರಸ್ಯ ಕಿಂಚಿಜ್‌ಜ್ಞಸ್ಯ ಜೀವಸ್ಯ ನಿರಹಂಕಾರಸ್ಯ ಸರ್ವಜ್ಞಸ್ಯ ಈಶ್ವರಸ್ಯ ಚ ಕಥಮ್ ಅಭೇದಬುದ್ಧಿಃ ಸ್ಯಾತ್? ಉಭಯೋಃ ವಿರುದ್ಧಧರ್ಮಾಕ್ರಾಂತತ್ವಾದ್ ಇತಿ ಚೇತ್?**

**ನ। ಸ್ಥೂಲಸೂಕ್ಷ್ಮಶರೀರಾಭಿಮಾನೀ ತ್ವಂಪದವಾಚ್ಯಃ ಅರ್ಥಃ, ಉಪಾಧಿವಿನಿರ್ಮುಕ್ತಂ ಸಮಾಧಿದಶಾಸಂಪನ್ನಂ ಶುದ್ಧಚೈತನ್ಯಂ ಚ ತ್ವಂಪದಲಕ್ಷ್ಯಃ ಅರ್ಥಃ। ಏವಂ ಸರ್ವಜ್ಞತ್ವಾದಿವಿಶಿಷ್ಟಃ ಈಶ್ವರಃ ತತ್ವದವಾಚ್ಯಃ, ಉಪಾಧಿಶೂನ್ಯಂ ಶುದ್ಧಚೈತನ್ಯಂ ಚ ತತ್ವದಕ್ಷ್ಯಮ್। ಏವಂ ಚ ಲಕ್ಷ್ಯಾರ್ಥಮಾದಾಯ ಜೀವೇಶ್ವರಯೋಃ ಅಭೇದೇ ಬಾಧಕಾಭಾವಃ।**

**ಅನುವಾದ :–** ಅಹಂಕಾರವುಳ್ಳ ಅಲ್ಪಜ್ಞನಾದ ಜೀವ ಹಾಗೂ ಅಹಂಕಾರರಹಿತನೂ ಸರ್ವಜ್ಞನೂ ಆದ ಈಸ್ವರ – ಇವುಗಳಲ್ಲಿ ಪರಸ್ಪರ ವಿರುದ್ಧವಾದ ಧರ್ಮಗಳಿರುವಾಗ ಇವುಗಳ ಅಭೇದದ ಜ್ಞಾನ ಹೇಗೆ ಸಾಧ್ಯ? ಹಾಗಲ್ಲ. ಸ್ಥೂಲಸೂಕ್ಷ್ಮ ಶರೀರಗಳಲ್ಲಿ ಅಭಿಮಾನವುಳ್ಳ ಆತ್ಮನು ತ್ವಂಪದದ ವಾಚ್ಯಾರ್ಥ. ಸಮಾಧಿಯ ದಶೆಯಲ್ಲಿ ಸಿದ್ಧವಾಗುವ ಉಪಾಧಿನಿರ್ಮುಕ್ತವಾದ ಶುದ್ಧ ಚೈತನ್ಯವು ತ್ವಂಪದದ ಲಕ್ಷ್ಯಾರ್ಥ. ಅದೇ ರೀತಿ ಸರ್ವಜ್ಞತ್ವಾದಿವಿಶಿಷ್ಟನಾದ ಈಶ್ವರನು ತತ್ವದದ ವಾಚ್ಯ. ಉಪಾಧಿಶೂನ್ಯವಾದ ಶುದ್ಧಚೈತನ್ಯವು ತತ್ವದದ ಲಕ್ಷ್ಯ. ಈ ರೀತಿ ಲಕ್ಷ್ಯಾರ್ಥವನ್ನು ತೆಗೆದುಕೊಂಡರೆ ಜೀವ ಹಾಗೂ ಈಶ್ವರರ ಅಭೇದದಲ್ಲಿ ಬಾಧಕವು ಇರುವುದಿಲ್ಲ.

**ವಿವರಣೆ :–** 'ತತ್ ತ್ವಮ್ ಅಸಿ' ಎನ್ನುವ ಮಹಾವಾಕ್ಯವ ಜೀವ ಹಾಗೂ ಈಶ್ವರರ ಅಭೇದವನ್ನು ಬೋಧಿಸುತ್ತದೆ. ಈ ವಾಕ್ಯದಲ್ಲಿ ತ್ವಮ್ (ನೀನು) ಎನ್ನುವ ಪದವು ಜೀವನನ್ನು ತಿಳಿಸುತ್ತದೆ ಹಾಗೂ ತತ್ (ಅದು) ಎನ್ನುವ ಪದವು ಈಶ್ವರನನ್ನು ತಿಳಿಸುತ್ತದೆ. 'ತತ್ ತ್ವಮ್ ಅಸಿ' ಎಂದರೆ ಅದು ನೀನು ಆಗಿರುವಿ ಎಂದರ್ಥ. ಈ ವಾಕ್ಯವು ಜೀವ ಹಾಗೂ ಈಶ್ವರರ ಅಭೇದವನ್ನು ಪ್ರತಿಪಾದಿಸತ್ತದೆ. ಆದರೆ ಈ ಎರಡು ಪದಗಳ ಅರ್ಥಗಳಾದ ಜೀವ ಹಾಗೂ ಈಶ್ವರರಲ್ಲಿ ಪರಸ್ಪರ ವಿರುದ್ದವದ ಧರ್ಮಗಳಿರುವಾಗ ಅವುಗಳ ಅಭೇದ ಹೇಗೆ ಸಾಧ್ಯ? ಇದಕ್ಕೆ ಉತ್ತರವಾಗಿ ಗ್ರಂಥಕಾರರು ತ್ವಂಪದ ಹಾಗೂ ತತ್ಪದ ಇವೆರಡರ ವಾಚ್ಯಾರ್ಥ ಹಾಗೂ ಲಕ್ಷ್ಯಾರ್ಥಗಳನ್ನು ತಿಳಿಸಿದ್ದಾರೆ. ವಾಚ್ಯಾರ್ಥ ಎಂದರೆ ಒಂದು ಶಬ್ದದ ನೇರವಾದ ಅರ್ಥ. ಉದಾಹರಣೆಗೆ ನದಿ ಎನ್ನುವ ಶಬ್ದದ ನೇರ ಅರ್ಥ ನೀರಿನ ಪ್ರವಾಹ. ಆದರೆ ಕೆಲವು ಕಡೆ ವಾಚ್ಯಾರ್ಥವನ್ನು ತೆಗೆದುಕೊಂಡರೆ ಅರ್ಥವು ಹೊಂದದಿದ್ದಾಗ ವಾಚ್ಯಾರ್ಥಕ್ಕೆ ಸಂಬಂಧಿಸಿದ ಇನ್ನೊಂದು ಅರ್ಥವನ್ನು ತೆಗೆದುಕೊಳ್ಳಬೇಕಾಗುವುದು. ಅದನ್ನು ಲಕ್ಷ್ಯಾರ್ಥ ಎನ್ನುವರು. ಉದಾಹರಣೆಗೆ 'ನದಿಯಲ್ಲಿ ಗ್ರಾಮವಿದೆ' ಎನ್ನುವ ವಾಕ್ಯದಲ್ಲಿ ನದಿ ಎನ್ನುವ ಶಬ್ದದ ಲಕ್ಷ್ಯಾರ್ಥ ನದಿಯ ತೀರವನ್ನು ಗ್ರಹಿಸಲಾಗುತ್ತದೆ. ಅದೇ ರೀತಿ ತತ್ ತ್ವಮ್ ಅಸಿ ಎನ್ನುವಲ್ಲಿ ತತ್ ಹಾಗೂ ತ್ವಮ್ ಎನ್ನುವ ಪದಗಳ ವಾಚ್ಯಾರ್ಥಗಳನ್ನು ತೆಗೆದುಕೊಂಡರೆ ವಿರೋಧ ಉಂಟಾಗುತ್ತದೆ. ಆದರೆ ಅವುಗಳೆರಡರ ಲಕ್ಷ್ಯಾರ್ಥವಾದ ಶುದ್ಧ ಚೈತನ್ಯವು ಒಂದೇ ಆದ್ದರಿಂದ ಯವುದೇ ಬಾಧಕವಿಲ್ಲದೆ ಅವುಗಳ ಅಭೇದ ಸಿದ್ಧವಾಗುವುದು.

**ಏವಂ ವೇದಾಂತವಾಕ್ಯೈಃ ಸದ್ಗುರೂಪದೇಶೇನ ಸರ್ವೇಷ್ವಪಿ ಭೂತೇಷು ಯೇಷಾಂ ಬ್ರಹ್ಮಬುದ್ಧಿಃ ಉತ್ಪನ್ನಾ ತೇ ಜೀವನ್ಮುಕ್ತಾಃ ಇತಿ ಉಚ್ಯಂತೇ।**

**ಅನುವಾದ :–** ಈ ರೀತಿ ವೇದಾಂತವಾಕ್ಯಗಳಿಂದ ಹಾಗೂ ಸದ್ಗುರುವಿನ ಉಪದೇಶದಿಂದ ಎಲ್ಲ ಭೂತಗಳಲ್ಲೂ ಬ್ರಹ್ಮಬುದ್ಧಿಯುಂಟಾದವರು ಜೀವನ್ಮುಕ್ತರು ಎನ್ನಲ್ಪಡುವರು.

**ವಿವರಣೆ :–** ನಾನು ಬ್ರಹ್ಮ, ಎಲ್ಲರೂ ಬ್ರಹ್ಮ ಎನ್ನುವ ಅರಿವೇ ಬ್ರಹ್ಮಜ್ಞಾನ ಎನ್ನಲ್ಪಡುತ್ತದೆ. ಈ ಬ್ರಹ್ಮಜ್ಞಾನಕ್ಕೆ ವೇದಾಂತವಾಕ್ಯವೇ ಪ್ರಮಾಣ. ವೇದಾಂತವಾಕ್ಯವನ್ನು ಸದ್ಗುರುವಿನ ಉಪದೇಶದ ಮೂಲಕವೇ ತಿಳಿದುಕೊಳ್ಳತಕ್ಕದ್ದು. ಬ್ರಹ್ಮಜ್ಞಾನವಾದ ಬಳಿಕ ಜ್ಞಾನಿಯು ಈ ಶರರದಲ್ಲೇ ಜೀವಂತನಾಗಿದ್ದರೂ ಮುಕ್ತಿಯನ್ನು ಅನುಭವಿಸುವನು. ಹಾಗಾಗಿ ಅವನನ್ನು ಜೀವನ್ಮುಕ್ತ ಎನ್ನುವರು. ಬದುಕಿರುವಾಗಲೇ ಬ್ರಹ್ಮಜ್ಞಾನದ ಫಲವಾದ ಮೋಕ್ಷವನ್ನು ಅನುಭವಿಸುವುದನ್ನು ಜೀವನ್ಮುಕ್ತಿ ಎನ್ನುವರು.

**(ಮುಂದುವರೆಯುವುದು.....)**

# ಅಧ್ಯಕ್ಷರ ನುಡಿ



**ವಿಪ್ರ ಬಾಂಧವರಿಗೆ ನನ್ನ ನಮಸ್ಕಾರಗಳು,**

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಹನ್ನೊಂದು ಜನ ಬ್ರಾಹ್ಮಣ ಅಭ್ಯರ್ಥಿಗಳು ಶಾಸಕರಾಗಿ ಆಯ್ಕೆಯಾಗಿರುವುದು ವಿಪ್ರ ಸಮುದಾಯಕ್ಕೆ ಅತ್ಯಂತ ಸಂತಸದ ಹಾಗೂ ಹೆಮ್ಮೆಯ ಸಂಗತಿಯಾಗಿದೆ. ಚುನಾವಣೆಯಲ್ಲಿ ಜಯಶೀಲರಾದ ಎಲ್ಲ ವಿಪ್ರ ಶಾಸಕರಿಗೆ ಮಹಾಸಭೆಯ ಹಾಗೂ ನನ್ನ ಹಾರ್ದಿಕ ಅಭಿನಂದನೆಗಳು. ಇಂದಿನ ಜಾತಿ ಸಮೀಕರಣದ ಚುನಾವಣಾ ರಾಜಕೀಯದಲ್ಲಿ ಜಾತಿ ಸಂಖ್ಯಾಬಲವಿಲ್ಲದ ವಿಪ್ರ ಸಮುದಾಯದ ಅಭ್ಯರ್ಥಿಗಳ ಈ ಜಯವು ವೈಶಿಷ್ಟ್ಯ ಹಾಗೂ ಮಹತ್ವಪೂರ್ಣ. ಇಂತಹ ಸನ್ನೀವೇಶದಲ್ಲಿ ಜನಪ್ರತಿನಿಧಿಗಳಾಗಿ ರಾಜ್ಯದ ಜನತೆಯ ಸೇವೆ ಸಲ್ಲಿಸುವ ಅವಕಾಶ ಪಡೆದಿರುವ ಇವರೆಲ್ಲರೂ ಜಾತಿ ಸಮೀಕರಣ ಮೀರಿ ಜನಸೇವೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡು ತಮ್ಮನ್ನು ಆರಿಸಿದ ಮತದಾರರ ಅಶೋತ್ತೋರಗಳನ್ನು ಈಡೇರಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಲೆಂದು ಹಾರೈಸುತ್ತೇನೆ. ಅಂತೆಯೆ ನೂತನ ಶಾಸಕರು ತಾವು ಬಂದ ಸಮುದಾಯದ ಸಮಸ್ಯೆಗಳು ಹಾಗೂ ಹಿತಾಸಕ್ತಿಗಳಿಗೆ ನ್ಯಾಯ ಸಮ್ಮತವಾಗಿ ಪ್ರತಿಸ್ಪಂದಿಸುವ ಜವಬ್ದಾರಿಯು ಇವರ ಮೇಲಿದೆ ಎಂಬುದುನ್ನು ನೆನಪಿಡಬೇಕು ಎಂದು ನನ್ನ ವಿನಂತಿ. ವಿಪ್ರ ಸಮುದಾಯವು ಅವರೆಲ್ಲರನ್ನು ಅಭಿನಂದಿಸುವುದರ ಜೊತೆಗೆ ಅವರ ಎಲ್ಲ ಜನಪರ ಹಾಗೂ ಜನಹಿತ ಕಾರ್ಯಕ್ರಮಗಳಿಗೆ ಮಹಾಸಭೆಯ ಪೂರ್ಣ ಸಹಕಾರ, ಬೆಂಬಲ ಇರುತ್ತದೆ ಎಂಬುದನ್ನು ತಿಳಿಸಬಯಸುತ್ತೇನೆ.

ಸರ್ಕಾರಗಳಷ್ಟೇ ಪ್ರಾಮುಖ್ಯತೆ ಸಂಘಸಂಸ್ಥೆಗಳಿಗೂ ಉಂಟು. ಯಾವ ಧ್ಯೇಯೋದ್ದೇಶಗಳನ್ನಿಟ್ಟುಕೊಂಡು ಸಂಸ್ಥೆಗಳು ರಚನೆ ಆಗಿರುತ್ತದೋ ಆ ದ್ಯೇಯೋದ್ದೇಶಗಳ ಪರಿಪಾಲನೆ ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆತರಲ್ಪಟ್ಟಿದೆ ಎಂಬುದು ಸಂಘಸಂಸ್ಥೆಗಳ ಅಧ್ಯಕ್ಷರಾದವರು, ಕಾರ್ಯಕಾರಿಣಿ ಸಮಿತಿ ಸದಸ್ಯರು ಹಾಗೂ ಪದಾಧಿಕಾರಿಗಳು ಆತ್ಮಾವಲೋಕನವನ್ನು ಕಾಲಕಾಲಕ್ಕೆ ಮಾಡಿಕೊಳ್ಳಬೇಕು, ನಮಗೆ ಕೊಟ್ಟಿರುವ ಸ್ಥಾನಮಾನಗಳಿಗೆ ಜವಾಬ್ದಾರಿಗನುಗುಣವಾಗಿ ನಮ್ಮ ಕರ್ತವ್ಯವನ್ನು ನಾವು ನಿರ್ವಹಿಸುತ್ತಿದ್ದೇವೆಯೇ ಎಂದು ಆಗಾಗ ಪರಾಮರ್ಶಿಸಿಕೊಳ್ಳಬೇಕಾಗಿದೆ.

ಈ ನಿಟ್ಟಿನಲ್ಲಿ ಹಲವಾರು ಬಾರಿ ಕಾರ್ಯಕಾರಿ ಸಮಿತಿ ಸದಸ್ಯರೊಂದಿಗೆ, ಪದಾಧಿಕಾರಿಗಳೊಂದಿಗೆ ಚರ್ಚಿಸಿದ್ದಿದೆ ಹಾಗೂ ಕೆಲವರು ತಮ್ಮ ಇತಿಮಿತಿಗಳನ್ನು ತಿಳಿಸಿ ತಾವೇ ಸ್ವಯಂಪ್ರೇರಿತರಾಗಿ ಈ ಬಾರಿ ಕೆಲವೊಂದು ಜವಾಬ್ದಾರಿಗಳಿಂದ ಬಿಡುಗಡೆಗೊಳಿಸಬೇಕಂದು ಕೇಳಿದ್ದಿದೆ, ಆದರೆ ಈ ಸಂಖ್ಯೆ ಬೆರಳೆಣಿಕೆಯಷ್ಟು ಎಂಬುದು ಒಂದು ಸಂತೋಷದ ಸಂಗತಿ. ಅಂದರೆ ಹಲವರು ತಮಗೆ ಕೊಟ್ಟಿರುವ ಜವಾಬ್ದಾರಿಯನ್ನು ಸಂತಸದಿಂದ ನಿಭಾಯಿಸಿದ್ದೀರೆಂದು ಹಾಗು ಇನ್ನು ಮುಂದೆಯೂ ಕೆಲವೊಂದು ಜವಾಬ್ದಾರಿಗಳ ನಿಭಾಯಿಸುವ ಇಚ್ಛೆ ಹೊಂದಿದ್ದೀರೆಂದು ಭಾವಿಸಿದ್ದೇನೆ.

ಅದಲ್ಲದೆ ರಾಜ್ಯಾದ್ಯಂತ ಸಂಘಟನೆಯನ್ನು ಬಲಪಡಿಸಲು ಕೆಲವೊಂದು ಮಾರ್ಪಾಡುಗಳನ್ನು ತಂದು ಹಿರಿಯರ, ಕಿರಿಯರ, ಅನುಭವಿಗಳ ಹಾಗು ಹೊಸ ತಲೆಮಾರಿನ ಸಮ್ಮಿಶ್ರಣದೊಂದಿಗೆ ಈ 2023 ನೇ ಸಾಲಿನ ಪದಾಧಿಕಾರಿಗಳ ಹಾಗು ಕಾರ್ಯಕಾರಿ ಸಮಿತಿ ಸದಸ್ಯರ ನೇಮಕವನ್ನು ಮಾಡಲಾಗಿದೆ ಹಾಗೂ ಅವರೆಲ್ಲರೂ ತಮಗೆ ವಹಿಸಿದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಾರೆಂಬ ವಿಶ್ವಾಸವಿದೆ ಹಾಗೂ ತಮಗೆ ವಹಿಸಿದ ಜವಾಬ್ದಾರಿಗಳ ಹಾಗೂ ಅದರ ಪ್ರಗತಿಯನ್ನು ತಾವೇ ಸ್ವಪ್ರೇರಣೆಯಿಂದ ತಿಂಗಳಿಗೊಮ್ಮೆಯಾದರೂ ಖುದ್ದು ಕರೆಮಾಡಿ ಅಥವಾ ಮುಖತಃ ಭೇಟಿಯಾಗಿ ತಿಳಿಸುತ್ತೀರೆಂದು ನಿರೀಕ್ಷಿಸುತ್ತೇನೆ.

ನಾವೆಲ್ಲರೂ ನಮ್ಮ ನಮ್ಮ ದೈನಂದಿನ ಬೇರೆ ಬೇರೆಯ ವೃತ್ತಿಗಳಲ್ಲಿ ತೊಡಗಿಸಿಕೊಂಡು ಅದರೊಂದಿಗೆ ಈ ಸಮಾಜ ಕಟ್ಟುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದೇವೆಂಬುದು ಕೂಡ ಸತ್ಯ. ಆದರೆ ಒಂದು ಜವಾಬ್ದಾರಿಯನ್ನು ವಹಿಸಿಕೊಂಡರೆ ಆ ಸ್ಥಾನಕ್ಕೆ ನ್ಯಾಯ ಒದಗಿಸುವುದು ನಮ್ಮ ಕರ್ತವ್ಯವು ಹೌದು, ಈ ನಿಟ್ಟಿನಲ್ಲಿ ದಿನಂಪ್ರತಿ ಅಲ್ಲದಿದ್ದರೂ ವಾರಕ್ಕೊಮ್ಮೆಯಾದರೂ ಆಸುಪಾಸಿನ ವಿಪ್ರಬಾಂಧವರ ಕಷ್ಟಸುಖದಲ್ಲಿ ಭಾಗಿಯಾಗಿ ನಮ್ಮ ಸಮಾಜವನ್ನು ಸದೃಢಗೊಳಿಸುವ ಕೆಲಸದಲ್ಲಿ ತೊಡಗಿಕೊಂಡು ನಮ್ಮ ಸಮಾಜದ ಬಲವರ್ಧನೆ ಹಾಗೂ ಸಂಕಷ್ಟದಲ್ಲಿರುವ ಅಶಕ್ತ ವಿಪ್ರರಿಗೆ ನೆರವಾಗಲು ಹಮ್ಮಿಕೊಂಡಿರುವ ಮಹಾಸಭೆಯ ಎಲ್ಲ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಮತ್ತೊಮ್ಮೆ ವಿನಂತಿಸುತ್ತೇನೆ.

ಕೊನೆಯಲ್ಲಿ ಇನ್ನೊಂದು ಪ್ರಮುಖ ಅಂಶವೆಂದರೆ, ನಮ್ಮಲ್ಲಿ ಹಲವರು ಕೆಲವೊಂದು ಹುದ್ದೆಗಳನ್ನು ಜವಾಬ್ದಾರಿಗಳನ್ನು ವಹಿಸಿಕೊಳ್ಳುವಂತೆ ಕೇಳಿಕೊಂಡಾಗ, ಯಾವುದೇ ಹುದ್ದೆಯನ್ನು ಅಪೇಕ್ಷಿಸದೆ ಕೆಲವೊಮ್ಮೆ ಪದಾಧಿಕಾರಿಗಳಿಗಿಂತಲೂ ಅಥವಾ ಕಾರ್ಯಕಾರಿ ಸಮಿತಿ ಸದಸ್ಯರಿಗಿಂತಲೂ ಹೆಚ್ಚು ಕೆಲಸವನ್ನು ನಿರ್ವಹಿಸಿ ಎಲೆಮರೆಯ ಕಾಯಿಯಂತೆ ಇರಲು ಇಷ್ಟಪಟ್ಟಿದ್ದೀರಿ. ಆ ಮೂಲಕ ಸ್ಥಾನಮಾನ ಜವಾಬ್ದಾರಿಗಳನ್ನು ಕರೆದು ಕೊಡದಿದ್ದರೂ ಸ್ವಯಂಪ್ರೇರಿತರಾಗಿ ಸಮಾಜ ಕಟ್ಟುವ ಕೆಲಸದಲ್ಲಿ ಯಾವ ಫಲಾಪೇಕ್ಷೆಯಿಲ್ಲದೆ ಪಾಲ್ಗೊಳ್ಳಬಹುದು ಎಂಬುದು ತೋರಿಸಿಕೊಟ್ಟಿದ್ದಿರಿ. ಅಂತಹ ಪ್ರತಿಯೊಬ್ಬ ಕಾರ್ಯಕರ್ತರಿಗೆ ಹಾಗೂ ಸಮಾಜ ಬಾಂಧವರಿಗೆ ನನ್ನ ಅನಂತ ಅನಂತ ವಂದನೆಗಳು.

ವಂದನೆಗಳೊಂದಿಗೆ,

**ಅಶೋಕ ಹಾರನಹಳ್ಳಿ**
ಮಹಾಸಭಾಧ್ಯಕ್ಷರು

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮ್ಮ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಮಾರ್ಗದರ್ಶನದಲ್ಲಿ ಇದೇ 2023 ಮೇ 13–14 ರ ಶನಿವಾರ ಮತ್ತು ಭಾನುವಾರಗಳಂದು ಶುಕ್ಲಯಜುರ್ವೇದ ಅನುಯಾಯಿಗಳ ಸಂಯುಕ್ತಾಶ್ರಯದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಶಂಕರಮಠದ ಆವರಣದಲ್ಲಿ ಶುಕ್ಲಯಜುರ್ವೇದದ ಬೃಹತ್ ಸಮಾವೇಶವು ಅತ್ಯಂತ ಯಶಸ್ವಿಯಾಗಿ ಜರಿಗಿರುವುದು ಸಂತೋಷದ ಸಂಗತಿ. 1235 ವರ್ಷಗಳ ಹಿಂದೆ ಶ್ರೀ ಶಂಕರಭಗವತ್ಪಾದರು ಶುಕ್ಲಯಜುರ್ವೇದ ಮಾರ್ಗಾನುವರ್ತಿಯಾದ ಶ್ರೀ ಸುರೇಶ್ವರಾಚಾರ್ಯರನ್ನು ಶೃಂಗೇರಿಯ ದಕ್ಷಿಣ ಅಮ್ನಾಯ ಪೀಠಾಧಿಪತಿಯನ್ನಾಗಿ ನೇಮಿಸಿದ್ದರು. ಪರಂಪರೆ ಹಲವು ಬಾರಿ ಮುಂದುವರೆದಿದೆ. ಈ ಸಮಾವೇಶ ನಡೆಸಲು ಇಂದಿನ ಜಗದ್ಗುರುಗಳಾದ ಶ್ರೀ ಶ್ರೀ ವಿಧುಶೇಖರಭಾರತೀ ತೀರ್ಥ ಮಹಾಸ್ವಾಮಿಗಳು ಅನುಗ್ರಹಿಸಿ ಆಶೀರ್ವದಿಸಿರುತ್ತಾರೆ. ಶೃಂಗೇರಿ ಮಠದ ಕಾರ್ಯನಿರ್ವಾಹಕ ಅಧಿಕಾರಿಗಳಾದ, ಪದ್ಮಶ್ರೀ ಪುರಸ್ಕೃತ ಡಾ.ವಿ.ಆರ್. ಗೌರೀಶಂಕರ್ ಅವರು ಎಲ್ಲ ಸಹಕಾರ ನಿಡಿರುತ್ತಾರೆ. ಈ ಶುಕ್ಲಯಜುರ್ವೇದದ ಇತಿಹಾಸ ಹೀಗಿದೆ.

"ವೇದವಾಙ್ಮಯದಲ್ಲಿ ಶುಕ್ಲಯಜುರ್ವೇದದ ಸ್ಥಾನ ಅತಿಮಹತ್ತರವಾದದ್ದು, ಇದಕ್ಕೆ 'ವಾಜಸನೇಯ ಶಾಖೆ' ಎಂಬ ಹೆಸರಿದೆ. ಶತಶತಮಾನಗಳ ಹಿಂದೆ ಸಾವಿರಕ್ಕೂ ಹೆಚ್ಚು ವೇದ ಶಾಖೆಗಳಿದ್ದವು. ಅವೆಲ್ಲವನ್ನು ಪರಿಶೀಲಿಸಿ, ಪ್ರವಚನ ಮತ್ತು ಶಾಖೆಗಳಿಗೆ ಅನುಸಾರವಾಗಿ ವೇದಗಳ ಜ್ಞಾನಕಾಂಡ, ಕರ್ಮಕಾಂಡ, ಉಪಾಸನ ಕಾಂಡ ಮತ್ತು ವಿಜ್ಞಾನಕಾಂಡಗಳಿಗೆ ಅನುಸಾರವಾಗಿ, ಕ್ರಮವಾಗಿ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಎಂದು ವಿಭಾಗ ಮಾಡಲಾಗಿತ್ತು. ಅವುಗಳನ್ನು ಮಹರ್ಷಿ ವೇದವ್ಯಾಸರು ನಾಲ್ವರು ಶಿಷ್ಯರಿಗೆ ಬೋಧಿಸಿದರು. ಯಜುರ್ವೇದವನ್ನು ಮಹರ್ಷಿ ವೈಶಂಪಾಯನರಿಗೆ ನೀಡಿದರು. ಅನಂತವಾಗಿದ್ದ ವೇದವನ್ನು ತಿಳಿಯಲು ಪ್ರಾರಂಭಿಸಿದ ಮಹರ್ಷಿ ಯಾಜ್ಞವಲ್ಕ್ಯರು ಮಹರ್ಷಿ ಆದಿತ್ಯರಿಂದ ಇನ್ನೂ ಹೆಚ್ಚು ಪಡೆದು ವಾಜಸನೇಯ ವೇದ ಅಥವಾ ಶುಕ್ಲಯಜುರ್ವೇದವೆಂಬ ಹೆಸರಿಟ್ಟರು. ಯಜ್ಞ–ಯಾಗಾದಿಗಳಲ್ಲಿ ಈ ಮಂತ್ರಗಳನ್ನು ಉಪಯೋಗಿಸುತ್ತಿದ್ದುರಿಂದ ಮಂತ್ರಭಾಗ ಹೆಚ್ಚು ಇರುವುದರಿಂದ ಈ ವೇದಭಾಗಕ್ಕೆ ಶುಕ್ಲಯಜುರ್ವೇದವೆಂಬ ಹೆಸರು ಬಂದಿತು. ಇದನ್ನು ವಿವರಿಸಲು ಯಾಜ್ಞವಲ್ಕ್ಯರು ಶತಪಥ ಬ್ರಾಹ್ಮಣ ಎಂಬ ಗ್ರಂಥವನ್ನು ರಚಿಸಿದರು. ಅವರಿಂದ ಕಣ್ವ, ಮಾಧ್ಯಂದಿನ ಮುಂತಾದ ಋಷಿಗಳು ತಿಳಿದು ಪ್ರಚಾರಕ್ಕೆ ತಂದರು. ಕಾತ್ಯಾಯನ ಋಷಿಗಳು ಈ ವೇದಭಾಗಕ್ಕೆ ಗೃಹ್ಯಸೂತ್ರ, ಕಲ್ಪಸೂತ್ರ ಗ್ರಂಥಗಳನ್ನು ರಚಿಸಿ, ವೇದಗಂಗಾ ನದಿಯನ್ನು ಮುಂದುವರಿಸಿದರು.

ಮಹರ್ಷಿ ಪತಂಜಲಿಗಳು ತಮ್ಮ ಮಹಾಭಾಷ್ಯದ ಪಸ್ಪಶಾಹ್ನಿಕ ಎಂಬ ಅಧ್ಯಾಯದಲ್ಲಿ ವೇದಗಳ ಉಪ ವಿಭಾಗಗಳನ್ನು ಹೀಗೆ ಪ್ರಸ್ತಾಪಿಸಿದ್ದಾರೆ. **'ಚತ್ವಾರೋ ವೇದಾಃ ಸಾಂಗಾಃ ಸರಹಸಾಬಹುಧಾಭಿನ್ನಾ ಏಕಶತಮದ್ವರ್ಯು ಶಾಖಾಃ ಸಹಸ್ರವರ್ತ್ಮಾ ಸಾಮವೇದ ಏಕವಿಶಂಕತಿಧಾ ಬಾರ್ಹಸ್ವತ್ಸಂ ನಚದಾರ್ಥ್ವಣೋ ವೇದಃ'।**

ಅಂಗಗಳು ಹಾಗೂ ರಹಸ್ಯಗಳೊಡನೆ ಕೂಡಿದ ನಾಲ್ಕು ವೇದಗಳು ಬಹಳ ರೀತಿಯಲ್ಲಿ ಭಿನ್ನವಾಗಿವೆ. ಯಜುರ್ವೇದ ಶಾಖೆಗಳು 101, ಸಾಮವೇದ ಶಾಖೆ 1001, ಋಗ್ವೇದ 21 ಮತ್ತು ಅಥರ್ವವೇದ 9.. ಈ ಯಜುರ್ವೇದಕ್ಕೆ ಅಧ್ವರ್ಯವೇದವೆಂಬ ಹೆಸರಿದ್ದು ಶುಕ್ಲ ಮತ್ತು ಕೃಷ್ಣ ಎಂಬ ಎರಡು ಉಪವಿಭಾಗಗಳನ್ನು ಹೊಂದಿದೆ. ಶುಕ್ಲಯಜುರ್ವೇದಕ್ಕೆ 15 ಶಾಖೆಗಳು, ಕೃಷ್ಣಯಜುರ್ವೇದಕ್ಕೆ 86 ಶಾಖೆಗಳಿದ್ದು ಈಗ ಕಾಣ್ವ ಮತ್ತು ಮಾಧ್ಯಂದಿನ ಶಾಖೆಗಳು, ಕೃಷ್ಣಕ್ಕೆ ಮೈತ್ರೇಯರ್ಣೀಯ, ತೈತ್ತಿರೀಯ ಶಾಖೆಗಳು ಮಾತ್ರ ಉಪಲಬ್ದವಿದೆ. ಮೂಲಗ್ರಂಥದ ವ್ಯಾಖ್ಯಾನ ಪ್ರವಚನ ಮಾಡುವ ಸಂಹಿತೆಯೇ ಶಾಖೆ. ಈ ವ್ಯಾಖ್ಯಾನವನ್ನು ಪರಿವರ್ತನೆ, ಪ್ರಕ್ಷೇಪ ಮತ್ತು ನವೀನ ರಚನೆ ಎಂದು ಮೂರು ವಿಧದಲ್ಲಿ ವಿಂಗಡಿಸಬಹುದು. ದಕ್ಷಿಣ ಭಾಗದಲ್ಲಿ, ಮಹಾರಾಷ್ಟ್ರದಲ್ಲಿ ಪ್ರಸಿದ್ಧ ಹಾಗೂ ಪ್ರಚಲಿತವಾದದ್ದು ತೈತ್ತಿರೀಯ ಸಂಹಿತ, ಶುಕ್ಲವೆಂದರೆ ಶುದ್ಧ, ಅಮಿಶ್ರಿತವಾದದ್ದು ಮತ್ತು ಪರಿವರ್ತನೆ ಇಲ್ಲದ್ದು, ಕೃಷ್ಣವೆಂದರೆ ಅಶುದ್ಧ, ಮಿಶ್ರಿತ, ಪರಿವರ್ತನೆ ಹೊಂದಿದ್ದು ಎಂದರ್ಥ. ಶುಕ್ಲಯಜುರ್ವೇದದ ಎಲ್ಲ ಶಾಖೆಗಳೂ ಸೇರಿ 80 ಅಧ್ಯಾಯಗಳು ಹಾಗೂ 23,715 ಮಂತ್ರಗಳಿವೆ.

ಯಾಜ್ಞವಲ್ಕ್ಯರ ಪ್ರಕಾರ ಈ ವೇದಗಳು ಪರಬ್ರಹ್ಮನ ಉಸಿರು. ಹಾಗೆಯೇ ದೇವತೆಗಳು ಯಾಗವಿಧಿಯನ್ನು ಪೂರೈಸಿದರು. ಪರಬ್ರಹ್ಮನ ಬಗ್ಗೆ ಧ್ಯಾನ ಮಾಡಿದರು. ಇವುಗಳಿಂದ ಹೊರಹೊಮ್ಮಿದ್ದೇ ಋಗ್ವೇದ, ಯಜುರ್ವೇದ ಮುಂತಾದವು. (ಋಗ್ವೇದ ಪುರುಷ ಸೂಕ್ತ X–90, ಬೃಹದಾರಣ್ಯ ಉಪನಿಷತ್ II-III = (6) ಇನ್ನೊಂದು ಒಕ್ಕಣೆಯ ಪ್ರಕಾರ ಸೃಷ್ಟಿಕರ್ತ ಬ್ರಹ್ಮನು ಧ್ಯಾನದಲ್ಲಿ ತೊಡಗಿದಾಗ ಅವನ ಹೃದಯದಲ್ಲಿ ಅನಂತ ಶಬ್ದವಾದ ಓಂಕಾರವು ಸ್ಫುರಿಸಿತು. ಅದು ಎಲ್ಲ ಜ್ಞಾನಗಳ ವಿಚಾರಗಳ ಬೀಜರೂಪ. ಇದರೊಂದಿಗೆ ಸಂಸ್ಕೃತ ವರ್ಣಮಾಲೆಯ ಅಕ್ಷರಗಳು, ಶಬ್ದಗಳು ಸ್ಫುರಿಸಿದವು ಅವುಗಳ ಮೂಲಕ ಬ್ರಹ್ಮನಿಗೆ ವೇದಗಳ ಪ್ರಜ್ಞಾನವುಂಟಾಯಿತು. ಜಗತ್ತಿಗೆ ಇವುಗಳನ್ನು ಪ್ರಚುರಗೊಳಿಸಲು ತನ್ನ ಶಿಷ್ಯರಾದ ಮರೀಚಿ, ಅತ್ರಿ, ಅಂಗೀರಸ ಮುಂತಾದವರಿಗೆ ಬೋಧಿಸಿದನು. ಹೀಗೆ ವೇದಗಳು ಮನುಷ್ಯ ಕುಲಕ್ಕೆ ತಿಳಿದವು. ಗುರುವಿನ ಮೂಲಕವೇ ಈ ವೇದಗಳನ್ನು ತಿಳಿದುಕೊಳ್ಳಬೇಕೆಂದು ಯಾಜ್ಞವಲ್ಕ್ಯರ ಸೂಚನೆ, ಈ ಸಮಾವೇಶದ ಸಮಯದಲ್ಲಿ ವೇದಗಳು, ವಿಶೇಷವಾಗಿ ಶುಕ್ಲ ಯಜುರ್ವೇದದ ಬಗ್ಗೆ ನಾವೆಲ್ಲರೂ ಹೆಚ್ಚು ತಿಳಿದುಕೊಳ್ಳುವಂತಾಗಿದೆ.

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**

– ಸಂಪಾದಕರು


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ಶೃಂಗೇರಿಯಲ್ಲಿ ಐತಿಹಾಸಿಕ ಶುಕ್ಲ ಯಜುರ್ವೇದ ಮಹಾ ಸಮಾವೇಶ
# "ಐಕ್ಯಮತ್ಯ ಇದ್ದರೆ ಧರ್ಮದ ಉನ್ನತಿ"
## – ಪ.ಪೂ.ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳು



ಶರೀರ ಚೆನ್ನಾಗಿ ಕಾರ್ಯನಿರ್ವಹಿಸಬೇಕಾದರೆ ಪ್ರತಿ ಅಂಗವೂ ಬಲಿಷ್ಠವಾಗಿ ಆಗಬೇಕು. ಯಾವುದಾದರೂ ಒಂದು ಅಂಗದ ಬಲ ಕಡಿಮೆಯಾದರೆ ಅದು ಪರಿಪೂರ್ಣ ಶರೀರ ಎಂದು ಹೇಳಲು ಸಾಧ್ಯವಿಲ್ಲ. ಹಾಗೆಯೇ ಎಲ್ಲ ವಿಪ್ರ ಸಮುದಾಯದವರಲ್ಲಿ ಏಕತೆ ಇದ್ದರೆ ಮಾತ್ರ ಸನಾತನ ಧರ್ಮದ ಉನ್ನತಿ ಸಾಧ್ಯ ಎಂದು ಜಗದ್ಗುರು ಶ್ರೀ ವಿಧುಶೇಖರಭಾರತೀ ಸ್ವಾಮೀಜಿ ಹೇಳಿದರು.

ಶ್ರೀ ಶಾರದಾ ಶೃಂಗೇರಿ ಮಠದ ಆವರಣದಲ್ಲಿ ಭಾನುವಾರ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಶ್ರೀ ಶುಕ್ಲ ಯಜುರ್ವೇದ ಕ್ರಿಯಾ ಸಮಿತಿ ಆಯೋಜಿಸಿದ್ದ ಶ್ರೀ ಶುಕ್ಲ ಯಜುರ್ವೇದ ರಾಜ್ಯಮಟ್ಟದ ಸಮಾವೇಶದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸಮಾಜದ ಶ್ರೇಯೋಭಿವೃದ್ಧಿಗಾಗಿ ಬ್ರಾಹ್ಮಣ ಸಮುದಾಯ ದುಡಿಯಬೇಕು. ಸರ್ವರಲ್ಲೂ ಐಕ್ಯಮತ್ಯ ಇದ್ದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಸಮುದಾಯದಲ್ಲಿ ಯಾವುದೇ ಒಂದು ಅಂಗಕ್ಕೆ ತೊಂದರೆ ಆದಾಗ ಸರ್ವರೂ ಒಗ್ಗಟ್ಟಿನಿಂದ ದುಡಿಯಬೇಕು. ಯಾವುದೇ ಉತ್ತಮ ಧರ್ಮಕ್ಕೆ ಅದರದೇ ಆದ ಶ್ರೇಷ್ಠತೆ ಇದೆ. ಇಲ್ಲಿ ಹಲವಾರು ಜಾತಿಗಳಿದ್ದರೂ ಒಗ್ಗಟ್ಟು ಇಲ್ಲದೆ ಎಂದು ಜಗತ್ತಿಗೆ ತೋರಿಸಿಕೊಟ್ಟಿದ್ದು ಹಿಂದು ಧರ್ಮ ಮಾತ್ರ ಎಂದರು.

**ಮಾನವೀಯತೆ ಶ್ರೇಷ್ಠ ಧರ್ಮ :** ಸನಾತನ ಧರ್ಮದಲ್ಲಿ ಭಗವಂತನ ಹಲವಾರು ಸ್ವರೂಪವಿದೆ. ಧರ್ಮದ ಉನ್ನತಿಗಾಗಿ ನಾನಾ ರೂಪದಲ್ಲಿ ಭಗವಂತನು ಅವತಾರ ಎತ್ತಿದ್ದರೂ ಪರಮಾತ್ಮ ಒಬ್ಬನೇ ಎಂದು ಶ್ರೀ ಶಂಕರರು ಪ್ರತಿಪಾದಿಸಿದ್ದಾರೆ ಎಂದು ಶ್ರೀ ವಿಧುಶೇಖರಭಾರತೀ ಸ್ವಾಮೀಜಿ ತಿಳಿಸಿದರು. ಏಕತೆ ಇರುವುದು ಧರ್ಮದ ಉದ್ಧಾರಕ್ಕಾಗಿ ಮಾತ್ರ ಎಂಬ ಅರಿವು ಸರ್ವರಲ್ಲಿ ಇರಬೇಕು. ಸ್ವಧರ್ಮ ಆಚರಣೆ ಮಾಡಬೇಕು. ಮಾನವೀಯತೆ ಹಿಂದು ಧರ್ಮದ ಶ್ರೇಷ್ಠತೆ. ಅದನ್ನು ಜೀವನದಲ್ಲಿ ಅಳವಡಿಸಿಕೊಂಡು ಮತ್ತೊಬ್ಬರಿಗೆ ಸಹಕಾರ ನೀಡಬೇಕು.



ಸಮಾಜದ ದೃಢತೆಗಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು. ಆಗ ಜೀವನದ ಸಾರ್ಥಕವಾಗುತ್ತದೆ ಎಂದು ನುಡಿದರು

**ವೇದಗಳು ಬದುಕಿಗೆ ಮಾರ್ಗದರ್ಶಿ :** ಶೃಂಗೇರಿ ಸಮಾವೇಶ ಎಂದರೆ ಯಾತ್ರೆಯಲ್ಲ. ಸನಾತನ ಧರ್ಮಕ್ಕೆ ಅನ್ವಯವಾಗುವ ಸತ್‌ಸಂಪ್ರದಾಯಗಳನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳುವ ಸಲುವಾಗಿ ಸಮಾವೇಶ ಆಯೋಜಿಸಲಾಗುತ್ತಿದೆ ಎಂದು ಮೈಸೂರು ಭಾರತೀ ಯೋಗಧಾಮದ ಆಚಾರ್ಯ ಡಾ. ಶಂಕರನಾರಾಯಣ ಜೋಯಿಸ್ ತಿಳಿಸಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಶ್ರೀ ಶುಕ್ಲ ಯಜುರ್ವೇದ ಸಮ್ಮೇಳನ ಕ್ರಿಯಾ ಸಮಿತಿ ಶ್ರೀ ಮಠದ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಶ್ರೀ ಶುಕ್ಲ ಯಜುರ್ವೇದ ರಾಜ್ಯ ಮಟ್ಟದ ಸಮಾವೇಶ ಉದ್ಘಾಟನಾ ಭಾಷಣ ಮಾಡುತ್ತ ತಿಳಿಸಿದರು. ಮಹಾನ್ ಋಷಿಮುನಿಗಳು, ವಿದ್ವಾಂಸರು ವೇದಗಳಲ್ಲಿ ಜೀವನದ ಮಹತ್ವ ಮತ್ತು ಸಂದೇಶಗಳನ್ನು ಜನಸಾಮಾನ್ಯರಿಗೆ ತಿಳಿಸಿದ್ದಾರೆ. ಅದರಲ್ಲಿ ಕೃಷ್ಣ ಹಾಗೂ ಶುಕ್ಲ ವೇದಗಳು ಪ್ರಮುಖ. ವೇದ ಶಾಖೆಯ ಪರಂಪರೆ ಸಚ್ಚಿದಾನಂದ ಎಂದು ಕರೆಯಲಾಗುತ್ತದೆ. ಪರಮಾತ್ಮನ ಮೂಲ ಸ್ವರೂಪವನ್ನು ವೇದಗಳ ಮೂಲಕ ಅರಿಯಲು ಸಾಧ್ಯ ಎಂದರು. ವೇದಗಳು ಯೋಗಕ್ಕೆ ಸಿಗುವ ವಿದ್ಯೆ. ಮಾನವನ ಬದುಕಿಗೆ ಮಾರ್ಗದರ್ಶನ ನೀಡುವ ಅಮೂಲ್ಯ ಸಾಹಿತ್ಯ, ಜಗತ್ತಿನ



ಸಮಗ್ರ ಸಮುದಾಯಕ್ಕೆ ಉತ್ತಮ ಸಂದೇಶವನ್ನು ನೀಡುವ ವೇದಗಳಲ್ಲಿ ಉನ್ನತ ಆಧ್ಯಾತ್ಮಿಕ ಮೌಲ್ಯಗಳಿವೆ ಎಂದು ತಿಳಿಸಿದರು. ಜೀವನದ ವ್ಯಾಪಕತೆಯಲ್ಲಿ ಭೌತಿಕ, ದೈವಿಕ, ಆತ್ಮ ಎಂಬ ಕ್ಷೇತ್ರಗಳಿವೆ. ಮೂರು ಲೋಕಗಳೂ ನಮ್ಮ ನಾಡು ಎಂದು ಶ್ರೀ ಆದಿಶಂಕರರ ಬೋಧಿಸಿದ್ದಾರೆ ಎಂದರು.



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರು ಮಾತನಾಡಿ, ಮೇಲು–ಕೀಳು ಎಂದು ಭಾವಿಸಬಾರದು. ವೈದಿಕ ಧರ್ಮವನ್ನು ಪಾಲಿಸಬೇಕು. ಗುರುಗಳ ಬಗ್ಗೆ ಗೌರವ ಹೊಂದಿ ಯಾರೂ ಟೀಕೆ ಮಾಡಬಾರದು. ಆತ್ಮಾಭಿಮಾನ ಕಳೆದುಕೊಳ್ಳದೆ ಎಲ್ಲರಿಗೂ ಗೌರವ ನೀಡುವುದನ್ನು ಕಲಿಯಬೇಕು. ಇನ್ನಾದರೂ ಬ್ರಾಹ್ಮಣ ಸಮಾಜ ಎಚ್ಚೆತ್ತುಕೊಳ್ಳದಿದ್ದರೆ ಅಪಾಯ ನಿಶ್ಚಿತ ಎಂದು ಎಚ್ಚರಿಸಿದರು.

**ಪದ್ಮಶ್ರೀ ಪುರಸ್ಕೃತ ಡಾ. ವಿ. ಆರ್. ಗೌರಿಶಂಕರ್‌ರವರಿಗೆ ಅದ್ವೈತತತ್ತ್ವ ವಿಭೂಷಣ ಬಿರುದು :** ಶ್ರೀಮಠದ ಆಡಳಿತಾಧಿಕಾರಿ ಶ್ರೀ ವಿ.ಆರ್. ಗೌರಿಶಂಕರ್ ಅವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಹಾಗೂ ಶುಕ್ಲ ಯಜುರ್ವೇದ ಮಹಾ ಸಮಾವೇಶ ಸಮಿತಿ ವತಿಯಿಂದ **ಅದ್ವೈತತತ್ತ್ವ ವಿಭೂಷಣ** ಬಿರುದು ನೀಡಿ ಸನ್ಮಾನಿಸಲಾಯಿತು. ಶ್ರೀ ಮಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಗಣ್ಯರಿಗೆ ಗೌರವ ಸಮರ್ಪಣೆಯನ್ನು ಶ್ರೀಮಠದ ಆಡಳಿತಾಧಿಕಾರಿ ಡಾ.ವಿ.ಆರ್. ಗೌರಿಶಂಕರ್ ನೆರವೇರಿಸಿದರು. ಸಂಜೆ ಭಕ್ತಿಗೀತೆಗಳು ಕಥಕ್ ಹಾಗೂ ಭರತನಾಟ್ಯ ಪ್ರದರ್ಶನ ನಡೆಯಿತು. ಬೆಳಿಗ್ಗೆ ಪಟ್ಟಣದ ಮುಖ್ಯ ರಸ್ತೆಯಲ್ಲಿ ಶೋಭಾಯಾತ್ರೆ ನಡೆಯಿತು. ಶನಿವಾರ ವಿವಿಧ ಗೋಷ್ಠಿಗಳು ನಡೆದವು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಉಪಾಧ್ಯಕ್ಷ ಡಿ.ವಿ. ರಾಜೇಂದ್ರಪ್ರಸಾದ್, ಡಾ. ಬಿ.ಎಸ್. ರಾಘವೇಂದ್ರ ಭಟ್ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು. ಸಮ್ಮೇಳನದ ಸಂಚಾಲಕ ವೈ.ಎ. ಸುಧಾಕರ್ ಬಾಬು ಸಮಾವೇಶದ ನಿರ್ವಹಣೆಯ ಸಂಪೂರ್ಣ ಜವಾಬ್ದಾರಿ ವಹಿಸಿದ್ದರು.





ಸನಾತನ ಧರ್ಮದ ಪರಂಪರೆ, ವೇದಗಳ ಅಮೂಲ್ಯ ಸಂದೇಶವನ್ನು ಈ ರೀತಿಯ ಸಮಾವೇಶದ ಮೂಲಕ ಯುವಪೀಳಿಗೆಯ ಜನರಿಗೆ ತಲುಪಿಸಬೇಕು. ಆಗ ಮಾತ್ರ ರಾಷ್ಟ್ರದ ಭೌತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಪೂರಕ ವಾತಾವರಣ ಸೃಷ್ಟಿಯಾಗಲು ಸಾಧ್ಯ.

**ಡಾ. ವಿ.ಆರ್. ಗೌರಿಶಂಕರ್**
ಆಡಳಿತಾಧಿಕಾರಿ, ಶೃಂಗೇರಿ ಶ್ರೀ ಶಾರದ ಪೀಠ

ಮಹಾಸಭೆಯ ಅಧ್ಯಕ್ಷರಾದ ಅಶೋಕ್ ಹಾರನಹಳ್ಳಿಯವರ ನೇತೃತ್ವದಲ್ಲಿ ನಡೆದ ಈ ಮಹಾ ಸಮಾವೇಶ ಸಂಚಾಲಕರು ಹಾಗೂ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಸುಧಾಕರಬಾಬು, ರಾಜೇಂದ್ರಪ್ರಸಾದ್ ಇವರ ಅವಿರತ ಪರಿಶ್ರಮದಿಂದ ಸಂಪೂರ್ಣ ಯಶಸ್ವಿಯಾಗಿ ಸಂಪನ್ನವಾಗಲು ಸಾಧ್ಯವಾಯಿತು. ಇವರು ಹಾಗೂ ಸಮಾವೇಶದ ಸಮಿತಿ ಎಲ್ಲಾ ಸದಸ್ಯರು ಅಭಿನಂದನಾರ್ಹರು.





# ಶ್ರೀ ಶುಕ್ಲ ಯಜುರ್ವೇದ ಸಮ್ಮೇಳನ ಕ್ರಿಯಾ ಸಮಿತಿ
# ಶ್ರೀ ಶುಕ್ಲ ಯಜುರ್ವೇದ ರಾಜ್ಯಮಟ್ಟದ ಸಮಾವೇಶ- 2023

ಮನುಷ್ಯನ ಬದುಕಿನ ಹೋರಾಟದ ಜೊತೆ ಜೊತೆಯಲ್ಲೇ ತನ್ನ ಸಮಾಜಕ್ಕೆ. ಅವಶ್ಯವಾದ ಆರೋಗ್ಯಕರ ಸೇವೆ, ಪರೋಪಕಾರ, ಬದ್ದತಾಪೂರ್ಣ ಚಟುವಟಿಕೆ ಮುಂತಾದ ಕ್ರಿಯೆಗಳಲ್ಲಿ ತೊಡಗಿಕೊಳ್ಳಬೇಕಾದದು ಧರ್ಮ. ನಮ್ಮ ಸನಾತನ ಪರಂಪರೆಯನ್ನು ಗಮನಿಸಿದಾಗ ಋಷಿ ಮುನಿಗಳು, ಆಚಾರ್ಯರು, ಪಂಡಿತರು ಇಂತಹ ನಿಸ್ವಾರ್ಥ ಕ್ರಿಯೆಗಳಲ್ಲಿ ತೊಡಗಿಕೊಂಡದ್ದನ್ನು ನೋಡಬಹುದು. ಅದರಲ್ಲಿಯೂ, ಶುಕ್ಲಯಜುರ್ವೇದವನ್ನು ಸಮಾಜಕ್ಕೆ ನೀಡಿದ ಮಹರ್ಷಿಯಾಜ್ಞ್ಯವಲ್ಕರು ಹಾಗೂ ಅದ್ವೈತ ಸಿದ್ಧಾಂತದ ಪ್ರತಿಪಾದಕರಾದ ಶ್ರೀ ಶಂಕರ ಭಗವತ್ಪಾದರು ಆಧ್ಯಾತ್ಮಿಕ ನೆಲೆಯಲ್ಲಿ ಸಮಾಜಕ್ಕೆ ನೀಡಿದ ಕೊಡುಗೆ ಅನನ್ಯ, ಅಪಾರ.

ಶ್ರೀ ಶಂಕರ ಭಗವತ್ಪಾದರು ಅದ್ವೈತ ತತ್ವವನ್ನು ಸಾರುವ ಮೂಲಕ ನೀಡಿದ ಜ್ಞಾನಬೋಧೆಯನ್ನು ಸಮಾಜದ ಜನರಿಗೆ ತಲುಪಿಸಲು ಸಾಕ್ಷತ್ ಶಿವನ ಅಪ್ಪಣೆಯ ಮೇರೆಗೆ ಭಾರತದಲ್ಲಿ ಸಾಲ್ಕು ಶ್ರೀಮಠಗಳನ್ನು ಸ್ಥಾಪಿಸಿದರು. ಶೃಂಗೇರಿಯಲ್ಲಿ ಬಹಳ ಶಕ್ತಿಯುತವಾದ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದದ ಪೀಠವನ್ನು ಸ್ಥಾಪಿಸಿದ ಶ್ರೀ ಶಂಕರರು, ಈ ಪೀಠಕ್ಕೆ ಉತ್ತರ ಭಾರತದಲ್ಲಿ ಪ್ರಖ್ಯಾತರಾಗಿದ್ದ ಶುಕ್ಲಯಜುರ್ವೇದಾಧ್ಯಾಯಿ ಪಂಡಿತೋತ್ತಮರಾದ ಮಂಡನಮಿಶ್ರರನ್ನು ಕರೆತಂದು, ಶ್ರೀ ಶ್ರೀ ಸುರೇಶ್ವರಾಚಾರ್ಯರೆಂಬ ನಾಮಧೇಯದಿಂದ ಪ್ರಪ್ರಥಮ ಪೀಠಾಧಿಪತಿಗಳನ್ನಾಗಿ ನೇಮಿಸಿ, ಧರ್ಮೋತ್ಥಾನದ ಕಾರ್ಯಗಳಲ್ಲಿ ಮಗ್ನರಾಗುವಂತೆ ವ್ಯವಸ್ಥೆ ಮಾಡಿದರು.

ಇದೆಲ್ಲವನ್ನೂ ಅವಲೋಕಿಸಿದ ಶುಕ್ಲಯಜುರ್ವೇದೀಯದಾವ ನಾವುಗಳು ಹಲವಾರು ವರ್ಷಗಳಿಂದ ಜಿಜ್ಞಾಸೆಗೆ ಒಳಗಾದೆ. ಶುಕ್ಲಯಜುರ್ವೇದಿಯರಾದ ಶ್ರೀ ಶ್ರೀ ಸುರೇಶ್ವರಾಚಾರ್ಯರು ಶೃಂಗೇರಿ ಪೀಠದ ಪ್ರಪ್ರಥಮ ಪೀಠಾಧಿಪತಿಗಳಾಗಿ. ಮಠವನ್ನು ಮುನ್ನಡೆಸಿದ ಕಾರಣದಿಂದ ಶುಕ್ಲಯಜುರ್ವೇದಿಯರ ನೆಲೆ ಶೃಂಗೇರಿ ಆಗಬೇಕಿತಲ್ಲವೇ ಎಂಬುದೇ ನಮ್ಮ ಆ ಜಿಜ್ಞಾಸೆಯಾಗಿತ್ತು. ಈ ವಿಷಯವನ್ನು ನಮ್ಮ ಬಾಂಧವರ ಗಮನಕ್ಕೆ, ತಂದನಂತರ, ಕಳೆದ ಆರು ವರ್ಷಗಳಿಂದ ಶೃಂಗೇರಿ ಮಠದ ಶ್ರೀಗುರುದ್ವಯರು, ಆಡಳಿತಾಧಿಕಾರಿಗಳೊಂದಿಗೆ ಚರ್ಚಿಸುತ್ತಾ ಬಂದೆವು.

ಮಠದ ಆಡಳಿತಾಧಿಕಾರಿಗಳಾದ ಅದ್ವೈತ ತತ್ತ್ವ ವಿಭೂಷಣ, ಪದ್ಮಶ್ರೀ ಗೌರಿಶಂಕರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಜನಪ್ರಿಯ ಹಾಗೂ ಅಭಿವೃದ್ಧಿಪರ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರ ಒತ್ತಾಸೆ, ಸಹಕಾರದಿಂದ ಈ ವಿಷಯ ಶ್ರೀಗುರುದ್ವಯರ ಬಳಿ ಚರ್ಚೆಗೊಂಡಿತು. ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಹಾಗೂ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಶೃಂಗೇರಿ ಶಾರದಾಂಬೆಯ ನೆಲೆಯಲ್ಲಿ, ದೇವಸ್ಥಾನದ ಪ್ರಾಂಗಣದಲ್ಲಿ ರಾಜ್ಯಮಟ್ಟದ ಶುಕ್ಲಯಜುರ್ವೇದಿಯ ಸಮ್ಮೇಳನ ನಡೆಸಲು ಸಮ್ಮತಿ ನೀಡಿದರು.

ಬಹಳ ಸಂಭ್ರಮದಿಂದಲೇ ನಾವು ಕಾರ್ಯಕ್ರಮದ ವ್ಯವಸ್ಥೆಯಲ್ಲಿ ತೊಡಗಿದಾಗ, ನಮ್ಮ ಮಠ ಬಾಂಧವರೇ ಆದ ಹಲವರು ತೊಡಕುಂಟು ಮಾಡಿದಲ್ಲಿ ಮಹಾಸ್ವಾಮಿಗಳ ಅಚಲ ನಿರ್ಧಾರ, ಶ್ರೀ ಗೌರಿಶಂಕರ್ ಮತ್ತು ಶ್ರೀ ಅಶೋಕ್ ಹಾರನಹಳ್ಳಿ ಅವರ ತುಂಬು ಹೃದಯದ ಒತ್ತಾಸೆಯಿಂದ ಎಲ್ಲವೂ ಸುಗಮವಾಗಿ ಹೂವು ಎತ್ತಿದಷ್ಟು ಹಗುರವಾಗಿ ಕಾರ್ಯಕ್ರಮ ನಡೆಯಿತಲ್ಲದೆ, ಸುಮಾರು 3 ರಿಂದ 4 ಸಾವಿರ ಜನರು ಕೂಡಿದ ಒಂದು ಬೃಹತ್ ಸಮಾವೇಶ ಏರ್ಪಡಲು ಸಾಧ್ಯವಾಯಿತು. ಮೊದಲ ಬಾರಿಗೆ ಶುಕ್ಲಯಜುರ್ವೇದಿ ಬ್ರಾಹ್ಮಣರು ಶೃಂಗೇರಿಯಲ್ಲಿ ಅಪಾರ ಸಂಖ್ಯೆಯಲ್ಲಿ ಧನ್ಯಮಿಲನಗೊಂಡು ತಮ್ಮ ಮೂಲ ನೆಲೆಯ ಸೆಲೆಯನ್ನು ಕಂಡುಕೊಂಡರು. ನಮ್ಮ ಶಾಖಾ ಬಾಂಧವರಲ್ಲಿದ್ದ ಕೀಳರಿಮೆ, ತಾರತಮ್ಯಗಳ ನಿವಾರಣೆ ಆಯಿತು. ಶ್ರೀಗಳ ಅಣಿಮುತ್ತಿನಂತೆ ನಾವು ಇನ್ನು ಮುಂದೆ ಶಂಕರಮಠದವರೆಂದು ಹೇಳಿಕೊಳ್ಳುವ ಸ್ವಾತಂತ್ರ್ಯ ದೊರೆಯಿತು.

ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪಾದಾರವಿಂದಕ್ಕೆ ನನ್ನ ಭಕ್ತಿಪೂರ್ವಕ ಕೋಟಿ ಕೋಟಿ ನಮಸ್ಕಾರಗಳನ್ನು ಅರುಹುತ್ತೇನೆ. ಮಠದ ಆಡಳಿತಾಧಿಕಾರಿಗಳಾದ ಅದ್ವೈತತತ್ತ್ವವಿಭೂಷಣ ಶ್ರೀ ಗೌರಿಶಂಕರ್ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಬೆಯ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರುಗಳಿಗೆ ಶಿರಬಾಗಿ ನಮಸ್ಕರಿಸುತ್ತೇನೆ. ಕಾರ್ಯಕ್ರಮಕ್ಕೆ ಆಗಮಿಸಿ, ತಮ್ಮ ಬೆಂಬಲ ನೀಡಿದ ಅಗಡಿ ಆನಂದವನದ ಶ್ರೀ ಗುರುದತ್ತ ಚಕ್ರವರ್ತಿ ಮೂರ್ತಿಯವರು, ಸವದತ್ತಿಯ ಚಿದಂಬರ ವಾರಕರಿ ಸಂಸ್ಥಾನದ ರಾಜಾರಾಮ ಮಠದ ಶ್ರೀ ಗಂಗಾಧರ ದೀಕ್ಷಿತರು, ಸಿಂಧಗಿ ಭೀಮಾಶಂಕರ ಮಠದ ಶ್ರೀ ದತ್ತಪ್ಪಯ್ಯ ಸ್ವಾಮಿಗಳಿಗೆ ನನ್ನ ಪ್ರಣಾಮಗಳು ಸಲ್ಲುತ್ತದೆ. ಶೃಂಗೇರಿ ಮಠದಲ್ಲಿ ಎರಡು ದಿನಗಳ ಕಾಲ ಊಟೋಪಚಾರ, ವಸತಿ ವ್ಯವಸ್ಥೆ ಮಾಡಿದ ಅಧಿಕಾರಿಗಳ ವೃಂದಕ್ಕೆ ನಾನು ಆಭಾರಿ.

ಈ ಸಮಾವೇಶ ಯಶಸ್ವಿಯಾಗಲು ನನ್ನೊಂದಿಗೆ ಎಡಬಿಡದೆ ನಿರಂತರ ಶ್ರಮದಲ್ಲಿ ತೊಡಗಿದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಉಪಾಧ್ಯಕರಾದ ಡಿ.ವಿ.ರಾಜೇಂದ್ರ ಪ್ರಸಾದ್, ರಾಜ್ಯದ ವಿವಿಧ ನಗರ, ಪಟ್ಟಣ, ಗ್ರಾಮಗಳ ಸಂಘಟನೆಗಳ, ಮಹಿಳಾ ಮಂಡಳಿಗಳ ಪ್ರತಿನಿಧಿಗಳು, ಶ್ರೀ ಶುಕ್ಲಯಜುರ್ವೇದ ಸಮ್ಮೇಳನ ಕ್ರಿಯಾ ಸಮಿತಿಯ ಪದಾಧಿಕಾರಿಗಳಿಗೆ ನನ್ನ ಅನಂತ ವಂದನೆಗಳು. ಕಾರ್ಯಕ್ರಮಕ್ಕೆ ಒಂದು ತಿಂಗಳು ಮೊದಲಿಂದಲೇ ಸಂಪೂರ್ಣವಾಗಿ ತೊಡಗಿಕೊಂಡ ಸ್ನೇಹಿತರು, ಬಂಧು ಬಾಂಧವರು, ಹಿತೈಷಿಗಳು, ಅಭಿಮಾನಿಗಳು ಸರ್ವರಿಗೂ ಅನಂತಾನಂತ ನಮಸ್ಕಾರಗಳು.

**ವೈ.ಎ.ಸುಧಾಕರ್ ಬಾಬು**
ಉಪಾಧ್ಯಕರು, ಅಖಿಲ ಕರ್ನಾಟಕ ಮಹಾಸಭೆ ಹಾಗೂ
ಸಂಚಾಲಕರು, ಶ್ರೀ ಶುಕ್ಲಯಜುರ್ವೇದ ಸಮ್ಮೇಳನ ಕ್ರಿಯಾ ಸಮಿತಿ

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.), ಬೆಂಗಳೂರು.
## ಮಹಾಸಭೆ ನೂತನ ಪದಾಧಿಕಾರಿಗಳು – 2023–24

| ಅಧ್ಯಕ್ಷರು | ಪ್ರಧಾನ ಕಾರ್ಯದರ್ಶಿ | ಖಜಾಂಚಿ |
|---|---|---|
| ಶ್ರೀ ಅಶೋಕ ಹಾರನಹಳ್ಳಿ<br>ಬೆಂಗಳೂರು–560 094. | ಶ್ರೀ ಶ್ರೀಧರಮೂರ್ತಿ ಎಸ್.<br>ಬೆಂಗಳೂರು–560070.<br>9980203934 | ಶ್ರೀ ವೆಂಕಟೇಶ ಎಸ್. ನಾಯಕ್<br>ಬೆಂಗಳೂರು–560070<br>9845051885 / 080–26718862 |

## ಉಪಾಧ್ಯಕ್ಷರು

| | | | | | |
|---|---|---|---|---|---|
| 1 | **ಶ್ರೀ ಸಿ.ಕೆ. ರಾಮಮೂರ್ತಿ**<br>ಬೆಂಗಳೂರು–560 011.<br>98450–00689 | 10 | **ಡಾ॥ ವಿ.ಹನುಮಂತ ಡಂಬಲ್**<br>ಧಾರವಾಡ–580004<br>9448148596 | 19 | ಶ್ರೀ ಶ್ರೀನಾಥ್. ಬಿ.ಆರ್.<br>ಚಿಂತಾಮಣಿ–563125 ಚಿಕ್ಕಬಳ್ಳಾಪುರ ಜಿಲ್ಲೆ.<br>9845051623 |
| 2 | **ಶ್ರೀ ಹೆಚ್.ಆರ್. ಸುರೇಶ್**<br>ಬೆಂಗಳೂರು–560004.<br>9448040584 | 11 | **ವೇ॥ಬ್ರ॥ ಡಾ. ಭಾನುಪ್ರಕಾಶ್ ಶರ್ಮ**<br>ಶ್ರೀರಂಗಪಟ್ಟಣ–571 438<br>ಮಂಡ್ಯ ಜಿಲ್ಲೆ, 98454–09335 | 20 | ಶ್ರೀ ಎಂ.ಆರ್. ಶಿವಶಂಕರ್<br>ಬೆಂಗಳೂರು–560 061.<br>94484–84430/ 26390999 |
| 3 | **ಡಾ॥ ಬಿ.ಎಸ್. ರಾಘವೇಂದ್ರ ಭಟ್**<br>ಬೆಂಗಳೂರು–560086.<br>94481–74172 | 12 | **ಶ್ರೀ ಎ.ಸಿ. ಗೋಪಾಲ್**<br>ಹುಬ್ಬಳ್ಳಿ–580023.<br>9448054306 | 21 | ಮಹೇಶ್ ಕಜೆ<br>ಪುತ್ತೂರು–574201, ದ.ಕ. ಜಿಲ್ಲೆ<br>9448111062 / 08251–237788 |
| 4 | **ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ**<br>ಬೆಂಗಳೂರು–560070<br>9845030460 | 13 | **ಡಾ॥ ಆನಂದತೀರ್ಥ ಫಡ್ನೀಸ್**<br>ರಾಯಚೂರು–584 103.<br>94486–95874 | 22 | ಶ್ರೀಮತಿ ಸಾವಿತ್ರಿ ರಮೇಶ್<br>ಬೆಂಗಳೂರು–560062.<br>99007–88954 |
| 5 | **ಶ್ರೀ ನಟರಾಜ ಭಾಗವತ್**<br>ಶಿವಮೊಗ್ಗ–577 204<br>9448146175 | 14 | **ಶ್ರೀ ಜಿ.ಎಂ. ಹೆಗಡೆ,**<br>ಚಾಮರಾಜನಗರ<br>9901944688 | 23 | ಶ್ರೀ ನಟರಾಜ ಜೋಯಿಸ್<br>ಮೈಸೂರು–570023.<br>9880733238 |
| 6 | **ಶ್ರೀ ಡಿ.ವಿ. ರಾಜೇಂದ್ರಪ್ರಸಾದ್**<br>ಬೆಂಗಳೂರು–56050<br>98440–92075 | 15 | **ಡಾ॥ ಗಿರೀಶ್ ಆರ್. ಮಸೂರಕರ್**<br>ಬಾಗಲಕೋಟೆ–587101.<br>9480149169 / 9448003286 | 24 | ಶ್ರೀ ಪಿ.ಸಿ. ರಾವ್<br>ಬೆಂಗಳೂರು–560004<br>9844494630/ 9844494636 |
| 7 | **ಶ್ರೀ ಶಶಿಭೂಷಣ್ ಹೆಗಡೆ**<br>ಸಿದ್ದಾಪುರ. ಉತ್ತರ ಕರ್ನಾಟಕ–581355<br>9845548588 | 16 | **ಶ್ರೀಮತಿ ಪುಷ್ಪ ಅಯ್ಯಂಗಾರ್**<br>ಮೈಸೂರು–570009<br>9480166656 | 25 | ಡಾ॥ ಮುರಳೀಧರ್<br>ಬೆಂಗಳೂರು<br>9341220446 |
| 8 | **ಶ್ರೀ ರವೀಂದ್ರ ಶ್ರೀಪಾದ ಮುತಾಲಿಕ್**<br>ಬೆಳಗಾವಿ–590006<br>9449871361 | 17 | **ಶ್ರೀ ಕೃಷ್ಣಾನಂದ ಛಾತ್ರ**<br>ಕುಂದಾಪುರ, ಉಡುಪಿ ಜಿಲ್ಲೆ–576 201.<br>9740227777 / 9449227777 | 26 | ಶ್ರೀ ನಂ.ಶ್ರೀಕಂಠಕುಮಾರ್<br>ಮೈಸೂರು–570 023.<br>9481067333 |
| 9 | **ಶ್ರೀ ಕೆ.ಎನ್. ಛಾಯಾಪತಿ**<br>ಬೆಂಗಳೂರು –560004<br>94480 27744 | 18 | **ಶ್ರೀ ವೈ.ಎನ್. ಸುಧಾಕರ ಬಾಬು**<br>ಬೆಂಗಳೂರು–560050.<br>9448161917 | 27 | ಡಾ॥ ಮಹಾಬಲ<br>ಕೊಪ್ಪ–577126, ಚಿಕ್ಕಮಗಳೂರು ಜಿಲ್ಲೆ<br>9448275213 |

# ಸಂಘಟನಾ ಕಾರ್ಯದರ್ಶಿಗಳು

| | | | | | |
|---|---|---|---|---|---|
| 1 | ಶ್ರೀ ಕಾರ್ತಿಕ್ ಎಸ್. ಬಾಪಟ್<br>ಬೆಂಗಳೂರು–560072.<br>8073447457 | 10 | ಶ್ರೀಮತಿ ಪ್ರಿಯ ಪುರಾಣಿಕ್<br>ಬೆಳಗಾಂ–593336<br>9845636523 / 9845636523 | 19 | ಶ್ರೀ ವೆಂಕಟೇಶ್ ದ್ವಾರಕನಾಥ್<br>ಬೆಂಗಳೂರು–560 061.<br>98450–38669 |
| 2 | ಶ್ರೀ ಹೆಚ್.ವಿ. ಸುಬ್ಬರಾವ್<br>ಬೆಂಗಳೂರು–560072.<br>9449002020 | 11 | ಶ್ರೀಮತಿ ಎಸ್. ಶಾಂತಾಕುಮಾರಿ<br>ಚಿಕ್ಕಮಗಳೂರು–577101<br>9480587160 | 20 | ಶ್ರೀ ಡಿ.ಎನ್. ಸುರೇಶ್<br>ಬೆಂಗಳೂರು–5600050.<br>9449156660 / 7353776660 |
| 3 | ಶ್ರೀ ವಿಜಯೇಂದ್ರ ಗುರುನಾಥ<br>ನಾಡಜೋಶಿ, ಹುಬ್ಬಳ್ಳಿ–580021<br>9482517779 | 12 | ಶ್ರೀ ಕೃಷ್ಣಸ್ವಾಮಿ ಸುಬ್ಬರಾವ್<br>ಬೆಂಗಳೂರು–560085<br>9880642353 | 21 | ಶ್ರೀ ವಿಶ್ವನಾಥ್ ಎನ್.ಎನ್.<br>ಬೆಂಗಳೂರು–560085.<br>9731900005 |
| 4 | ಶ್ರೀ ಶ್ರೀಪಾದ ರಾಯ್ಸದ್<br>ಉತ್ತರ ಕನ್ನಡ ಜಿಲ್ಲೆ.<br>9448689165 | 13 | ಶ್ರೀಮತಿ ಉಮ ಸೋಮಯಾಜಿ<br>ಮಂಗಳೂರು ತಾಲ್ಲೂಕು–574143<br>9481762922 | 22 | ಶ್ರೀ ಪೊಳಲಿ ಗಿರಿಪ್ರಕಾಶ್ ತಂತ್ರಿ<br>ದ.ಕ. ಜಿಲ್ಲೆ.–574143<br>9845559069 |
| 5 | ಶ್ರೀ ಹೆಚ್.ಎಸ್. ರಾಘವೇಂದ್ರ<br>ತುಮಕೂರು–572101.<br>9739508838 | 14 | ಶ್ರೀ ಆರ್. ರವಿಕುಮಾರ್<br>ಬೆಂಗಳೂರು–560085<br>9110295162 | 23 | ಶ್ರೀ ಹೆಚ್.ಸಿ. ಪುರುಷೋತ್ತಮ<br>ಬೆಂಗಳೂರು–560070.<br>8073447457 |
| 6 | ಶ್ರೀ ವಿಲಾಸ್ ಜೋಶಿ<br>ಬೆಳಗಾಂ–593336<br>8762996923 | 15 | ಶ್ರೀ ಹೆಚ್.ಆರ್. ಗಣೇಶ್<br>ಉತ್ತರ ಕನ್ನಡ ಜಿಲ್ಲೆ–581334.<br>9632331799 | 24 | ಶ್ರೀ ಎನ್.ಎಸ್.ನರಸಿಂಹಮೂರ್ತಿ<br>ಬೆಂಗಳೂರು–560 085.<br>94496–10740 / 26695678 |
| 7 | ಶ್ರೀ ಮುರಳೀಧರ ರಾವ್<br>ರಾಯಚೂರು–584 103.<br>7411687808 | 16 | ಶ್ರೀ ವೆಂಕಟೇಶ್ ಮೊರ್ಕಂಡಿಕರ್<br>ಬೀದರ್–585401.<br>9035860776 / 934276076 | 25 | ಶ್ರೀ ಜಯಸಿಂಹ ಶತ್ರುಘ್ನ<br>ಬೆಂಗಳೂರು–560082.<br>9885557995 |
| 8 | ಶ್ರೀ ಮುರಳಿಧರ<br>ಕೆ.ಆರ್.ಪುರಂ, ಬೆಂಗಳೂರು–560036.<br>9341890099 | 17 | ಶ್ರೀ ಸುಬ್ರಹ್ಮಣ್ಯ ಟಿ.ಎಲ್.<br>ಬೆಂಗಳೂರು–560085<br>9986117352. | 26 | ಶ್ರೀ ಪ್ರಕಾಶ್ ರಾವ್<br>ಬಳ್ಳಾರಿ.<br>9448006398 |
| 9 | ಶ್ರೀ ಹೆಚ್.ಎಂ. ಹಿರಿಯಣ್ಣಯ್ಯ<br>ಬೆಂಗಳೂರು–560061<br>9901924474 | 18 | ಶ್ರೀ ರಾಘವೇಂದ್ರ ಕುಲಕರ್ಣಿ<br>ಗುಲ್ಬರ್ಗಾ–585101<br>9880736060 | | |

# ವಲಯ ಉಪಾಧ್ಯಕ್ಷರು

| | | | |
|---|---|---|---|
| 1 | ಶ್ರೀ ಟಿ.ಹೆಚ್.ಚಂದ್ರಶೇಖರ್<br>ಹಾಸನ–573 201.<br>6361794923 / 9448346481 | 5 | ಶ್ರೀ ಹರಿ ಅರವಿಂದರಾವ್<br>ಗೋಲ್‌ಸಂಗಿ<br>ವಿಜಯಪುರ–586101<br>9448142210 |
| 2 | ಶ್ರೀ ಶ್ರೀಧರ್ ಸರಾಫ್<br>ಕಲ್ಬುರ್ಗಿ–585102.<br>9449052900 | 6 | ಶ್ರೀಮತಿ ನಾಗಲಕ್ಷ್ಮಿ ಕೆ. ರಾವ್<br>ಬೆಂಗಳೂರು–560010.<br>9845625899 |
| 3 | ಡಾ॥ ಎಂ.ಸಿ. ಶಶಿಕಾಂತ್<br>ದಾವಣಗೆರೆ.–577002<br>9742377661 | | |
| 4 | ಶ್ರೀ ಶ್ರೀಕರ ದಾಮ್ಲೆ<br>ಮಂಗಳೂರು–575007<br>9845082209 | 7 | ಶ್ರೀಕಾಂತ್<br>ಹಾವೇರಿ |

# ಆಂತರಿಕ ಲೆಕ್ಕಪರಿಶೋಧಕರು

| | |
|---|---|
| 1 | ಶ್ರೀ ಕೆ. ನಾರಾಯಣ್<br>ಬೆಂಗಳೂರು–560061<br>9845004707 |

# ಸಹ ಕಾರ್ಯದರ್ಶಿಗಳು

| | | | | | |
|---|---|---|---|---|---|
| 1 | ಶ್ರೀ ಕುಮಾರ್ ಟಿ.ಎಲ್.ಎಸ್.<br>ಬೆಂಗಳೂರು–560050.<br>9448508080 | 9 | ಶ್ರೀ ರಾಘವೇಂದ್ರ ಚೂಡಾಮಣಿ<br>ರಾಯಚೂರು–584101<br>9448255184 | 17 | ಶ್ರೀ ಹೆಚ್.ವಿ. ನಾಗರಾಜ್<br>ಚಾಮರಾಜನಗರ–571313 |
| 2 | ಶ್ರೀ ಶ್ರೀನಿವಾಸರಾವ್ ಎಸ್.ಎಸ್.<br>ಬೆಂಗಳೂರು–560032<br>93412–42235 | 10 | ಶ್ರೀ ಟಿ.ಕೆ. ಹಿರಿಯಣ್ಣ ಸ್ವಾಮಿ<br>ಮಾಗಡಿ–562120, ರಾಮನಗರ ಜಿಲ್ಲೆ.<br>9448793967 | 18 | ಶ್ರೀ ಪುಟ್ಟಣ್ಣ<br>ಬೆಂಗಳೂರು–560062<br>9880266141 |
| 3 | ಶ್ರೀ ಎನ್.ಎಸ್. ಗೋಪಾಲ್,<br>ಹಾಸನ –573201<br>9448006200 | 11 | ಶ್ರೀ ಜಯಸಿಂಹ,<br>ಮೈಸೂರು–570007<br>9916021886 | 19 | ಶ್ರೀ ರಮೇಶ್ ಟಿ.ಎನ್. (ವಕೀಲರು)<br>ಬೆಂಗಳೂರು–560070.<br>9945519208 |
| 4 | ಶ್ರೀ ಪ್ರಕಾಶ್ ಪಿ.ಆರ್.<br>ಬೆಂಗಳೂರು–560 011.<br>94487–33298 | 12 | ಡಾ॥ ಅಂಜನ್ ಕುಮಾರ್ ಶರ್ಮ<br>ಮಾಲುರು ಟೌನ್, ಕೋಲಾರ–563130<br>9448427329/90356311985 | 20 | ಶ್ರೀ ಚಂದ್ರಶೇಖರ್<br>ಬೆಂಗಳೂರು–56050.<br>9448162030 |
| 5 | ಶ್ರೀ ಅನಂತ ಕೃಷ್ಣ ಶರ್ಮ<br>ಬೆಂಗಳೂರು–560097<br>9886723218 | 13 | ಶ್ರೀ ರಾಜೇಶ್ ಪ್ರಸಾದ್<br>ಬೆಂಗಳೂರು–560050<br>94482–72359 | 21 | ಶ್ರೀ ವಿನಾಯಕ ಭಟ್ ಬಿ.<br>ಬೆಂಗಳೂರು–560032 |
| 6 | ಶ್ರೀ ಅನಂತರಾಮ್ ಸಿ.ಆರ್.<br>ಬೆಂಗಳೂರು–560085.<br>9845315999 | 14 | ಶ್ರೀ ದ್ವಾರಕನಾಥ ಕೃಷ್ಣಮೂರ್ತಿ<br>ಬೆಂಗಳೂರು–560070.<br>9449054816 | 22 | ಶ್ರೀ ಸತೀಶ್ಚಂದ್ರ ಕುಲಕರ್ಣಿ<br>ವಿಜಯಪುರ, ಬಿಜಾಪುರ ಜಿಲ್ಲೆ 586103<br>8282820182 / 9902828582 |
| 7 | ಶ್ರೀ ಎನ್. ಕೆ. ಅಶ್ವಿನ್<br>ಚಿಕ್ಕಮಗಳೂರು–577101.<br>9886872205 | 15 | ಶ್ರೀ ಚೇತನ ಬಿ ದತ್ತಾತ್ರೇಯ<br>ಸುರತ್ಕಲ್, ಮಂಗಳೂರು.<br>9880352388 | 23 | ಶ್ರೀಮತಿ ಕಾತ್ಯಾಯಿನಿ ರಾವ್<br>ಮಂಗಳೂರು–575004 |
| 8 | ಶ್ರೀ ಶಂಕರ್‌ಪ್ರಸಾದ್. ಹೆಚ್.ಎಸ್.<br>ಬೆಂಗಳೂರು–560050.<br>9845301382 / 8073587447 | 16 | ಶ್ರೀ ಎಂ.ಆರ್. ಮಂಜುನಾಥ್<br>ಬೆಂಗಳೂರು–560 092.<br>9449902364 | | |

## ಮಹಿಳಾ ವಿಭಾಗದ ರಾಜ್ಯ ಸಂಚಾಲಕಿ

| | |
|---|---|
| 1 | ಶ್ರೀಮತಿ ಶುಭಮಂಗಳ ಸುನೀಲ್<br>ಬೆಂಗಳೂರು – 560050.<br>9945683265 |

## ಯುವ ವಿಭಾಗದ ರಾಜ್ಯ ಸಂಚಾಲಕ

| | |
|---|---|
| 1 | ಶ್ರೀ ಸಂದೀಪ್ ರವಿ<br>ಬೆಂಗಳೂರು – 560054<br>9482089079 |

॥ ಶ್ರೀವಿದ್ಯಾಶಂಕರೋ ವಿಜಯತೇ ॥





ವಿಷಯ – ಶ್ರೀಮಜ್ಜಗದ್ಗುರು ಕೂಡಲಿ ಶೃಂಗೇರಿ ಪೀಠಕ್ಕೆ ಉತ್ತರಾಧಿಕಾರಿಗಳ ನಿರ್ಣಯದ ಬಗ್ಗೆ.

ಶಾ. ಶಕೆ ೧೯೪೫, ಶೋಭಕೃತ್ ನಾಮ ಸಂವತ್ಸರ, ವೈಶಾಖ ಕೃಷ್ಣ ಷಷ್ಠಿ, ಗುರುವಾರ, ದಿ. ೧೧–೦೫–೨೦೨೩ರ ಸಂಜೆ ೦೫:೩೦ಕ್ಕೆ ಬೆಂಗಳೂರಿನ ಎನ್. ಆರ್. ಕಾಲೋನಿ ರಾಮಮಂದಿರದಲ್ಲಿ ಶ್ರೀಮಜ್ಜಗದ್ಗುರು ಕೂಡಲಿ ಶೃಂಗೇರಿ ಮಹಾಸ್ವಾಮಿಗಳಾದ ಶ್ರೀ ಶ್ರೀ ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಮಹಾಸ್ವಾಮಿಗಳ ಹಾಗೂ ಶ್ರೀಕ್ಷೇತ್ರ ಹೆಬ್ಬಳ್ಳಿಯ ಸದ್ಗುರು ಶ್ರೀ ಬ್ರಹ್ಮಚೈತನ್ಯ ಮಹಾರಾಜ ಸ್ಥಿರಪಾದುಕಾ ಆಶ್ರಮದ ಪ. ಪೂ. ಶ್ರೀ ದತ್ತಾವಧೂತ ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಅನೇಕ ಭಕ್ತರೊಂದಿಗೆ ಸಭೆಯನ್ನು ನಡೆಸಲಾಯಿತು.

ಉಭಯ ಗುರುಗಳ ಉದಾರಾಜ್ಞೆಯಂತೆ ಶ್ರೀ ದತ್ತರಾಜ ದೇಶಪಾಂಡೆ ಎಂಬ ನೈಷ್ಠಿಕ ಬ್ರಹ್ಮಚಾರಿಗಳನ್ನು ಶ್ರೀ ಕೂಡಲಿ ಶೃಂಗೇರಿ ಪೀಠಕ್ಕೆ ಉತ್ತರಾಧಿಕಾರಿಗಳನ್ನಾಗಿ ನೇಮಿಸಬೇಕೆಂದು ಸಭೆಯು ಒಕ್ಕೊರಳಿನಿಂದ ಸಂತೋಷದಿಂದ ಅನುಮೋದಿಸಿರುತ್ತದೆ.

ಈ ಬಗ್ಗೆ ಎಲ್ಲ ಭಕ್ತರಿಗೂ ತಿಳಿಸಿ ಆದಷ್ಟು ಬೇಗ ಅಂದರೆ ದಿ. ೨೨–೦೫–೨೦೨೩ರಂದು ಅಂದರೆ ಶೋಭಕೃತ್ ನಾಮ ಸಂವತ್ಸರದ ಜ್ಯೇಷ್ಠ ಶು. ತೃತೀಯಾ, ಮೃಗಶಿರಾ ಶುಭದಿವಸ ಬೆಳಿಗ್ಗೆ ಸೂರ್ಯೋದಯಾದಿ ೦೯:೦೦ – ೦೯:೩೦ ರಲ್ಲಿ ಸಲ್ಲುವ ಮಿಥುನ ಲಗ್ನದ (ಗುರುವು ಹಾಗೂ ಬುಧನು ಏಕಾದಶ ಸ್ಥಾನದಲ್ಲಿರುವ ಶುಭ ಗಳಿಗೆ) ಈ ಶುಭ ಮುಹೂರ್ತದಲ್ಲಿ ಶ್ರೀಕ್ಷೇತ್ರ ಕೂಡಲಿಯಲ್ಲಿ ಸಂನ್ಯಾಸಾಶ್ರಮ ಸ್ವೀಕಾರ ಸಮಾರಂಭ ನೆರವೇರಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಲಾಯಿತು.

ಈ ಸಂದರ್ಭದಲ್ಲಿ ಶ್ರೀಮಜ್ಜಗದ್ಗುರು ಕಾಂಚೀ ಕಾಮಕೋಟಿ ಪೀಠದ ವತಿಯಿಂದ ಪ್ರತಿನಿಧಿಗಳು ಆಗಮಿಸಿದ್ದು, ಶ್ರೀ ಶ್ರೀ ಜಗದ್ಗುರು ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮಿಗಳವರ ಆಶೀರ್ವಾದ ಹಾಗೂ ಅನುಮೋದನೆ ಇರುವದೆಂದು ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಅದರ ಅಧ್ಯಕ್ಷರಾದ ಶ್ರೀ ಅಶೋಕ ಹಾರ್ನಳ್ಳಿ ಅವರು ಬ್ರಾಹ್ಮಣ ಮಹಾಸಭಾದ ಪರವಾಗಿ ಈ ಕಾರ್ಯಕ್ರಮಕ್ಕೆ ತಮ್ಮ ಅನುಮೋದನೆಯನ್ನು ಸಹ ತಿಳಿಸಿರುತ್ತಾರೆ.

ಈ ಬಗ್ಗೆ ಶ್ರೀ ಪ್ರಮೋದ ಮುತಾಲಿಕ ಇವರೂ ಸಹ ತಮ್ಮ ಅನುಮೋದನೆಯನ್ನು ತಿಳಿಸಿದ್ದು ಇನ್ನಿತರೆ ಭಕ್ತವೃಂದವು ಸದರೀ ಕಾರ್ಯಕ್ಕೆ ತಮ್ಮೆಲ್ಲರ ತನು–ಮನ–ಧನಗಳೊಂದಿಗೆ ಸದ್ಗುರು ಪರಂಪರಾ ಕಾರ್ಯಕ್ಕೆ ಕೈಜೋಡಿಸುವದಾಗಿ ಎಲ್ಲರೂ ಸಹ ಒಕ್ಕೊರಳಿನಿಂದ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಈ ಮೇಲ್ಕಂಡ ಅಂಶಗಳ ನಿರ್ಣಯವನ್ನು ಸಭೆಯಲ್ಲಿ ಉಭಯ ಗುರುಗಳ ಸಾನ್ನಿಧ್ಯದಲ್ಲಿ ನಿರ್ಣಯಿಸಲಾಯಿತು.

ಸದರಿ ಸಂಪೂರ್ಣ ಅಂಶಗಳನ್ನು ಬ್ರಹ್ಮಚಾರಿಗಳಾದ ಶ್ರೀದತ್ತರಾಜ ದೇಶಪಾಂಡೆ ಇವರಲ್ಲಿ ಪ್ರಸ್ತಾವಿಸಿದಾಗ ಸದರಿಯವರು ಈ ಎಲ್ಲ ಅಂಶಗಳನ್ನು ಪರಿಶೀಲಿಸಿ ತಮ್ಮ ಆತ್ಮಸಂತೋಷದಿಂದ ಸಭೆಯಲ್ಲಿ ತಮ್ಮ ಒಪ್ಪಿಗೆಯನ್ನು ಸೂಚಿಸಿರುತ್ತಾರೆ.

# ಶ್ರೀಮಜ್ಜಗದ್ಗುರು ಕೂಡಲಿ ಶೃಂಗೇರಿ ಮಹಾಸಂಸ್ಥಾನಮ್

## ಶ್ರೀ ಕ್ಷೇತ್ರ ಕೂಡಲೀ, ಶಿವಮೊಗ

## ಶ್ರೀ ಶ್ರೀ ಶ್ರೀ ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಮಹಾಸ್ವಾಮಿಗಳವರಿಂದ ಬ್ರಹ್ಮಚಾರಿ ಶ್ರೀ ದತ್ತರಾಜ ದೇಶಪಾಂಡೆಯವರ ಸಂನ್ಯಾಸಪೂರ್ವಕ ಶಿಷ್ಯ ಪರಿಗ್ರಹಣ ಸಮಾರಂಭ

**ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ ಶಾಲಿವಾಹನ ಶಕೆ 1945 ಶೋಭಕೃತ್ ನಾಮ ಸಂವತ್ಸರದ ವೈಶಾಖ ಕೃಷ್ಣ ಚತುರ್ದಶಿ, ಗುರುವಾರ ದಿ. 18–05–2023 ರಿಂದ ಜ್ಯೇಷ್ಠ ಶುದ್ಧ ತೃತೀಯಾ, ಸೋಮವಾರ, ದಿ. 22–05–2023 ರವರೆಗೆ ಸಂನ್ಯಾಸಪೂರ್ವಕ ಶಿಷ್ಯ ಪರಿಗ್ರಹಣ ಸಮಾರಂಭ ಏರ್ಪಡಿಸಿದೆ.**

ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯ ಇತ್ಯಾದಿ ಬಿರುದಾಂಕಿತ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ವಾಲುಕೇಶ್ವರ ಭಾರತಿ ಸ್ವಾಮಿಗಳ ಕರಕಮಲಸಂಜಾತ ಶ್ರೀಮಜ್ಜಗದ್ಗುರು ಕೂಡಲಿ ಶೃಂಗೇರಿ ಮಹಾಸಂಸ್ಥಾನದ 71ನೇ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಮಹಾಸ್ವಾಮಿಗಳು ಇ.ಸ. 1984ರಲ್ಲಿ ತುರೀಯಾಶ್ರಮ ಸ್ವೀಕರಿಸಿ 38 ಚಾತುರ್ಮಾಸಗಳನ್ನು ಪೂರೈಸಿರುತ್ತಾರೆ. ಅಂದಿನಿಂದ ಶ್ರೀಮಠದಲ್ಲಿ ಧಾರ್ಮಿಕ ಪ್ರಸಾರಕ್ಕಾಗಿ ಬಹಳ ಕೊಡುಗೆ ನೀಡಿರುತ್ತಾರೆ. ಪ್ರಸ್ತುತ ಮಠದ ಸಂಪ್ರದಾಯಕ್ಕನುಸಾರ ಅವರು ನೂತನ ಶಿಷ್ಯ ಸ್ವೀಕಾರ ಮಾಡಲಿದ್ದಾರೆ.

ನೂತನ ಶಿಷ್ಯರಾಗಿ ಧಾರವಾಡಮೂಲದವರಾದ ಶ್ರೀ ದತ್ತರಾಜ ದೇಶಪಾಂಡೆಯವರು ಋಗ್ವೇದ, ಯಜುರ್ವೇದ ಹಾಗೂ ಸಾಮವೇದ ಘನಾಂತವನ್ನು

ಅಧ್ಯಯನ ಮಾಡಿ ದಶಗ್ರಂಥಗಳನ್ನೂ ಓದಿರುತ್ತಾರೆ ಹಾಗೂ ಶಾಸ್ತ್ರಗಳನ್ನು ಕುರಿತು ಗ್ರಂಥಗಳನ್ನು ಬರೆದಿರುತ್ತಾರೆ. ಜೊತೆಗೆ 2004 ರಿಂದ 2016ರವರೆಗೆ 200ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಅಧ್ಯಾಪನ ಮಾಡಿಸಿರುತ್ತಾರೆ. ಕಳೆದ 10 ವರ್ಷಗಳಿಂದ ಯೋಗಸಾಧನ ಮಾಡಿ ಸಂಪೂರ್ಣ ಭಾರತದ ಪ್ರವಾಸ ಮಾಡಿರುತ್ತಾರೆ. ಇವರು ನೈಷ್ಠಿಕ ಬ್ರಹ್ಮಚಾರಿಯಾಗಿದ್ದು ಶಮ–ದಮಾದಿ ಷಟ್‌ಸಂಪತ್ತುಗಳಿಂದ ಕೂಡಿ ಶಾಸ್ತ್ರದ ಸಂರಕ್ಷಣೆಗೆ ಹಾಗೂ ಶಂಕರ ಸಿದ್ಧಾಂತಗಳನ್ನು ಪ್ರಸಾರ ಮಾಡಲು ಪ್ರವೃತ್ತರಾಗಿರುತ್ತಾರೆ. ನೂತನವಾಗಿ ಆಗಲಿರುವ ಇವರ ಶಿಷ್ಯಪರಿಗ್ರಹಣವನ್ನು ಪರಮ ಪೂಜ್ಯ

ಶ್ರೀ ದತ್ತಾವಧೂತರು, ಚೈತನ್ಯಾಶ್ರಮ, ಶ್ರೀಕ್ಷೇತ್ರ ಹೆಬ್ಬಳ್ಳಿ ಇವರ ಮಾರ್ಗದರ್ಶನ ಹಾಗೂ ನೇತೃತ್ವದಲ್ಲಿ ನೆರವೇರಿಸಲು ಸಮಸ್ತ ಶಿಷ್ಯರ ಸದ್ಭಾವನೆಯಾಗಿರುತ್ತದೆ. ಅದರ ನಿಮಿತ್ತವಾಗಿ ನೂತನ ಶಿಷ್ಯರಿಗೆ ವೈಶಾಖ ಬಹುಳ ಚತುರ್ದಶಿ, ಗುರುವಾರ ಅಂದರೆ ದಿ. 18–05–2023 ರಿಂದ ಅನೇಕ ವೈದಿಕ ಕಲಾಪಗಳು, ಚತುರ್ವೇದ ಪಾರಾಯಣಗಳು, ಅನೇಕ ಮಠದ ಪೀಠಾಧಿಪತಿಗಳು ಹಾಗೂ ಅನೇಕ ಗಣ್ಯರುಗಳು ಅಗಮಿಸಲಿದ್ದಾರೆ. ಈ ಎಲ್ಲ ಕಾರ್ಯಕ್ರಮಗಳನ್ನು ಅತ್ಯಂತ ವೈಭವ ದೊಂದಿಗೆ ನೆರವೇರಿಸಲು ತಾವೆಲ್ಲರೂ ತನು, ಮನ ಹಾಗೂ ಧನಗಳಿಂದ ಸಹಾಯ ಮಾಡಿ ಶ್ರೀ ಕೂಡಲಿ ಕ್ಷೇತ್ರಕ್ಕೆ ಬಂದು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ವಿಜೃಂಭಣೆಯಿಂದ ನೆರವೇರಿಸಿಕೊಡಬೇಕೆಂದು ಪ್ರಾರ್ಥನೆ.

## ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಪೀಠಾಧಿಪತಿಗಳು

1) **ಶ್ರೀ ಶಂಕರ ಭಗವತ್ಪಾದಾಚಾರ್ಯ ಪರಂಪರಾಗತ ಮೂಲಾಮ್ನಾಯ ಸರ್ವಜ್ಞಪೀಠ ಕಾಂಚೀಕಾಮಕೋಟಿಪೀಠದ ಮಹಾಸ್ವಾಮಿಗಳಾದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ವಿಜಯೇಂದ್ರ ಸರಸ್ವತೀ ಮಹಾಸ್ವಾಮಿಗಳು.**

2) **ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳು,** ಶ್ರೀಮಠ, ಹರಿಹರಪುರ.

3) **ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ವಿದ್ಯಾಭಿನವ ಶ್ರೀ ಶ್ರೀ ಕೃಷ್ಣಾನಂದ ತೀರ್ಥ ಮಹಾಸ್ವಾಮಿಗಳು,** ಶ್ರೀಜಗದ್ಗುರು ಬದರೀ ಶಂಕರಾಚಾರ್ಯ ಸಂಸ್ಥಾನಮ್, ಶ್ರೀಕ್ಷೇತ್ರ ಶಕಟಪುರ, ಶ್ರೀವಿದ್ಯಾಪೀಠ.

4) **ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು,** ಶ್ರೀಸಂಸ್ಥಾನ ಗೋಕರ್ಣ, ಶ್ರೀರಾಮಚಂದ್ರಾಪುರ ಮಠ, ಹೊಸನಗರ.

5) **ಪರಮ ಪೂಜ್ಯ ಶ್ರೀ ಗುರುದತ್ತಮೂರ್ತಿ ಚಕ್ರವರ್ತಿ,** ಶ್ರೀಕ್ಷೇತ್ರ ಅಗಡಿ–ಆನಂದವನ.

6) **ಪರಮ ಪೂಜ್ಯ ಶ್ರೀ ದಿವಾಕರ ದೀಕ್ಷಿತರು,** ಶ್ರೀಕ್ಷೇತ್ರ ಮುರಗೋಡ.

7) **ಪರಮ ಪೂಜ್ಯ ಶ್ರೀ ದತ್ತಪ್ಪಯ್ಯ ಸ್ವಾಮಿಗಳು,** ಶ್ರೀ ಭೀಮಶಂಕರ ಸಂಸ್ಥಾನ ಮಠ, ಸಿಂದಗಿ.





### ಶಂಕರ ಜಯಂತಿ ಸಂದೇಶ

## ಶ್ರೀ ಶ್ರೀ ಶಂಕರರ ಜಗದ್ಗುರತ್ವವನ್ನು ಅರ್ಥ ಮಾಡಿಕೊಳ್ಳಬೇಕು

### – ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು

ಜಗದ್ಗುರು ಶಂಕರಾಚಾರ್ಯರ ಜಯಂತಿಯ ಸಂದರ್ಭದಲ್ಲಿ ಶೃಂಗೇರಿಯ ಶ್ರೀ ಶಾರದ ಪೀಠದಲ್ಲಿ ಶ್ರೀ ಶಂಕರ ಭಗವತ್ಪಾದರ ಜಯಂತುತ್ಸವದ ಸಂದರ್ಭದಲ್ಲಿ ಅನುಗ್ರಹ ಭಾಷಣ ಮಾಡುತ್ತಾ, ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳು ಶ್ರೀ ಶಂಕರರ ಜಗದ್ಗುರತ್ವವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡರೆ ಮಾತ್ರ ಶಂಕರರನ್ನು ಅರ್ಥಮಾಡಿಕೊಂಡಂತೆ ಎಂದು ಹೇಳಿದರು. ಜಗದ್ಗುರತ್ವವನ್ನು ಅರ್ಥಮಾಡಿಕೊಳ್ಳಬೇಕಾದರೆ ಶ್ರೀ ಭಗವತ್ಪಾದರು ರಚಿಸಿದ ಎಲ್ಲಾ ಗ್ರಂಥಗಳನ್ನು ಅಧ್ಯಯನ ಮಾಡಿ ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ. ಇಷ್ಟೇ ಅಲ್ಲದೆ ಇದನ್ನು ಮಕ್ಕಳಿಗೂ ಪರಿಚಯಿಸುವ ಕೆಲಸವೂ ಆಗಬೇಕು. ಚಿಕ್ಕವರಿದ್ದಾಗಲೇ ಭಗವತ್ಪಾದರ ಶ್ಲೋಕಗಳನ್ನು ಕಲಿತ ಮಕ್ಕಳು ಮುಂದೊಂದುದಿನ ಅದರ ಅರ್ಥವನ್ನು ಹಾಗೂ ಅದರ ಮಹತ್ವವನ್ನು ಅರಿಯಲು ಸಮರ್ಥರಾಗುತ್ತಾರೆ. ಈ ಗ್ರಂಥಗಳ ಅಧ್ಯಯನದಿಂದ ಸಂಪಾದಿಸಿದ ಜ್ಞಾನವು ನಮ್ಮ ಲೌಕಿಕ ಬದುಕಿನ ಕಷ್ಟನಷ್ಟಗಳನ್ನು ಎದುರಿಸಿ ಸನ್ಮಾರ್ಗದಲ್ಲಿ ನಡೆದು ಜೀವನದಲ್ಲಿ ಕೃತಕತ್ಯತೆಯನ್ನು ಹೊಂದುವುದಕ್ಕೆ ದಾರಿದೀಪವಾಗುತ್ತದೆ ಎಂದು ಶಂಕರರ ಗ್ರಂಥಗಳ ಅಧ್ಯಯನದ ಮಹತ್ವವನ್ನು ತಿಳಿಸಿದರು. ಈ ಸಂದರ್ಭದಲ್ಲಿ ಮಹಾಸ್ವಾಮಿಗಳು ಶಂಕರ ಭಗವತ್ಪಾದರು ರಚಿಸಿದ ಪ್ರಶ್ನೋತ್ತರ ಮಾಲಿಕೆ, ದಕ್ಷಿಣಾಮೂರ್ತಿ ಸ್ತೋತ್ರಗಳ ಗ್ರಂಥಗಳನ್ನು ಲೋಕಾರ್ಪಣೆಗೊಳಿಸಿದರು.

ಶ್ರೀ ಶಂಕರರು ಹೇಳಿದ "ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋಬ್ರಹ್ಮೈವ ನಾಪರಃ ॥" ಎಂಬ ಶಂಕರರ ಪ್ರಸಿದ್ಧವಾದ ವಾಕ್ಯವನ್ನು ಇತರರು ಅಕ್ಷೇಪಿಸುವುದನ್ನು ಪ್ರಸ್ತಾಪಿಸುತ್ತ, ಶಂಕರರು ಬೋಧಿಸಿದ ಸಗುಣ ಬ್ರಹ್ಮದ ಉಪಾಸನೆ ಹಾಗೂ ಕರ್ಮಾಚರಣೆಯ ಮಹತ್ವವನ್ನು ಅರ್ಥಮಾಡಿಕೊಂಡರೆ ಈ ರೀತಿಯ ಆಕ್ಷೇಪಗಳು ನಿರಾಧಾರ ಎಂಬುದು ಅರಿವಾಗುತ್ತದೆಂದು ತಿಳಿಸಿದರು. ಶ್ರೀ ಶಂಕರರ ಭಾಷ್ಯಗಳು ಪ್ರಕರಣ ಗ್ರಂಥಗಳು, ಸ್ತೋತ್ರಗಳನ್ನು ಅಧ್ಯಯನ ಮಾಡಿದರೆ ಶ್ರೀ ಶಂಕರರ ಜಗದುರತ್ವವು ಅರಿವಿಗೆ ಬರುವುದು ಎಂದು ತಿಳಿಸಿದರು. ಶ್ರೀ ಶಂಕರರು ಸಾಮಾನ್ಯರಾಗಿರದೆ, ಸ್ಕಾಂದ ಪುರಾಣದಲ್ಲಿ ಉಲ್ಲೇಖಿಸಿದಂತೆ ಲೋಕೋದ್ಧಾರ ಮಾಡಲು ಯತಿ ರೂಪದಲ್ಲಿ ಅವತರಿಸಿದ ಸಾಕ್ಷಾತ್ ಪರಶಿವನು ಎಂದರು. ಇಂತಹ ಮಹಾನುಭಾವರ ಪರಂಪರೆಯಲ್ಲಿ ಹುಟ್ಟಿದ ನಾವೆಲ್ಲರೂ ಪುಣ್ಯವಂತರು ಎಂದು ತಿಳಿಸಿದರು.

# ತುಮಕೂರಲ್ಲಿ ಶಂಕರ ಜಯಂತಿ ಸಪ್ತಾಹ



ಶ್ರೀ ಶಂಕರ ಸೇವಾ ಸಮಿತಿ, ಶ್ರೀ ಶೃಂಗೇರಿ ಶಂಕರ ಮಠದ ಪದಾಧಿಕಾರಿಗಳು ಶ್ರೀ ಶಂಕರ ಜಯಂತಿ ಅಂಗವಾಗಿ ಸಪ್ತಾಹ ಪ್ರವಚನ ಮಾಲಿಕೆಯನ್ನು 28.04.2023 ರಿಂದ 01.05.2023ರವರೆಗೆ ಶ್ರೀ ಅಭಿನವ ವಿದ್ಯಾತೀರ್ಥ ಮಂಟಪದಲ್ಲಿ ಏರ್ಪಡಿಸಿದ್ದರು. ಪ್ರತಿದಿನ ಬೆಳಿಗ್ಗೆ ಶಂಕರ ಮಠದಲ್ಲಿ ಮಹಾನ್ಯಾಸಪೂರ್ವಕ ರುದ್ರಾಭಿಷೇಕ, ನವಗ್ರಹ, ಮೃತ್ಯುಂಜಯ ಜಪ, ಶ್ರೀಮಾಧವೀಯ ಶಂಕರ ವಿಜಯ ಗ್ರಂಥ ಪಾರಾಯಣ, ಅಷ್ಟಾವಧಾನ ಸೇವೆ ಹಾಗೂ ಮಹಾಮಂಗಳಾರತಿ ಕಾರ್ಯಕ್ರಮ ನಡೆಯಿತು. ಸಂಜೆ ವಿವಿಧ ಭಜನಾ ಮಂಡಳಿಯವರಿಂದ ಶ್ರೀ ಲಲಿತಾ ಸಹಸ್ರನಾಮ ಪಾರಾಯಣ ಹಾಗೂ ಗುರುಭಜನೆ ಏರ್ಪಾಡಾಗಿತ್ತು. ತುಮಕೂರು ಜಿಲ್ಲಾ ವಿವಿಧ ಬ್ರಾಹ್ಮಣ ಸಂಘ–ಸಂಸ್ಥೆಗಳ ಸಹಕಾರದಿಂದ ವಿದ್ವಾಂಸರು ಪ್ರವಚನ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. 28.04.2023 ರಂದು ಬೆಂಗಳೂರಿನ ಎಸ್.ವ್ಯಾಸ ಯೋಗ ವಿಶ್ವವಿದ್ಯಾಲಯದ ವಿಶಿಷ್ಟ ಪ್ರಾಧ್ಯಾಪಕರಾದ ಪ್ರೊ: ಎಂ.ಕೆ. ಶ್ರೀಧರ್ ಅವರು ಶ್ರೀ ಶಂಕರ ಭಗವತ್ಪಾದರ ವಿಶಿಷ್ಟ ವ್ಯಕ್ತಿತ್ವದ ಬಗ್ಗೆ ಪ್ರವಚನ ನೀಡಿದರು. ಶ್ರೀಯುತರು ತಮ್ಮ ಉಪನ್ಯಾಸದಲ್ಲಿ ಶಂಕರಾಚಾರ್ಯರು ತಮ್ಮ ಅಲ್ಪಾವಧಿ ಜೀವನ ಯಾನದಲ್ಲಿ ಹೇಗೆ ತಾಯಿಯಲ್ಲಿ ತೋರಿದ್ದ ವಾತ್ಸಲ್ಯ, ಗುರುಗಳಲ್ಲಿ ಅಖಂಡ ಭಕ್ತಿ, ಅಪಾರ ಶಿಷ್ಯ ವಾತ್ಸಲ್ಯ, ದೇಶಪ್ರೇಮ, ಅವೈದಿಕ ಮತಗಳಲ್ಲಿ ನಿಷ್ಠುರತೆ, ದೇಶದ ನಾಲ್ಕು ಭಾಗಗಳಲ್ಲಿ ದೇವಾಲಯ, ವಿಗ್ರಹಗಳ ಶ್ರೀ ಚಕ್ರ ಸ್ಥಾಪನೆ, ವೈದಿಕ ಸನಾತನ ಧರ್ಮದ ಪುನರುಜ್ಜೀವನ, ಅಮ್ನಾಯ ಪೀಠಗಳ ಸ್ಥಾಪನೆ, ಅದ್ವೈತ ಮತ ಪ್ರಚಾರ ಮಾಡಿದನ್ನು, ಮುಂತಾದ್ದನ್ನು ಸೋದಾಹರಣವಾಗಿ ವಿವರಿಸಿದರು. ಒಂದು ಪಕ್ಷ ಶ್ರೀ ಶಂಕರ ಭಗವತ್ಪಾದರು ಅವತರಿಸದಿದ್ದರೆ ಭಾರತವು ಹಿಂದು ರಾಷ್ಟ್ರವಾಗುತ್ತಿರಲಿಲ್ಲ, ಇಡೀ ದೇಶವೆಲ್ಲವೂ ಬೌದ್ಧರಿಂದ, ನಾಸ್ತಿಕವಾದಿಗಳಿಂದ ತುಂಬಿರುತ್ತಿತ್ತು ಎಂದು ವಿವರಿಸಿದರು. ಶಂಕರಾಚಾರ್ಯರ ಅದ್ಭುತ ಪ್ರತಿಭೆ, ಅಸಾಧಾರಣ ವಾಕ್ ಸ್ಮರಣೆ, ಪ್ರಚಂಡ ದೈಹಿಕ–ಮಾನಸಿಕ, ಆಧ್ಯಾತ್ಮಿಕ ಮನೋಬಲ, ಐಕ್ಯತಾ ಮನೋಭಾವ ಮುಂತಾದ್ದನ್ನು ವರ್ಣಿಸಿದರು. ಮೊದಲಿಗೆ ಅಧ್ಯಕ್ಷರಾದ ಶ್ರೀ ಕೆ.ಜಿ. ನಂಜುಂಡೇಶ್ವರ ಸ್ವಾಗತಿಸಿದರು. ಕಾರ್ಯದರ್ಶಿಗಳಾದ ಶ್ರೀ ಎಸ್. ಮಂಜುನಾಥ ವಂದಿಸಿದರು. ಸಮಿತಿಯ ಎಲ್ಲ ಪದಾಧಿಕಾರಿಗಳು, ಬಹಳ ಶ್ರೋತೃಗಳು ಉಪಸ್ಥಿತರಿದ್ದರು. ಶ್ರೀ ಶೃಂಗೇರಿ ದಕ್ಷಿಣಾಮ್ನಾಯ ಪೀಠದ ಶಾಂಕರ ತತ್ತ್ವ ಅಭಿಯಾನದ ಸಂಯೋಜಕರಾದ ಪ್ರೊ. ಎಂ.ಕೆ. ನಾಗರಾಜರಾವ್ ಅತಿಥಿಗಳನ್ನು ಪರಿಚಯಿಸಿದರು.

## ಮಂಗಳೂರಿನಲ್ಲಿ ದ್ರಾವಿಡ ಬ್ರಾಹ್ಮಣ ಸಂಘದ

# ಶತಮಾನೋತ್ಸವ ಸಮಾರೋಪ ಸಮಾರಂಭ

## ತ್ಯಾಗ – ಜ್ಞಾನ ಬ್ರಾಹ್ಮಣರ ಶ್ರೇಷ್ಠತೆ : ಸೋದೆ ಶ್ರೀಗಳು




ಇತ್ತೀಚೆಗೆ ಮಂಗಳೂರಿನ ಅಶೋಕನಗರದ ಗೋಕುಲ ಕಲ್ಯಾಣ ಮಂಟಪದಲ್ಲಿ ಜರುಗಿದ ಬೋಳೂರು ಗ್ರಾಮದ ದ್ರಾವಿಡ ಬ್ರಾಹ್ಮಣ ಸಮಾಜೋದ್ಧಾರಕ ಸಂಘದ ಶತಮಾನೋತ್ಸವ ವರ್ಷಾಚರಣೆ ಸಂಭ್ರಮದ ಸಮಾರೋಪ ಸಮಾರಂಭದಲ್ಲಿ ಶ್ರೀಪಾದಂಗಳವರು ಆಶೀರ್ವಚನ ನೀಡುತ್ತ, ತ್ಯಾಗ–ಜ್ಞಾನನೇ ಬ್ರಾಹ್ಮಣರ ಶ್ರೇಷ್ಠತೆ ಎಂದರು.

ಬ್ರಾಹ್ಮಣರು ರಾಷ್ಟ್ರ ಹಿತ, ಸಮಾಜಕ್ಕಾಗಿ ಕೆಲಸ ಮಾಡುತ್ತಾರೆ. ಎಲ್ಲ ಸಮಾಜಕ್ಕೂ ಬೇಕಾದ ಸಮಾಜ ಬ್ರಾಹ್ಮಣ ಸಮಾಜ. ಈ ಸಮಾಜ ಹಲವಾರು ಕಷ್ಟಗಳನ್ನು ಎದುರಿಸಿದರೂ ಮತ್ತೆ ಮತ್ತೆ ಮೇಲೆದ್ದು ನಿಂತಿದೆ. ಈ ಸಮಾಜವನ್ನು ತುಳಿದರೂ ಪುಟಿದೇಳುವ ಸಾಮರ್ಥ್ಯವಿದೆ ಎಂಬುದನ್ನು ತೋರಿಸಿದೆ ಎಂದು ಶ್ರೀಗಳು ಹೇಳಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ವಿಶ್ವ ಹಿಂದೂ ಪರಿಷತ್ ಪ್ರಾಂತೀಯ ಅಧ್ಯಕ್ಷ ಡಾ॥ ಎಂ.ಬಿ. ಪುರಾಣಿಕ್ ಅವರು ಮಾತನಾಡಿ, ಬ್ರಾಹ್ಮಣ ಸಮುದಾಯ ಸಮಾಜದ ಏಳಿಗೆಯ ಜತೆಗೆ ಸಮಷ್ಠಿಯ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಹಿಂದೂ ಧರ್ಮವಿದ್ದರೆ ಅಸ್ತಿತ್ವವಿರುತ್ತದೆ. ಸಮಾಜಕ್ಕೆ ಬ್ರಾಹ್ಮಣ ಸಮುದಾಯದ ಮಾರ್ಗದರ್ಶನದ ಅಗತ್ಯವಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಸಮಾಜದ ಏಳಿಗೆಯಲ್ಲಿ ಬ್ರಾಹ್ಮಣ ಸಮುದಾಯ ತೊಡಗಿಸಿಕೊಂಡಿತ್ತು. ಆದರೂ ಸಮಾಜವು ದೂಷಣೆಗೆ ಒಳಗಾಗುತ್ತಲೇ ಇದೆ. ಬ್ರಾಹ್ಮಣ ಸಮಾಜ ಸನಾತನ ಹಿಂದೂ ಧರ್ಮದ ರಕ್ಷಣೆಯ ಜತೆಗೆ ಒಗ್ಗಟ್ಟಿನಿಂದ ತನ್ನ ಸಮಾಜವನ್ನು ಕೂಡ ರಕ್ಷಿಸಬೇಕಾದ ಅಗತ್ಯವಿದೆ ಎಂದು ಹೇಳಿದರು.

ಉದ್ಯಮಿ ಬಿ ರಘುನಾಥ್ ಸೋಮಯಾಜಿ, ಡಾ॥ ರಮಾನಂದರಾವ್, ಶತಮಾನೋತ್ಸವ ಸಮಿತಿಯ ಕಾರ್ಯದರ್ಶಿ ಸುಬ್ರಹ್ಮಣ್ಯ ರಾವ್, ಗೌರವಾಧ್ಯಕ್ಷ ಬಿ. ರಾಘವೇಂದ್ರ ರಾವ್, ಸಂಘದ ಅಧ್ಯಕ್ಷ ಸುಮಂತ್ ಕುಮಾರ್, ಕಾರ್ತಿಕ್ ಬಾಪಟ್, ನೇರಂಬಳ್ಳಿ ಡಾ॥ ಭಾಸ್ಕರ ಆಚಾರ್ಯ, ಸಿ.ಸುರೇಶ್ ರಾವ್, ವೆಂಕಟೇಶ್ ಬಿ. ಪಿ.ಪ್ರಕಾಶ್ ರಾವ್ ಉಪಸ್ಥಿತರಿದ್ದರು.

ಸಮಿತಿಯ ಕಾರ್ಯಾಧ್ಯಕ್ಷ ಪಿ. ಸುರೇಶ್ ರಾವ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಜೇಷ್ಠ ಲಕ್ಷ್ಮೀ ಕಾರ್ಯಕ್ರಮ ನಿರ್ವಹಿಸಿದರು.





# ಬೆಳಗಾವಿಗೆ ಮಹಾಸಭಾ ಅಧ್ಯಕ್ಷರ ಭೇಟಿ



ಬ್ರಾಹ್ಮಣ ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಬೈಲಾ ತಿದ್ದುಪಡಿ ಮಹತ್ವದ ತೀರ್ಮಾನ ಮಾಡಲಾಗುತ್ತಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಹೇಳಿದರು.


ನಗರದಲ್ಲಿಂದು ಬ್ರಾಹ್ಮಣ ಸಂಘಟನೆ ಪದಾಧಿಕಾರಿಗಳ ಜೊತೆ ಮಾತನಾಡಿದರು.

ಮಹಾಸಭೆಯ ಕಾರ್ಯಕಾರಿಣಿ ಸಭೆ ಸದಸ್ಯರನ್ನು 250ಕ್ಕೆ ಮಾಡುವುದು ಸೇರಿದಂತೆ ಸಂಘಟನಾತ್ಮಕ ದೃಷ್ಟಿಯಿಂದ ಕೆಲವೊಂದು ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ಎಂದರು.

ಮಹಾಸಭೆಯಲ್ಲಿ ಮಹಿಳಾ ಘಟಕವನ್ನು ಇನ್ನಷ್ಟು ಗಟ್ಟಿಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕೆಲಸವೂ ನಡೆಯುತ್ತಿದೆ. ಪ್ರತಿ ಜಿಲ್ಲೆಯಲ್ಲಿ ಸಂಘಟನೆ ದೃಷ್ಟಿಯಿಂದ ಸಮಾವೇಶವನ್ನು ಮಾಡಲಾಗುತ್ತದೆ. ಅಷ್ಟೇ ಅಲ್ಲ ಸಮಾಜದ ನಿರುದ್ಯೋಗಿಗಳು ಈಗ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ದೊಡ್ಡ ದೊಡ್ಡ ಕಂಪನಿಗಳೊಂದಿಗೆ ಮಾತುಕತೆ ನಡೆಸಿ ಉದ್ಯೋಗ ಮೇಳವನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಮಾಡುವ ಚಿಂತನೆ ಕೂಡ ನಡೆದಿದೆ ಎಂದರು.

ಈ ಸಂದರ್ಭದಲ್ಲಿ ಎಕೆಬಿಎಂಎಸ್‌ನ ರಾಜ್ಯಕಾರ್ಯಕಾರಿಣಿ ಸದಸ್ಯ ವಿಲಾಸ ಜೋಶಿ, ನಗರಸೇವಕಿ ವಾಣಿ ಜೋಶಿ, ಮಾಜಿ ನಗರಸೇವಕಿ ಅನುಶ್ರೀ ದೇಶಪಾಂಡೆ, ಅಕ್ಷಯ ಕುಲಕರ್ಣಿ, ಅನಿಲ ಕುಲಕರ್ಣಿ, ಕೇಶವ ಕುಲಕರ್ಣಿ, ದಿನೇಶ ದೇಶಪಾಂಡೆ ಮತ್ತಿತರರಿದ್ದರು.

## ವಸಂತ ವೇದ ಶಿಬಿರ




ಕುಂದಾಪುರ ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವಸ್ಥಾನದ ವತಿಯಿಂದ, ಕೂಟ ಮಹಾಜಗತ್ತು ಸಾಲಿಗ್ರಾಮ ಸಹಕಾರದೊಂದಿಗೆ ಹಮ್ಮಿಕೊಂಡಿರುವ 23ನೇ ವರ್ಷದ ವಸಂತ ವೇದ ಶಿಬಿರದ ಉದ್ಘಾಟನೆಯು ನೆರವೇರಿತು.

ಶ್ರೀ ದೇವಳದ ಆಡಳಿತ ಮಂಡಳಿ ಕಾರ್ಯದರ್ಶಿ ಶ್ರೀ ಲಕ್ಷ್ಮೀನಾರಾಯಣ ತುಂಗ, ಕೂಟಬಂಧು ಟ್ರಸ್ಟ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಉಮೇಶ ಶಾಸ್ತ್ರಿ, ಶ್ರೀ ತಾರಾನಾಥ ಹೊಳ್ಳ, ಶ್ರೀಪತಿ ಅಧಿಕಾರಿ ಉದ್ಘಾಟನಾ ಕಾರ್ಯಕ್ರಮ ನೆರವೇರಿಸಿದರು. 300ಕ್ಕೂ ಹೆಚ್ಚು ವಿಪ್ರ ವಟುಗಳು ವಸಂತ ವೇದ ಶಿಬಿರದಲ್ಲಿ ಪಾಲ್ಗೊಂಡರು.

## ಕರಾಟೆಯಲ್ಲಿ ವಿಶ್ವದಾಖಲೆ



ಎರಡನೇ ಬಾರಿ ಕರಾಟೆಯಲ್ಲಿ ವಿಶ್ವದಾಖಲೆ ಬರೆದ ಖ್ಯಾತ ಈಜು ತರಬೇತುದಾರ ಅನುಪ್ ಕಾಮತ್ ಪ್ರತಿಷ್ಠಿತ ಸಿಂಧ್ಯ ಈಜು ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇವರು ರಿಯಾಲಿಟಿ ಇಂಟರ್ನ್ಯಾಷನಲ್ ಸ್ಪೋರ್ಟ್ಸ್ ಅಕಾಡೆಮಿ ನಡೆಸಿದಂತಹ ಸ್ಪರ್ಧೆಯಲ್ಲಿ ಭಾಗವಹಿಸಿ 90 ಸೆಕೆಂಡಿಗೆ 251 ಪಂಚ್ ಹೊಡೆಯುವ ಮುಖಾಂತರ ವಿಶ್ವ ದಾಖಲೆ ಬರೆದಿದ್ದಾರೆ. ಕ್ರೀಡಾಪಟುವಿಗೆ ಧರ್ಮಸ್ಥಳದ ಧರ್ಮಾಧಿಕಾರಿಗಳು ರಾಜ್ಯಸಭಾ ಸದಸ್ಯರಾದಂತಹ ಡಾ! ಡಿ ವೀರೇಂದ್ರ ಹೆಗ್ಗಡೆ ಅವರು ಪದಕ ನೀಡಿ ಆಶೀರ್ವದಿಸಿರುತ್ತಾರೆ.

ಸಮಾಜ ಸೇವಕರು ಆದ ಅನುಪ್ ಕಾಮತ್ ಅವರು ಪ್ರಾಣಿ ರಕ್ಷಣೆ, ಪ್ರಕೃತಿ ವಿಕೋಪಗಳ ಸಂದರ್ಭಗಳಲ್ಲಿ ಸ್ವಯಂಸೇವಕರಾಗಿ ಕೂಡ ದೇಶಕ್ಕೆ ಸೇವೆ ಸಲ್ಲಿಸುತ್ತಾರೆ. ಅಖಿಲ ಬ್ರಾಹ್ಮಣ ಮಹಾಸಭಾ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾದಂತಹ ಎಂ.ಆರ್. ಶಿವಶಂಕರ್ ರವರು ಕ್ರೀಡಾಪಟುವಿಗೆ ಸದಾ ಪ್ರೋತ್ಸಾಹಿಸಿರುತ್ತಾರೆ.

## ವಿಪ್ರ ಪ್ರತಿಭೆಗಳು



**ಕು। ನಿಶಿತಾ ಟಿ.ಪಿ**

ಬಿ.ಎಸ್ಸಿ 3ನೇ ಸ್ಥಾನ ಸಿಜಿಪಿಎ 8.94%

ನ್ಯಾಷನಲ್ ಕಾಲೇಜ್, ಬಸವನಗುಡಿ

ತಂದೆ: ಶ್ರೀ ಪ್ರಸಾದ್, ಪತ್ರಿಕೋದ್ಯಮಿ

ತಾಯಿ : ರೇಖಾ ಕೆ.ಎನ್., ಉಪನ್ಯಾಸಕಿ

ಸ್ಥಳ : ತುರುವೇಕೆರೆ



**ಕು। ನವ್ಯಶ್ರೀ ಟಿ.ಎಮ್**

ಬಿ.ಸಿ.ಎ. 3ನೇ ಸ್ಥಾನ ಸಿ.ಜಿ.ಪಿ.ಎ. 8.67%

ನ್ಯಾಷನಲ್ ಕಾಲೇಜ್, ಬಸವನಗುಡಿ

ತಂದೆ : ಶ್ರೀ ಮುರಳೀಧರ ರಾವ್

ತಾಯಿ : ಶ್ರೀಮತಿ ಜಯಲಕ್ಷ್ಮಿ ಕೆ.ಎ. ಶಿಕ್ಷಕಿ

ಸ್ಥಳ : ಚಿಂತಾಮಣಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು ನಡೆಸುತ್ತಿರುವ ವಿದ್ಯಾವಾಸಿನಿ ವಿಪ್ರ ಮಹಿಳಾ ವಸತಿ ನಿಲಯದ ಹೆಮ್ಮೆಯ ವಿದ್ಯಾರ್ಥಿನಿಯರಾದ ಕು॥ ನಿಶಿತಾ ಟಿ.ಪಿ. ಹಾಗೂ ಕು॥ ನವ್ಯಶ್ರೀ ಟಿ.ಎಮ್ ರವರು ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ 2022ನೇ ಸಾಲಿನ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳನ್ನು ಪಡೆದು 3ನೇ ಸ್ಥಾನವನ್ನು ಪಡೆದಿರುತ್ತಾರೆ. ಇವರಿಗೆ ಮಹಾಸಭೆಯ ಅಭಿನಂದನೆಗಳು.**

## ರಾಯಚೂರು ವಾಣಿ ಸಂಪಾದಕರಿಗೆ ವರ್ಷದ ವ್ಯಕ್ತಿ ಪ್ರಶಸ್ತಿ



ಅರ್ಧ ಶತಮಾನವನ್ನು ಸುದೀರ್ಘ ಇತಿಹಾಸ ಹೊಂದಿರುವ "ರಾಯಚೂರ ವಾಣಿ" ಕಲ್ಯಾಣ ಕರ್ನಾಟಕದ ಪ್ರಭಾವಶಾಲಿ ಕನ್ನಡ ದಿನಪತ್ರಿಕೆ 53 ವರ್ಷಗಳ ಹಿಂದೆ ಶ್ರೀ ಎನ್.ಕೆ. ಕುಲಕರ್ಣಿಯವರು ಚಿಕ್ಕಪ್ರಮಾಣದಲ್ಲಿ ಇದನ್ನು ಆರಂಭಿಸಿದರು. ಈ ಭಾಗದ ಸಾಮಾಜಿಕ, ಆರ್ಥಿಕ, ರಾಜಕೀಯ ವಿದ್ಯಮಾನ, ಜನಸಾಮಾನ್ಯರ ಮೂಲಭೂತ ಸಮಸ್ಯೆ, ಔದ್ಯೋಗಿಕ ಮತ್ತು ಶೈಕ್ಷಣಿಕ ರಂಗದ ಆಮೆಗತಿ ನದಿಗೆಗೆ ವಿದ್ಯುತ್ ಸಂಚಾರ ನೀಡಿದ ಕೀರ್ತಿ ರಾಯಚೂರ ವಾಣಿ ಪತ್ರಿಕೆಗೆ ಸಲ್ಲುತ್ತದೆ.

ತರುಣ ವಕೀಲರಾಗಿದ್ದ ಶ್ರೀ ಎನ್.ಕೆ. ಕುಲಕರ್ಣಿಯವರು ಆರಂಭದಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್, ಕನ್ನಡ ಪ್ರಭ ಮತ್ತು ಪಿಟಿಐನ ಜಿಲ್ಲಾ ವರದಿಗಾರರಾಗಿ ದುಡಿದರು. ಹಲವು ಸಮಸ್ಯೆಗಳನ್ನು ಹತ್ತಿರದಿಂದ ಕಂಡಿದ್ದ ಕುಲಕರ್ಣಿಯವರನ್ನು ಜಿಲ್ಲೆಯ ಸಮಗ್ರ ಕನಸನ್ನು ಹೊತ್ತು 1970 ಜನವರಿ 24ರಂದು ತಮ್ಮದೆ ಪತ್ರಿಕೆ ಆರಂಭಿಸುವ ಗಟ್ಟಿ ನಿರ್ಧಾರ ಕೈಗೊಂಡರು. ಇಂದು ಬೃಹತ್ತಾಗಿ ಬೆಳೆದು ನಿಂತದ್ದು ನಮ್ಮ ಕಣ್ಣಮುಂದಿದೆ.

ಪತ್ರಿಕೆಯ ಮೂಲಕ ಜನಪರ ಕಾಳಜಿಯನ್ನು ತುಂಬ ಶ್ರದ್ಧೆ, ನಿಷ್ಠೆಯಿಂದ ಕಾರ್ಯನಿರ್ವಹಿಸುತ್ತಿರುವ ಪತ್ರಿಕೆಗೆ ಈ ವರ್ಷದ ಡಾ. ಎಂ. ನಾಗಪ್ಪ ವಕೀಲರು ಪ್ರತಿಷ್ಠಾನವು 2023ನೇಯ ಸಾಲಿನ 'ವರ್ಷದ ವ್ಯಕ್ತಿ' ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಶಸ್ತಿ ವಿಜೇತ ಪತ್ರಿಕೆಯ ಶ್ರೀ ಎನ್.ಕೆ. ಕುಲಕರ್ಣಿಯವರಿಗೆ ಮಹಾಸಭೆಯ ಹೃತ್ಪೂರ್ವಕ ಅಭಿನಂದನೆಗಳು.

# ಶ್ರೀಕ್ಷೇತ್ರ ಗಾಣಗಾಪುರದಲ್ಲಿ ಶಂಕರ ಜಯಂತಿ ಹಾಗೂ ಸಾಮೂಹಿಕ ಉಪನಯನ



ಶ್ರೀ ಕ್ಷೇತ್ರ ಗಾಣಗಾಪೂರದ ಸಮಸ್ತ ವಿಪ್ರ ಬಾಂಧವರಿಂದ ಹಾಗೂ ಗ್ರಾಮಸ್ಥರಿಂದ ಇವತ್ತು ದಿನಾಂಕ 25–4–2023 ರಂದು ಶ್ರೀ ಶ್ರೀ ಆದ್ಯ ಶಂಕರಾಚಾರ್ಯರ ಜಯಂತಿ ಯನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು, ಬೆಳಿಗ್ಗೆ ಭವ್ಯ ಶೋಭಾಯಾತ್ರೆಯ ಮುಖಾಂತರ ಶ್ರೀ ಶ್ರೀ ಆದ್ಯ ಶಂಕರಾಚಾರ್ಯ ಮಠ (ಸಂಗಮ ರಸ್ತೆ) ದಿಂದ ಶ್ರೀ ನಿರ್ಗುಣ ಮಠ (ಶ್ರೀ ನೃಸಿಂಹ ಸರಸ್ವತಿ ದತ್ತಾತ್ರೇಯ ದೇವಸ್ಥಾನ) ಕ್ಕೆ ತೆರಳಿ ಜಯಂತ್ಯೋತ್ಸವವನ್ನು ನೆರವೇರಿಸುವುದರೊಂದಿಗೆ, ಸಾಮೂಹಿಕ ಉಪನಯನದ ವಟುಗಳಿಗೆ ಅಕ್ಷತಾರೋಪಣ ನೆರವೇರಿಸಲಾಯಿತು.

ತದನಂತರ ಶ್ರೀ ಶ್ರೀ ಶಂಕರಾಚಾರ್ಯ ಮಠದ ಆವರಣದಲ್ಲಿ ಸಂಸ್ಕೃತ ಸ್ತೋತ್ರ ಪಠಣ ಹಾಗೂ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಯಿತು, ಹಾಗೂ ಮಾತೆಯರಿಂದ ಭಜನೆ ಸಮರ್ಪಿಸಲಾಯಿತು. ನಂತರ ಮಠದ ಆವರಣದಲ್ಲಿ ESIC ಕಲಬುರ್ಗಿಯವರ ಸಹಯೋಗದಲ್ಲಿ ರಕ್ತದಾನ ಹಾಗೂ ಉಚಿತ ದಂತ ತಪಾಸಣಾ ಶಿಬಿರ ನಡೆಸಲಾಯಿತು.

## ಮಹಾಸಭೆಯಲ್ಲಿ ಆಚಾರ್ಯದ್ವಯರ ಜಯಂತಿ ಆಚರಣೆ



ಮಹಾಸಭೆಯಲ್ಲಿ ಜಗದ್ಗುರು ಶ್ರೀ ಶಂಕರಾಚಾರ್ಯರ ಹಾಗೂ ಶ್ರೀ ರಾಮಾನುಜಾಚಾರ್ಯರ ಜಯಂತಿ ಆಚರಣೆಯನ್ನು ಆಚಾರ್ಯರ ಮಾರ್ತಿಗೆ ಪೂಜೆ–ಆರತಿ ಸಲ್ಲಿಸುವ ಮೂಲಕ ಆಚರಿಸಲಾಯಿತು.

ಮಹಾಸಭಾದ ಹಲವು ಪದಾಧಿಕಾರಿಗಳು ಹಾಗೂ ಸದಸ್ಯರು ಪಾಲ್ಗೊಂಡಿದ್ದು ಈ ಕಾರ್ಯಕ್ರಮದ ಕೊನೆಯಲ್ಲಿ ಪ್ರಸಾದ ವಿತರಣೆ ಮಾಡಲಾಯಿತು.





## ತಾವರೆಕೆರೆ ವಿಪ್ರ ಪರಿಷತ್ ಉದ್ಘಾಟನೆ

ಇಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಅಶೋಕ್ ಹಾರನಹಳ್ಳಿ ಅವರು ಹಾಗೂ ಉಪಾಧ್ಯಕ್ಷರಾದ ಡಿ ವಿ ರಾಜೇಂದ್ರ ಪ್ರಸಾದ್ ಅವರು ಮಾಗಡಿ ರಸ್ತೆಯಲ್ಲಿರುವ ತಾವರೆಕೆರೆ ವಿಪ್ರ ಪರಿಷತ್ತಿನ ಉದ್ಘಾಟನೆಯನ್ನು ನೆರವೇರಿಸಿದರು. ಮುಂದಿನ ದಿನಗಳಲ್ಲಿ ತಾವೆಲ್ಲರೂ ಮಹಾಸಭೆಗೆ ಆಜೀವ ಸದಸ್ಯತ್ವವನ್ನು ಪಡೆಯುವ ಮೂಲಕ ಮಹಾಸಭೆಯು ಹಮ್ಮಿಕೊಂಡಿರುವ ಹಲವಾರು ಯೋಜನೆಗಳಲ್ಲಿ ಭಾಗಿಯಾಗಿ ಮಹಾಸಭೆಯನ್ನು ಬಲಪಡಿಸಬೇಕಾಗಿ ತಿಳಿಸಿದರು.



## ಅಪೋಲೋ ಆಸ್ಪತ್ರೆಯಿಂದ ಮಹಾಸಭಾ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ



ಅಪೋಲೋ ಆಸ್ಪತ್ರೆ, ಬನಶಂಕರಿ 3ನೇ ಹಂತ – ಇವರ ವತಿಯಿಂದ ಹಾಗೂ 'ಚಿಕಿತ್ಸೆಗಾಗಿ ಮಾಡಿಕೊಂಡಿರುವ ಒಡಂಬಡಿಕೆ ಪತ್ರವನ್ನು ಮಹಾಸಭಾ ಅಧ್ಯಕ ಶ್ರೀ ಅಶೋಕ್ ಹಾರನಹಳ್ಳಿಯವರಿಗೆ ಆಸ್ಪತ್ರೆ ಪ್ರತಿನಿಧಿಗಳು ಮಹಾಸಭೆಯ ಪದಾಧಿಕಾರಿಗಳ ಸಮ್ಮುಖದಲ್ಲಿ ನೀಡಿದರು.


ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು–560 050.


**ಸ್ಥಳದ ಬಾಡಿಗೆ ಇರುವುದಿಲ್ಲ**

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**

# ಕರ್ನಾಟಕದ ಸಂಸ್ಕೃತ ಶಿಕ್ಷಕ ಡಾ॥ ನಂದಕುಮಾರ ಅವರಿಗೆ ಬ್ರಿಟನ್ ಅತ್ಯುನ್ನತ ನಾಗರಿಕ ಪ್ರಶಸ್ತಿ:



ಪ್ರತಿಷ್ಠಿತ ಮೆಂಬರ್ ಆಫ್ ದ ಆರ್ಡರ್ ಆಫ್ ದ ಬ್ರಿಟಿಷ್ ಎಂಪೈರ್ (MBE) ಪ್ರಶಸ್ತಿಗೆ ಆಯ್ಕೆಯಾಗಿರುವ ನಂದಕುಮಾರ್ ರವರು ಮೂಲತಃ ಶಿವಮೊಗ್ಗದ ಮತ್ತೂರು ಗ್ರಾಮದವರು. ನಂದಕುಮಾರ್ ರವರಿಗೆ ಸಂಸ್ಕೃತದ ನಂಟು ಮತ್ತೂರಿನ ಪ್ರಭಾವದಿಂದಾಗಿ ಅತ್ಯಂತ ಸಹಜವೆಂಬಂತೆ ಅವರಿಗೆ ಚಿಕ್ಕಂದಿನಿಂದಲೇ ಕರತಾಲಾಮಲಗವಾಗಿತ್ತು ಎಂದರೆ ತಪ್ಪಿಲ್ಲ ಅದಕ್ಕೆ ಪೂರಕವಾಗಿ ಅವರು 10 ನೇ ತರಗತಿಯಲ್ಲಿ ಸಂಸ್ಕೃತ ಭಾಷೆಯಲ್ಲಿ 125 ರಲ್ಲಿ 124 ಅಂಕಗಳನ್ನು ಗಳಿಸಿದರು ಮತ್ತು ವಿಶ್ವವಿದ್ಯಾಲಯದಲ್ಲಿ 4 ನೇ ರ್‍ಯಾಂಕ್ ಗಳಿಸುವ ಮೂಲಕ ಸ್ನಾತಕೋತ್ತರ ಪದವಿಯನ್ನು ಪಡೆದರು.

ಆರಂಭದಲ್ಲಿ ಬೆಂಗಳೂರಿನ ಮಲ್ಲೇಶ್ವರಂನ ರಾಘವೇಂದ್ರ ಪ್ರೌಢ ಶಾಲೆಯಲ್ಲಿ ಸಂಸ್ಕೃತ ಅಧ್ಯಾಪಕನಾಗಿ ವೃತ್ತಿಜೀವನ ಪ್ರಾರಂಭಿಸಿದ ನಂದಕುಮಾರ್ "ಕೆಲವೊಮ್ಮೆ ಕನ್ನಡ ವ್ಯಾಕರಣ ಶಿಕ್ಷಕರ ಕೊರತೆ ಇದ್ದಾಗ, ನಾನಾ ತರಗತಿಗಳಿಗೆ ಕನ್ನಡ ಶಿಕ್ಷಕರಾಗಿಯೂ ಸೇವೆಸಲ್ಲಿಸಿದ್ದಿದೆ. ಇವರ ಇನ್ನೊಂದು ವೈಶಿಷ್ಟ್ಯವೆಂದರೆ ಸಾಮಾನ್ಯವಾಗಿ ಶಾಲೆಗಳಲ್ಲಿ ಶಿಕ್ಷಕರನ್ನು ಶಾಲೆಯ ಆಡಳಿತ ಮಂಡಳಿ ನೇಮಕ ಮಾಡುವುದು ವಾಡಿಕೆ. ಆದರೆ ಇವರದು ಹಾಗಲ್ಲ ಆಡಳಿತ ಮಂಡಳಿ ವಿದ್ಯಾರ್ಥಿಗಳಿಗೆ ಯಾರನ್ನು ಸಂಸ್ಕೃತಶಿಕ್ಷರನ್ನಾಗಿ ನೇಮಿಸಬೇಕು ಎಂದು ಕೇಳಿದಾಗ ವಿದ್ಯಾರ್ಥಿಗಳು ಸೂಚಿಸಿದ್ದು ಇವರ ಹೆಸರನ್ನೇ ಆದ್ದರಿಂದ, ಅವರು ನಿಜವಾಗಿಯೂ ವಿದ್ಯಾರ್ಥಿಗಳಿಂದ ಆಯ್ಕೆಯಾದ ಶಿಕ್ಷಕರು.

ನಂದಕುಮಾರ ಅವರ ಚಿಕ್ಕಪ್ಪ, ಮತ್ತೂರು ಕೃಷ್ಣಮೂರ್ತಿ ಅವರು ಆಗ ಲಂಡನ್ನಲ್ಲಿ ಪ್ರಸಿದ್ಧ ಸಂಸ್ಕೃತ ವಿದ್ವಾಂಸರಾಗಿದ್ದರು ಮತ್ತು ಅಲ್ಲಿ ಭಾರತೀಯ ವಿದ್ಯಾಭವನದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರ ಬಳಿ ವೇದಗಳನ್ನು ಅಧ್ಯಯನ ಮಾಡುತ್ತಿದ್ದ ಫ್ರೆಂಚ್ಮಹಿಳೆ ಜೆನಿನ್ಮಿಲ್ಲ ಭಾರತದ ಸಂಸ್ಕೃತಿ ಮತ್ತು ಸಂಪ್ರದಾಯಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು, ಆಗ ಯುವಕ ನಂದಕುಮಾರ ಇಲ್ಲಿ ಅವರಿಗೆ ಸಹಾಯಕರಾಗಿ ತಮ್ಮ ಕೈಲಾದ ಸಹಾಯವನ್ನು ಮಾಡಿದರು.

ನಂದಕುಮಾರ ಅವರ ಆತಿಥ್ಯ ಮತ್ತು ಅವರ ಜ್ಞಾನಕ್ಕೆ ಜೆನಿನ್ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿ ನಂದಕುಮಾರ್ಅವರಿಗೆ ಹೆಚ್ಚಿನ ಅಧ್ಯಯನಕ್ಕೆ ಲಂಡನಗೆ ಬರುವಂತೆ ಆಹ್ವಾನವನ್ನು ನೀಡಿದರು. ಇದು ನಂದಕುಮಾರ ಅವರಿಗೆ ಭರವಸೆ ಮತ್ತು ಆಸೆಯನ್ನು ಮೂಡಿಸಿತು. ಬಹುತೇಕ ಅದೇ ಸಮಯದಲ್ಲಿ, ಅವರ ಚಿಕ್ಕಪ್ಪಅವರು ಪಿಎಚ್ಡಿ ಮಾಡಲು ಸೂಚಿಸಿದರು. ಅವರ ಚಿಕ್ಕಪನ ಅಣತಿಯಂತೆ ಲಂಡನಗೆ ತೆರಳಿ ಪಿಎಚ್ಡಿ ಮುಗಿಸಿದರು.

ನಂತರ ಅವರು ಲಂಡನ್ನಿನ ಭಾರತೀಯ ವಿದ್ಯಾಭವನದಲ್ಲಿ ಸಂಸ್ಕೃತವನ್ನು ಕಲಿಸಲು ಅಧ್ಯಾಪಕರಾಗಿ ಸೇರಿಕೊಂಡರು ನಂತರ ಅಲ್ಲಿ ಶೈಕ್ಷಣಿಕ ನಿರ್ದೇಶಕರಾಗಿ ನೇಮಕಗೊಂಡರು. ಮತ್ತೂರು ಕೃಷ್ಣಮೂರ್ತಿಯವರು ನಿವೃತ್ತರಾದ ನಂತರ ನಂದಕುಮಾರ ಅವರು ಸಂಸ್ಥೆಯ ಮುಖ್ಯಸ್ಥರಾದರು. ಯುಕೆ ಸರ್ಕಾರದಿಂದ ಈ ಪ್ರತಿಷ್ಠಿತ ಮನ್ನಣೆಗೆ ಆಯ್ಕೆಯಾಗಿರುವ ಈ ಸುಸಂದರ್ಭದಲ್ಲಿ ತಮ್ಮ ಹಳೆಯ ನೆನಪುಗಳನ್ನು ವಿಪ್ರಾನುಡಿ ತಂಡದೊಂದಿಗೆ ಹಂಚಿಕೊಂಡರು ಅಷ್ಟೇಅಲ್ಲದೆ ಇಷ್ಟು ವರ್ಷ ಅವರನ್ನು ನಂಬಿ ಭಾರತೀಯ ವಿದ್ಯಾಭವನಕ್ಕೆ ಸಹಾಯ ಹಸ್ತಚಾಚಿದ ಬೀಟಲ್ಸ್, ಜಾರ್ಜ್ಹ್ಯಾರಿಸನ್, ಪ್ರಿಯಂವದಾಬಿರ್ಲಾ ಇನ್ಫೋಸಿಸ್ನ ಶ್ರೀಮತಿ ಸುಧಾ ಮೂರ್ತಿ ಹೀಗೆ ಹಲವಾರು ಭಾರತೀಯ ವಿದ್ಯಾ ಭವನದ ಹಿತೈಷಿಗಳು ಹಾಗು ಪೋಷಕರನ್ನು ನೆನೆದು ಕೃತಜ್ಞತೆಗಳನ್ನು ಸಲ್ಲಿಸಿದರು ಹಾಗು ಭಾರತೀಯ ವಿದ್ಯಾಭವನವನ್ನು ರೂಪಿಸುವಲ್ಲಿ ಅವರ ಪಾತ್ರ ಅಪಾರವಾದುದು ಎಂದು ಸ್ಮರಿಸಿದರು.

ಇನ್ನು ಪ್ರಶಸ್ತಿಯ ಬಗ್ಗೆ ಹೇಳುವುದಾದರೆ ಈ ಪ್ರಶಸ್ತಿ ಯುನೈಟೆಡ್ಕಿಂಗ್ಡಮ್ನೀಡುವ ಅತಿದೊಡ್ಡ ಗೌರವ ಪ್ರಶಸ್ತಿ ಆಗಿದ್ದು ಈ ಪ್ರಶಸ್ತಿ ಭಾರತ ಸರ್ಕಾರ ಕೊಡಮಾಡುವ ಪದ್ಮಪ್ರಶಸ್ತಿಗಳಿಗೆ ಸಮಾನವಾಗಿದೆ. "ಕಳೆದ 45 ವರ್ಷಗಳಿಂದ, ನಂದಕುಮಾರ ಅವರು ಲಂಡನ್ನಲ್ಲಿ ಭಾರತೀಯ ಕಲೆ ಮತ್ತು ಸಂಸ್ಕೃತಿಗೆ ವಿಶಿಷ್ಟವಾದ ಮನೆಯ ವಾತಾವರಣವನ್ನು ಸೃಷ್ಟಿಸಿದ್ದಾರೆ. ಭವನದ ವಿವಿಧ ಕೊಠಡಿಗಳಲ್ಲಿ ಶಾಸ್ತ್ರೀಯ ಸಂಗೀತ, ಕೂಚಿಪುಡಿ, ಭರತನಾಟ್ಯ ಮತ್ತು ಒಡಿಸ್ಸಿಯಂತಹ ವಿವಿಧ ಕಲಾಪ್ರಕಾರಗಳಿಗೆ ವೇದಿಕೆಯನ್ನು ಕಲ್ಪಿಸಿ. ಈ ತರಗತಿಗಳನ್ನು ಆಯೋಜಿಸುವುದು ಮತ್ತು ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಸಂಘಟಿಸುವುದು ಇಂತಹ ಕ್ಲಿಷ್ಟಕರವಾದ ಕೆಲಸವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದ್ದಾರೆ. ಭಾರತದ ಕಲೆ ಮತ್ತು ಸಂಸ್ಕೃತಿಯನ್ನು ಪಸರಿಸುವಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಿರುವ ನಂದಕುಮಾರ ಅವರಿಗೆ ಇನ್ನಷ್ಟು ಇಂತಹ ಗೌರವ ಅವರನ್ನು ಅರಸಿ ಬರಲಿ ಎಂದು ಈ ಸುಸಂದರ್ಭದಲ್ಲಿ ವಿಪ್ರಾನುಡಿ ಹಾಗು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ತುಂಬು ಹೃದಯದಿಂದ ಅಭಿನಂದಿಸುತ್ತಿದೆ.

# ಬ್ರಾಹ್ಮಣರೇಕೆ ರಾಜಕಾರಣದಲ್ಲಿ ಮೇಲೆ ಬರುತ್ತಿಲ್ಲ ? – ಒಂದು ಚಿಂತನೆ

– ಅಶೋಕ್ ಹಾರನಹಳ್ಳಿ

ರಾಜ್ಯದಲ್ಲಿ ಈಗಷ್ಟೆ ಚುನಾವಣೆ ನಡೆದು ಹೊಸ ವಿಧಾನಸಭೆ ಅಸ್ತಿತ್ವಕ್ಕೆ ಬಂದಿದೆ. ಈ ಚುನಾವಣೆಗಳಲ್ಲಿ ಹೇಗೆ ಜಾತಿ ಮತ್ತು ಹಣ ತನ್ನದೇ ಆದ ರೀತಿಯಲ್ಲಿ ಪ್ರಭಾವ ಬೀರುತ್ತದೆ ಎಂಬುದನ್ನು ಮತ್ತೆ ಮತ್ತೆ ಹೇಳಬೇಕಾಗಿಲ್ಲ. ಹಣದ ಹರಿವು ಕಡಿಮೆ ಮಾಡಲು ಚುನಾವಣ ಆಯೋಗ ದಿಟ್ಟ ಹೆಜ್ಜೆಯನ್ನು ಇಟ್ಟಿರುವುದು ನಿಜಕ್ಕೂ ಪ್ರಶಂಸಾರ್ಹ ವಿಷಯ. ಆದರೆ ಅಭ್ಯರ್ಥಿ ಆಯ್ಕೆ ಬಂದಾಗ ಜಾತಿ ಸಮೀಕರಣವಿಲ್ಲದೆ ಯಾವ ಪಕ್ಷವೂ ಅಭ್ಯರ್ಥಿ ಆಯ್ಕೆ ಮಾಡುವ ದುಸ್ಸಾಹಸಕ್ಕೆ ಕೈಹಾಕವುದಿಲ್ಲ. ಹಾಗೆ ನೋಡಿದರೆ ಪ್ರಜಾಪ್ರಭುತ್ವದ ತಳಹದಿಯಲ್ಲಿ ಜಾತಿ, ಮತ, ಪಂಥ ಇಂತಹ ವಿಷಯಗಳಿಗೆ ಆಸ್ಪದ ಕೊಡದೆ ರಾಷ್ಟ್ರ ಹಿತ, ಅಭಿವೃದ್ಧಿ, ಪ್ರಾಮಾಣಿಕತೆ ಇಂತಹ ವಿಷಯಗಳ ಆಧಾರದ ಮೇಲೆ ಪ್ರತಿನಿಧಿಗಳ ಆಯ್ಕೆ ಆಗಬೇಕು. ಆದರೆ ಬದಲಾದ ಸನ್ನಿವೇಶದಲ್ಲಿ ಜಾತಿ, ಮತ, ಪಂಥ ಇಂತಹ ವಿಷಯಗಳು ಪ್ರಜಾಪ್ರತಿನಿಧಿಗಳ ಆಯ್ಕೆಯ ಮಾನದಂಡವಾಗುತ್ತಿರುವುದು ನಮ್ಮ ವಿಪ್ರ ಸಮುದಾಯದ ಸೇವಾಕಾಂಕ್ಷಿಗಳು ಚುನಾವಣೆಗಳಲ್ಲಿ ಸ್ಪರ್ಧಿಸುವ ಆಲೋಚನೆಯಿಂದಲೇ ವಿಮುಖರಾಗುವಂತೆ ಮಾಡುತ್ತಿದೆ.

ನಮ್ಮಲ್ಲಿ ಹಲವು ಪಕ್ಷಗಳಲ್ಲಿ ಹಲವು ನಾಯಕರು ಹಲವು ಹುದ್ದೆಗಳನ್ನು ಪಡೆದುಕೊಳ್ಳಲು ಅರ್ಹರೇ ಆಗಿದ್ದಾರೆ. ಉದಾಹರಣೆಗೆ ಕಾಂಗ್ರೆಸ್ ಪಕ್ಷದ ಆರ್.ವಿ.ದೇಶಪಾಂಡೆ ಅವರು ನುರಿತ ರಾಜಕಾರಿಣಿ ಹಾಗೂ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಅನುಭವ ಇದೆ. ಅವರಿಗೆ ಮುಖ್ಯಮಂತ್ರಿಯಾಗುವ ಎಲ್ಲ ಅರ್ಹತೆ ಇದೆ. ಆದರೆ ಜಾತಿ ಆಧಾರದ ಹಿನ್ನಲೆಯಲ್ಲಿ ಮುಖ್ಯಮಂತ್ರಿಯಾಗುವ ಅವಕಾಶದಿಂದ ವಂಚಿತರಾದರು ಎಂದರೆ ತಪ್ಪಿಲ್ಲ. ಹಾಗೆಂದು ಇಡಬ್ಲ್ಯುಎಸ್ ಕಾಯ್ದೆಯ ಸಮರ್ಪಕವಾಗಿ ಜಾರಿಯಾಗಬೇಕೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಒತ್ತಾಯಿಸಿದಾಗ ಅದರ ಜಾರಿಯನ್ನು ವಿರೋಧಿಸಿದ್ದು ಕಾಂಗ್ರೆಸ್ ಪಕ್ಷವೇ. ಈ ವಿಷಯದ ನಿಲುವಿನ ಬಗ್ಗೆ ಮಹಾಸಭೆಗೆ ಹಾಗೂ ಬ್ರಾಹ್ಮಣರಲ್ಲಿ ಒಂದು ಬಗೆಯ ಅಸಮಾಧಾನವಿದೆ.

ಇನ್ನು ಬಿಜೆಪಿ ಬಗ್ಗೆ ಹೇಳುವುದಾದರೆ ಬ್ರಾಹ್ಮಣರು ಬಹಳಷ್ಟು ಮಟ್ಟಿಗೆ ಆ ಪಕ್ಷವನ್ನೇ ಬೆಂಬಲಿಸುತ್ತಾರೆ ಮತ್ತು ಬಿಜೆಪಿ ಕೂಡ ಬ್ರಾಹ್ಮಣರೊಂದಿಗಿದೆ ಎಂಬ ಅಭಿಪ್ರಾಯವಿದೆ. ಈ ನಿಟ್ಟಿನಲ್ಲಿ ಯೋಚಿಸಿದರೆ ಇಂತಹದ್ದೊಂದು ಅಭಿಪ್ರಾಯ ಭಾಗಶಃ ಸರಿ ಇಲ್ಲ. ಭಾಜಪ ಬ್ರಾಹ್ಮಣರ ಜೊತೆ ಇದೆ ಎಂದೂ ಹೇಳಲು ಸಾಧ್ಯವಿಲ್ಲ. 2019ರಲ್ಲಿ ಕುಂದಾಪುರದ ಅಖಿಲ ಕರ್ನಾಟಕ ಮಹಾಸಭಾದ ರಾಜ್ಯಮಟ್ಟದ ಸಮ್ಮೇಳನದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಮಹಾಸಭೆಯ ಕಲ್ಯಾಣ ಕಾರ್ಯಕ್ರಮಗಳಿಗೆ ಹಾಗೂ ಮಹಾಸಭಾದ ಕಟ್ಟಡ ನಿಧಿಗೆ 5 ಕೋಟಿ ರೂ. ಅನುದಾನ ಘೋಷಣೆ ಮಾಡಿದ್ದರು. ನಂತರದ ಕರೋನಾ ಕಾರಣದಿಂದಾಗಿ ಈ ಅನುದಾನ ಬಿಡುಗಡೆ ಆಗಲಿಲ್ಲ. ಹಾಗೆಂದು ಮಹಾಸಭೆ ಕೈಕಟ್ಟಿ ಕೂರದೆ ಹಲವು ಬಾರಿ ಈಗಿನ ಮುಖ್ಯಮಂತ್ರಿಗಳಾದ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಅನುದಾನ ಕೇಳಿದರೂ ಅನುದಾನಕ್ಕೆ ಅಂಕಿತ ದೊರೆಯಲಿಲ್ಲ ಹಾಗೂ ಆಶ್ವಾಸನೆ ಆಶ್ವಾಸನೆಯಾಗಿಯೇ ಉಳಿಯಿತು. ಕೊನೆಗೆ ಮಹಾಸಭೆ ಹಮ್ಮಿಕೊಳ್ಳಬೇಕಾದ ಕಲ್ಯಾಣ ಕಾರ್ಯಕ್ರಮಗಳು ಹಾಗೇ ನೆನೆಗುದಿಗೆ ಬಿದ್ದಂತಾಯಿತು.

ಅದಷ್ಟೇ ಅಲ್ಲದೆ ಇಎಡಬಲ್ಯ್ಯುಎಸ್ ಬಗ್ಗೆ ಅನೇಕ ಬಾರಿ ಮನವಿ ಮಾಡಿ ಕೇಳಿಕೊಂಡರೂ, ಮೀಸಲಾತಿಯನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದ್ದರೂ ವಿಳಂಬ ಧೋರಣೆಯನ್ನು ಅನುಸರಿಸಿ ಇನ್ನೇನು ಚುನಾವಣೆಯ ಘೋಷಣೆಗೆ ಕೆಲವೇ ಘಂಟೆಗಳು ಉಳಿದಿವೆ ಎಂದಾಗ ಆದೇಶ ಹೊರಡಿಸಿದರು. ಇವತ್ತಿಗೂ ಅದು ಕಾರ್ಯರೂಪಕ್ಕೆ ಬಂದಿಲ್ಲ.

ಅದೇ ರೀತಿ ಅನೇಕ ಸ್ಥಳಗಳಲ್ಲಿ ಬ್ರಾಹ್ಮಣ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ (ಉದಾ: ಬೆಂಗಳೂರು, ದಕ್ಷಿಣ ಕನ್ನಡ, ಉಡುಪಿ) ಅಂತಹ ಪ್ರದೇಶಗಳಲ್ಲಿ ಬಿಜೆಪಿಯಿಂದ ಬೇರೆ ಸಮುದಾಯದ ಅಭ್ಯರ್ಥಿಗಳಿಗೆ ಸ್ಪರ್ಧಿಸುವ ಅವಕಾಶ ನೀಡಿದರೂ ರಾಷ್ಟ್ರಹಿತಾಸಕ್ತಿ ಹಾಗೂ ಸನಾತನ ಧರ್ಮದ ಒಳಿತನ್ನು ಬಯಸಿ ಯಾವ ಆಮಿಷಗಳಿಗೂ ಒಳಗಾಗದೆ ಬಿಜೆಪಿಯನ್ನು ಬಹುಸಂಖ್ಯಾತ ಬ್ರಾಹ್ಮಣ ಸಮುದಾಯದವರು ಬೆಂಬಲಿಸುತ್ತ ಬಂದಿದ್ದಾರೆ. ಹಾಗೆ ಚುನಾಯಿತರಾದ ಅಭ್ಯರ್ಥಿಗಳು ಬ್ರಾಹ್ಮಣ ಸಮುದಾಯದ ನಿರ್ಣಾಯಕ ಮತಗಳನ್ನು ಪಡೆದು ಬ್ರಾಹ್ಮಣರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಬೇರೊಂದು ಸಮುದಾಯದ ನಾಯಕರನ್ನು ಬೆಂಬಲಿಸುತ್ತಾರೆ ಹಾಗೂ ನಂತರ ನಡೆದ ಯುವ ಕಾರ್ಪೋರೇಷನ್/ಮುನಿಸಿಪಾಲಿಟಿ ಚುನಾವಣೆಗಳಲ್ಲಿ ಬ್ರಾಹ್ಮಣ ಅಭ್ಯರ್ಥಿಗಳು ನೇತಾರರಾಗಿ ಹೊರಹೊಮ್ಮುವ ಅವಕಾಶವನ್ನೇ ಕೊಡದಿರುವ ನಿದರ್ಶನಗಳು ಸಾಕಷ್ಟಿವೆ. ಹೀಗೆ ವಿಪ್ರ ಸಮುದಾಯವನ್ನು ಒಟ್ಟಾರೆಯಾಗಿ ಕಡೆಗಣಿಸಿದ ಪ್ರಸಂಗಗಳು ಹಲವಾಗಿವೆ. ಆದರೆ ಈ ಸಮುದಾಯದವರು ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ಮತ ಚಲಾಯಿಸುತ್ತಿರುವುದು ಒಳ್ಳೆಯ ವಿಚಾರ. ಕೆಲವು ಭಾಗಗಳಲ್ಲಿ ಬ್ರಾಹ್ಮಣರು ಎಲ್ಲ ಪಕ್ಷಗಳಿಂದ ವಿಮುಖರಾಗಿ ನೋಟಾ ಚಲಾಯಿಸಬೇಕು ಎಂದು ಯೋಚನೆ ಮಾಡುತ್ತಿರುವುದು ಸೂಕ್ತ ನಿರ್ಧಾರವಲ್ಲ.

ಆದರೆ ಈ ಬಾರಿಯ ಚುನಾವಣೆಯಲ್ಲಿ ವಿವಿಧ ಪಕ್ಷಗಳಿಗೆ ಸೇರಿದ ಹನ್ನೊಂದು ವಿಪ್ರ ಅಭ್ಯರ್ಥಿಗಳು ಜಯಶೀಲರಾಗಿರುವುದು ಬ್ರಾಹ್ಮಣರೆಲ್ಲರು ಹೆಮ್ಮೆ ಪಡುವಂತಾಗಿದೆ. ಮುಂದಿನ ದಿನಗಳಲ್ಲಿ ಈ ವಿಪ್ರ ಶಾಸಕರು ತಮ್ಮ ಕ್ಷೇತ್ರದ ಎಲ್ಲ ಸಮುದಾಯದ ಹಿತಾಸಕ್ತಿಗಳಿಗೆ ಪ್ರತಿ ಸ್ಪಂದಿಸುವಂತೆಯೆ ತಾವು ಸೇರಿದ ಸಮುದಾಯದ ಹಿತರಕ್ಷಣೆಯನ್ನು ಮಾಡುತ್ತಾರೆಂದು ಆಶಿಸುತ್ತೇನೆ.

## ಅಶಕ್ತ ವಿಪ್ರ-ಅಂಗವಿಕಲರು ಹಾಗೂ ವೃದ್ಧರಿಂದ ಮಾಸಾಶನಕ್ಕಾಗಿ ಅರ್ಜಿ ಆಹ್ವಾನ

**ಸಂಕಷ್ಟದಲ್ಲಿರುವ ಅಶಕ್ತ ವಿಪ್ರ ಬ್ರಾಹ್ಮಣ ಅಂಕವಿಕಲರು ಹಾಗೂ 60 ವರ್ಷ ಮೆಲ್ಪಟ್ಟ ವೃದ್ಧರಿಗೆ ಪ್ರತಿ ತಿಂಗಳು 500 ರೂ.ಗಳನ್ನು ಮಾಸಾಶನ ನೀಡುವ ಯೋಜನೆಗೆ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಈ ಪತ್ರಿಕೆಯಲ್ಲಿ ನೀಡಲಾದ ಅರ್ಜಿ ನಮೂನೆಯನ್ನು ಬಳಸಿ ಅಥವಾ ಮಹಾಸಭಾ / ಮಹಾಸಭೆಯ ಸ್ಥಳೀಯ ಪದಾಧಿಕಾರಿಗಳಿಂದ ಅರ್ಜಿ ನಮೂನೆ ಪಡೆದು, ಅರ್ಜಿ ಸಲ್ಲಿಸಲು ಕೋರಿದೆ.**

## ಮಾಶಾಸನಕ್ಕೆ ಪ್ರಾಯೋಜಕರಾಗಲು ಮನವಿ

**ಮಹಾಸಭೆಯ ಮೆಲ್ಕಂಡ ಮಾಸಾಶನ ಯೋಜನೆಗೆ ಒಂದು ವ್ಯಕ್ತಿಗೆ ವರ್ಷಕ್ಕೆ 6000 ರೂ. ಗಳನ್ನು ನೀಡಿ ಪ್ರಾಯೋಜಕರಾಗಿ ಅಶಕ್ತ ವಿಪ್ರಕರಿಗೆ ನೆರವಾಗುವಂತೆ ಈ ಮೂಲಕ ಸಶಕ್ತ ವಿಪ್ರರಲ್ಲಿ ವಿನಂತಿ. ಕನಿಷ್ಠ 6000 ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತನೀಡಿ ಪ್ರಾಯೋಜಕರಾದವರನ್ನು ವಿಪ್ರನುಡಿಯಲ್ಲಿ ಪರಿಚಯಿಸಲಾಗುವುದು.**

ಪ್ರಧಾನ ಕಾರ್ಯದರ್ಶಿ
ಅಖಿಲ ಕರ್ನಾಟಕ ಬ್ರಹ್ಮಾಣ ಮಹಾಸಭಾ

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)

ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.
ಮೊ : 944 26771695

## ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ

ಹೆಸರು : ____________________

ವಿಳಾಸ ____________________

ಸದಸ್ಯತ್ವದ ಸಂಖ್ಯೆ : __________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.

**ಚಂದಾದಾರರ ಸಹಿ/–**

**AKBMS Membership Account Acc Name :** Akhila Karnataka Brahmana Mahasabha
Bank : Karnataka Bank Ltd A/c No : 1072500102058301I
FSC : KARB0000107BRANCH : BANASHANKARI 2ND STAGE

ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು ಮೊ.ನಂ. 9945840620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸಿ ಚಂದಾದಾರರಾಗಲು ಕೋರಿದೆ.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ( ನೊಂ.)**
**( ವಿದ್ಯಾರಣ್ಯ ಪ್ರತಿಷ್ಠಾನ ಸಂಯುಕ್ತಾಶ್ರಯದೊಂದಿಗೆ )**
ಗಾಯತ್ರಿ ಭವನ, 3070, 9ನೇ ಮುಖ್ಯರಸ್ತೆ, 14ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬಸವನಗುಡಿ
ಬೆಂಗಳೂರು - 560070. ದೂರವಾಣಿ: 080 26771695 E-mail info@akbms.com



ಅರ್ಜಿದಾರರ ಭಾವಚಿತ್ರ

# ಕೇಂದ್ರ ನಿಧಿ ಮಾಸಾಶನಕ್ಕೆ ಅರ್ಜಿ

**ಅರ್ಜಿ ನಂ.**

**ದಿನಾಂಕ :**

| | |
|---|---|
| **ಹೆಸರು :** | **ಹುಟ್ಟಿದ ದಿನಾಂಕ :** |
| **ವಿದ್ಯಾರ್ಹತೆ :** | **ಗೋತ್ರ:** |
| **ತಂದೆಯ ಹೆಸರು :** | **ತಾಯಿಯ ಹೆಸರು :** |
| **ವಸತಿ ವಿಳಾಸ ಮತ್ತು ದೂರವಾಣಿ ಸಂಖ್ಯೆ :** | **ಅರ್ಜಿ ಸಲ್ಲಿಸುತ್ತಿರುವ ವಿಭಾಗ :** ವಿಕಲಚೇತನರು / ಬುದ್ಧಿಮಾಂದ್ಯರು/ ಮಕ್ಕಳಿಂದ ಪರಿತ್ಯಕ್ತರು / ವ್ಯಾಧಿಗ್ರಸ್ತರು / ಅಶಕ್ತರು |
| ಮಹಾಸಭೆಯ ಸದಸ್ಯರೇ ? : ಹೌದು - ☐ ಇಲ್ಲ ☐<br>ಸದಸ್ಯತ್ವ ಸಂಖ್ಯೆ : | **ತಾವು ಈಗಾಗಲೇ ಬೇರೆ ಸಂಸ್ಥೆ / ಸರ್ಕಾರದಿಂದ ಆರ್ಥಿಕ ನೆರವು ಪಡೆಯುತ್ತಿದ್ದರು ಅದರ ವಿವರ :** |
| **ಮಾಸಾಶನದ ಅವಶ್ಯಕತೆ ಕುರಿತು ಹೆಚ್ಚಿನ ವಿವರಣೆ ನೀಡಿ** | **ತಮ್ಮ ಬ್ಯಾಂಕ್ ಖಾತೆಯ ವಿವರಗಳು :**<br>ಬ್ಯಾಂಕ್ ನ ಹೆಸರು<br>ಬ್ರಾಂಚ್<br>ಐ.ಎಫ್.ಎಸ್.ಸಿ ಸಂಖ್ಯೆ<br>ಉಳಿತಾಯ ಖಾತೆ ಸಂಖ್ಯೆ |

**ಕುಟುಂಬದ ವಿವರ**

| ಕ್ರಮ ಸಂಖ್ಯೆ | ಹೆಸರು | ವಯಸ್ಸು | ಸಂಬಂಧ | ಉದ್ಯೋಗ | ವಾರ್ಷಿಕ ವರಮಾನ |
|---|---|---|---|---|---|
| 01 | | | | | |
| 02 | | | | | |

**ಮಾಸಾಶನಕ್ಕೆ ತಮ್ಮನ್ನು ಶಿಫಾರಸ್ಸು ಮಾಡಿರುವ ಸದಸ್ಯರಿಂದ / ಸ್ಥಳೀಯ ಸಂಘ- ಸಂಸ್ಥೆಗಳಿಂದ ದೃಢೀಕರಣ**

| ತಮ್ಮನ್ನು ಪರಿಚಯಿಸಿದವರ ಹೆಸರು, ವಿಳಾಸ ಮತ್ತು ದೂರವಾಣಿ : | ಮಹಾಸಭೆಯ ಸದಸ್ಯತ್ವದ ಸಂಖ್ಯೆ : |
|---|---|
| | |

ಈ ಅರ್ಜಿಯನ್ನು ಸಲ್ಲಿಸಿರುವ ಶ್ರೀ/ ಶ್ರೀಮತಿ_______________________________ ಅವರು ನನಗೆ ವೈಯುಕ್ತಿಕವಾಗಿ ಪರಿಚಿತ ವ್ಯಕ್ತಿಗಳಾಗಿರುತ್ತಾರೆ. ಅರ್ಜಿದಾರರ ಮೇಲ್ಕಂಡ ವಿವರಗಳು ಸತ್ಯವಾಗಿದ್ದು ಅವರು ಗೌರವ ಮಾಸಾಶನಕ್ಕೆ ಅರ್ಹರಾಗಿರುತ್ತಾರೆ, ದಯಮಾಡಿ ಅವರಿಗೆ ಆರ್ಥಿಕ ನೆರವನ್ನು ನೀಡಬೇಕಾಗಿ ವಿನಂತಿಸುತ್ತೇನೆ.

ಪರಿಚಯಿಸಿದವರ ಸಹಿ ಅರ್ಜಿದಾರರ ಸಹಿ

**ನಿಬಂಧನೆಗಳು**

- ಅರ್ಜಿಯಲ್ಲಿ ಎಲ್ಲಾ ಕಾಲಂಗಳನ್ನು ಸರಿಯಾಗಿ ಓದಿ ಭರ್ತಿ ಮಾಡಬೇಕು, ಅರ್ಜಿಯೊಂದಿಗೆ, ತಮ್ಮ ಆಧಾರ್ ಕಾರ್ಡ್ / ಗುರುತಿನ ಚೀಟಿಯ ಪ್ರತಿ, 2 ಫೋಟೋಗಳನ್ನು ಮತ್ತು ಬ್ಯಾಂಕ್ ಪಾಸ್ ಬುಕ್ ನ ಪ್ರತಿಯನ್ನು ಕಡ್ಡಾಯವಾಗಿ ನೀಡಬೇಕು.
- ಅಶಕ್ತ ಮಹಿಳೆಯರು ಅಥವಾ ಪುರುಷರು ಅರ್ಜಿಸಲ್ಲಿಸಲು ವಯೋಮಿತಿ ಕನಿಷ್ಠ 60 ವರ್ಷವಾಗಿರಬೇಕು
- ಮಹಾಸಭೆಗೆ ನೊಂದಯಿತವಾಗಿರುವ ಸ್ಥಳೀಯ ಅಥವಾ ಜಿಲ್ಲಾ ಸಂಘಗಳು ತಮ್ಮಸಂಘದ ಮೊಹರಿ ನೊಂದಿಗೆ ಶಿಫಾರಸು ಮಾಡಬೇಕು ಮತ್ತು ಮಹಾಸಭಾದ ಕಾರ್ಯಕಾರಿ ಸಮಿತಿ ಸದಸ್ಯರು ಅವರ ಹೆಸರು ಮತ್ತು ಸದಸ್ಯತ್ವ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಶಿಫಾರಸು ಮಾಡಬೇಕು.
- ವಿಕಲಚೇತನರಿಗೆ ವಯಸ್ಸಿನ ನಿಬಂಧನೆವಿರುವುದಿಲ್ಲ
- ಪ್ರತಿ ವರ್ಷ ಫಲಾನುಭವಿಯು, ಜೀವಂತವಾಗಿರುವುದಕ್ಕೆ ಘೋಷಣೆಯ ಪ್ರಮಾಣಪತ್ರವನ್ನು ನಮಗೆ ನೀಡಬೇಕು.

---

**ಕಚೇರಿಯ ಉಪಯೋಗಕ್ಕಾಗಿ**

ಅರ್ಜಿದಾರರ ಕೋರಿಕೆಯನ್ನು ಮನ್ನಿಸಿ ಶ್ರೀ/ ಶ್ರೀಮತಿ_______________________ ಅವರಿಗೆ_____________ ಮಾಸದಿಂದ ಒಂದು ವರ್ಷದ ಅವಧಿಗೆ Rs. 500/- ( ಐದುನೂರು ರೂಗಳನ್ನು) ನೀಡಲು ಪರಿಶೀಲನೆಯ ನಂತರ ಮಂಜೂರು ಮಾಡಲಾಗಿದೆ

ಸಮಿತಿಯ ಸಂಚಲಕರರು ಅಧ್ಯಕ್ಷರು / ಕಾರ್ಯದರ್ಶಿಗಳು

# ಫ್ರಾನ್ಸ್ ದೇಶದ ಅತ್ಯುನ್ನತ ನಾಗರೀಕ ಪ್ರಶಸ್ತಿ ವಿಜೇತ ನಟರಾಜನ್ ಚಂದ್ರಶೇಖರನ್ ಅವರ ಅದ್ಭುತ ಯಶೋಗಾಥೆ



ಇದು ರೈತಾಪಿ ಕುಟುಂಬದಲ್ಲಿ ಜನಿಸಿ TCS ನಲ್ಲಿ ಇಂಟರ್ನ್ ಆಗಿ ಸೇರಿ ನಂತರ ಟಾಟಾ ಸನ್ಸ್ ಅಧ್ಯಕ್ಷರಾದ ನಟರಾಜನ್ ಚಂದ್ರಶೇಖರನ್ ಅವರ ಅದ್ಭುತ ಯಶೋಗಾಥೆ.

1963 ರಲ್ಲಿ ತಮಿಳುನಾಡಿನ ಮೊಹನೂರ್ ಗ್ರಾಮದಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದ ಎನ್ ಚಂದ್ರಶೇಖರನ್ ಬಾಲ್ಯದಿಂದಲೂ ಕಂಪ್ಯೂಟರ್ ಪ್ರೋಗ್ರಾಮಿಂಗ್ ಕಡೆಗೆ ಒಲವು ಹೊಂದಿದ್ದರು, ಹೀಗೆ ಕೃಷಿ ಕುಟುಂಬದಲ್ಲಿ ಜನಿಸಿದ ಚಂದ್ರಶೇಖರರ ಮುಂದೊಂದು ದಿನ ಇಂಟರ್ನ್ ಆಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದ ಅದೇ ಕಂಪನಿಯ ಸಮೂಹ ಸಂಸ್ಥೆಗಳಿಗೆ ಅಧ್ಯಕ್ಷರಾಗುತ್ತಾರೆಂದು ಅವರ ಮನೆಯವರು, ಸ್ನೇಹಿತರು ಯಾರು ಊಹಿಸಿರಲಿಕ್ಕಿಲ್ಲ. ಆದರೆ ಚಂದ್ರಶೇಖರರ ನಿರಂತರ ಶ್ರಮ ತಾವು ನಿರ್ವಹಿಸುತ್ತಿದ್ದ ಕೆಲಸದ ಕಡೆಗಿದ್ದ ತನ್ಮಯತೆ ಹಾಗು ಅವರಲ್ಲಿದ್ದ ಬಿಸಿನೆಸ್ ಅಕ್ಯುಮಿನ್ ಅವರನ್ನು ಇಂದು ಈ ಸ್ಥಾನಕ್ಕೇರುವಂತೆ ಮಾಡಿದೆ ಎಂದರೆ ತಪ್ಪಾಗಲಾರದು.

ಕಾರ್ಪೊರೇಟ್ ವಲಯದಲ್ಲಿ "ಚಂದ್ರ" ಎಂದೇ ಕರೆಯಲ್ಪಡುವ ಚಂದ್ರಶೇಖರನ್ ಅವರು 2017 ರಲ್ಲಿ ಸೈರಸ್ ಮಿಸ್ತ್ರಿಯ ಪದಚ್ಯುತಿಯ ನಂತರ ಅತ್ಯಂತ ಕಠಿಣ ಸಂದರ್ಭದಲ್ಲಿ ಟಾಟಾ ಸನ್ಸ್‌ನ ಉನ್ನತ ಹುದ್ದೆಯನ್ನು ವಹಿಸಿಕೊಂಡರು.

ಹಾಗೆ ನೋಡಿದರೆ ಚಂದ್ರು ಅವರ ಜೀವನ, ಸಾಧನೆ, ಓದು ಎಲ್ಲವೂ ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದೆ ಎಂದರೆ ತಪ್ಪಿಲ್ಲ, ಸಾಮಾನ್ಯವಾಗಿ ಸರ್ಕಾರಿ ಶಾಲೆಗಳೆಂದರೆ ಮೂಗು ಮುರಿಯುವವರೇ ಹೆಚ್ಚು. ಆದರೆ ಚಂದ್ರ ಸರ್ಕಾರಿ ಶಾಲೆಯಲ್ಲಿ ವಿದ್ಯಾಭಾಸ ಪಡೆದು ನಂತರ ಕೊಯಮತ್ತೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಅಪ್ಲೈಡ್ ಸೈನ್ಸಸ್‌ನಲ್ಲಿ ಪದವಿ ಪಡೆದರು ನಂತರ ತಿರುಚನಾಪಳ್ಳಿಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ತಮ್ಮ ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ (MCA) ಅನ್ನು ಪೂರ್ಣಗೊಳಿಸಿದರು.

ಇಂಜಿನಿಯರಿಂಗ್ ಮುಗಿಸಿದ ನಟರಾಜನ್ ಚಂದ್ರಶೇಖರನ್ 1987ರಲ್ಲಿ TS ನಲ್ಲಿ ಇಂಟರ್ನ್ ಆಗಿ ಸೇರಿದರು. ತದ ನಂತರ ಚಂದ್ರ ವೃತ್ತಿ ಜೀವನದಲ್ಲಿ ಹಿಂದಿರುಗಿ ನೋಡಿದ್ದೇ ಇಲ್ಲ. ಮುಂದಿನ ಎರಡು ದಶಕಗಳಲ್ಲಿ ಚಂದ್ರ ಒಂದೊಂದೇ ಯಶಸ್ಸಿನ ಮೆಟ್ಟಿಲನ್ನು ಏರುತ್ತ ಹೋದರು. ಸೆಪ್ಟೆಂಬರ್ 2007 ರಲ್ಲಿ, ಅವರು TCS ಮಂಡಳಿಗೆ ಆಯ್ಕೆಯಾಗಿ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ (COO) ಜವಾಬ್ದಾರಿ ವಹಿಸಿಕೊಂಡರು. ಅವರ ಕಠಿಣ ಪರಿಶ್ರಮ ಮತ್ತು ದೃಢಸಂಕಲ್ಪದಿಂದ, ಎನ್ ಚಂದ್ರಶೇಖರನ್ ಅಕ್ಟೋಬರ್ 2009 ರಲ್ಲಿ 45 ನೇ ವಯಸ್ಸಿನಲ್ಲಿ ಎಸ್. ರಾಮದೂರೆ ಅವರ ಉತ್ತರಾಧಿಕಾರಿಯಾಗಿ ಸಿಇಒ ಹುದ್ದೆ ಅಲಂಕರಿಸಿ. ಟಾಟಾ ಸಮೂಹದ ಅತ್ಯಂತ ಕಿರಿಯ CEO ಗಳಲ್ಲಿ ಒಬ್ಬರಾದರು.

ಹೀಗೆ ಹಂತ ಹಂತವಾಗಿ ಉನ್ನತ ಹುದ್ದೆಗಳನ್ನು ಅಲಂಕರಿಸುತ್ತ ಹೋದ ಚಂದ್ರ ಅವರ ಟಾಟಾ ಸಮೂಹ ಸಂಸ್ಥೆಗಳಲ್ಲಿ ನಿರ್ವಹಿಸಿದ ಜವಾಬ್ದಾರಿ ಹಾಗು ಕೊಡುಗೆ ಅಪಾರವಾದುದು.

ಅವರ ಮಾರ್ಗದರ್ಶನದಲ್ಲಿ, ಟಾಟಾ ಸಮೂಹವು 2017 ರಲ್ಲಿ 36,728 ಕೋಟಿ ರೂ.ಗಳಿಂದ 2022 ರಲ್ಲಿ 64,267 ಕೋಟಿ ರೂ.ಗಳ ಕ್ರೋಢೀಕೃತ ಲಾಭವನ್ನು ಗಳಿಸುವಲ್ಲಿ ಯಶಸ್ವಿಯಾಯಿತು ಅಂದರೆ ಲಾಭಾಂಶವು ದುಪ್ಪಟಾಗುವಲ್ಲಿ ಪಟ್ಟ ಶ್ರಮ ಅಪಾರವಾದುದು ಕಳೆದ 5 ವರ್ಷಗಳಲ್ಲಿ, ಟಾಟಾ ಸಮೂಹದ ಆದಾಯವು 6,301 ಲಕ್ಷ ಕೋಟಿ ರೂ.ಗಳಿಂದ 9.44 ಲಕ್ಷ ಕೋಟಿ ರೂ. ಗೇ ಏರಿದಯಂದರೆ ನೀವು ನಂಬಲೇಬೇಕು.

ಒಂದು ಸಾಮಾನ್ಯ ಕೃಷಿ ಕುಟುಂಬದಲ್ಲಿ ಜನಿಸಿ ಸುಮಾರು 109 ಕೋಟಿ ರೂಪಾಯಿಗಳ ಸಂಬಳವನ್ನು ಚಂದ್ರು ಇಂದು ಪಡೆಯುತ್ತಿದ್ದರೆಂದರೆ ಹುಬ್ಬೇರಿಸದವರಿಲ್ಲ. ಹೀಗೆ ಇಂತಹ ಸಾಧಕರಿಂದ ನಮ್ಮ ಯುವಜನತೆ ಸ್ಫೂರ್ತಿ ಪಡೆದು ಹೊಸದೊಂದು ಗಮ್ಯದತ್ತ ಸಾಗುವ ಅವಕಾಶಗಳಿಗೆ ತಮ್ಮನು ತಾವು ತೆರೆದು ಕೊಳ್ಳಲು ಇಂತಹ ಸಾಧಕರ ಯಶೋಗಾಥೆಯು ಪ್ರೇರಣೆಯಾಗಬೇಕು.

ಫ್ರಾನ್ಸ್ ದೇಶದ ಅತ್ಯುನ್ನತ ನಾಗರೀಕ ಪ್ರಶಸ್ತಿ "ನೈಟ್ ಆಫ್ ದಿ ಲೆಗಿನ್ ಆನರ್" (Knight of Legion Honour) ಪ್ರಶಸ್ತಿಗೆ ಭಾಜನರಾದ ಶ್ರೀ ಚಂದ್ರಶೇಖರವರಿಗೆ ಮಹಾಸಭೆಯ ಹಾರ್ದಿಕ ಅಭಿನಂದನೆಗಳು.

ವಂದನೆಗಳೊಂದಿಗೆ,

**ಕಾರ್ತಿಕ್ ಎಸ್. ಬಾಪಟ್**

## ಶ್ರೀ ಸತ್ಯಪ್ರಮೋದ ಕಟ್ಟಿಗೆ ಶ್ರೀ ಸತ್ಯತೀರ್ಥ್ ಅನುಗ್ರಹ ಪ್ರಶಸ್ತಿ

ಭಂಡಾರಕೇರಿ ಮಠದ ವತಿಯಿಂದ ನೀಡಲಾಗುವ ಶ್ರೀ ಸತ್ಯತೀರ್ಥ್ ಅನುಗ್ರಹ ಪ್ರಶಸ್ತಿಗೆ ಉತ್ತರಾದಿ ಮಠದ ಶ್ರೀ ಜಯತೀರ್ಥ ವಿದ್ಯಾಪೀಠದ ವಿದ್ವಾನ್ ಸತ್ಯಪ್ರಮೋದ ಕಟ್ಟಿ ಆಯ್ಕೆಯಾಗಿದ್ದಾರೆ. ಇವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ವಿನಮ್ರತಾ ಪೂರ್ವಕ ಹಾರ್ದಿಕ ಅಭಿನಂದನೆಗಳು.

ಸಮಗ್ರ ಶ್ರೀಮನ್ನ್ಯಾಯಸುಧಾ ಗ್ರಂಥವನ್ನು ಅನೇಕ ಪೀಠಾಧಿಪತಿಗಳ, ಉತ್ತರ ದಕ್ಷಿಣ ಭಾರತದ ಅನೇಕ ವಿದ್ವಾಂಸರ ಸಮ್ಮುಖದಲ್ಲಿ ಮುಖೋದ್ಗತವಾಗಿ ಪರೀಕ್ಷೆ ನೀಡಿ ಪರಿಪೂರ್ಣ ಮಟ್ಟದಲ್ಲಿ ನೂರಕ್ಕೆ ನೂರು ಅಂಕಗಳನ್ನು ಪಡೆದು ಸುಧಾವಿಶಾರದ ಎಂಬ ಬಿರುದನ್ನು ಪಡೆದು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

# ದಿವಾನ್ ನ್ಯಾಪತಿ ಮಾಧವರಾಯರು

**– ಸುರೇಶ್ ಮೂನ**



ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್ಮಿರ್ಜಾಇಸ್ಮಾಯಿಲ್ ಅವರ ದೀರ್ಘಾವಧಿ ಅಧಿಕಾರ ಮುಗಿದ ನಂತರ ಅಷ್ಟೇ ಸಮರ್ಥರೂ, ಪ್ರತಿಭಾವಂತರೂ ಆದ ದಿವಾನರನ್ನು ಆಗಿನ ಮಹಾರಾಜ ಜಯಚಾಮರಾಜ ಒಡೆಯರು ನೇಮಿಸಬೇಕಾಗಿತ್ತು. ಆ ವೇಳೆಗಾಗಲೇ ಮೈಸೂರು ಸಂಸ್ಥಾನವು ಇಡೀ ದೇಶಕ್ಕೆ ಒಂದು ಮಾದರಿ ರಾಜ್ಯವೆಂಬ ಪ್ರಸಿದ್ಧಿಗೆ ಒಳಗಾಗಿತ್ತು. ಈ ಹೆಸರನ್ನು ಉಳಿಸಿಕೊಂಡು ಅದನ್ನು ಮುಂದುವರಿಸಿಕೊಂಡು ಹೋಗುವುದು ಬಹಳ ಮುಖ್ಯವಾಗಿತ್ತು. ಕನ್ನಡನಾಡಿನ ಪುಣ್ಯವೋ ಏನೋ ಆಗ ಮಹಾರಾಜರ ಕಣ್ಣಿಗೆ ಗೋಚರವಾದವರು ನ್ಯಾಪತಿಮಾಧವರಾಯರು. ಮಹಾರಾಜರು ಪತ್ರ ಬರೆದರು. ಬೆಂಗಳೂರಿನಲ್ಲಿದ್ದ ಇವರು ಕೂಡಲೇ ಮೈಸೂರಿಗೆ ಹೋಗಿ ಮಹಾರಾಜರನ್ನು ಭೇಟಿಯಾಗಿ ಅರಸರ ಆದೇಶದಂತೆ 1941 ರ ಜೂನ್ 1 ರಂದು ಕನ್ನಡನಾಡಿನ ದಿವಾನರಾಗಿ ಅಧಿಕಾರ ಸ್ವೀಕರಿಸಿದರು.

ಇವರು ಆಂಧ್ರಪ್ರದೇಶದ ಮಚಲಿಪಟ್ಟಣ ಎಂಬಲ್ಲಿ 1887ರ ಜೂನ್ 8 ರಂದು ವೆಂಕಟರಾವ್ ಮತ್ತು ನರಸಮ್ಮ ಬ್ರಾಹ್ಮಣ ದಂಪತಿಗಳಿಗೆ ಜನಿಸಿದರು. ನ್ಯಾಪತಿ ಇವರ ಮನೆತನದ ಹೆಸರು. ವಿದ್ಯಾರ್ಥಿಯಾಗಿದ್ದಾಗಲೇ ಬಹಳ ಬುದ್ಧಿವಂತರಾಗಿದ್ದರು. ಮಚಲಿಪಟ್ಟಣದ ನೊಬೆಲ್ಕಾಲೇಜಿನಲ್ಲಿ ತಮ್ಮ ಎಫ್. ಎ ಪರೀಕ್ಷೆ ಮುಗಿಸಿ ಮದರಾಸಿನ ಪಾಚಿಯಪ್ಪ ಕಾಲೇಜಿನಲ್ಲಿ ಬಿ. ಎ ನಲ್ಲಿ ಪ್ರಥಮ ರ್‍ಯಾಂಕ್ ಪಡೆದರು.

1907 ರಲ್ಲಿ ಮೈಸೂರು ಸಿವಿಲ್ ಪರೀಕ್ಷೆಯಲ್ಲಿ ಮತ್ತು 1909 ರಲ್ಲಿ ಮದರಾಸಿನ ವಿಶ್ವ ವಿದ್ಯಾನಿಲಯದ ಬಿ.ಎಲ್ಪದವಿ ಪರೀಕ್ಷೆಯಲ್ಲೂ ಪ್ರಥಮ ಸ್ಥಾನವನ್ನು ಪಡೆದರು.

ಎಂಸಿಎಸ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿ ಪಡೆದ ಇವರು ಕನ್ನಡನಾಡಿಗೆ ಬರುತ್ತಿದ್ದಂತೆ ಸರ್ಕಾರವು ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ ಕಿರಿಯ ಸಹಾಯಕ ಆಯುಕ್ತರನ್ನಾಗಿ ನೇಮಿಸಿತು. ಅಲ್ಲಿಂದ ಮುಂದೆ ತಮ್ಮ ಜಾಣ್ಮೆ, ಕಾರ್ಯದಕ್ಷತೆ ಇವುಗಳಿಂದ ಹಂತಹಂತವಾಗಿ ಉನ್ನತ ಹುದ್ದೆಗಳಿಗೆ ನೇಮಕಗೊಂಡರು. ಸರ್. ಎಂ ವಿಶ್ವೇಶ್ವರಯ್ಯನವರು ಹೊರದೇಶದ ಪ್ರವಾಸಕ್ಕೆ ಹೋದಾಗ ಇವರನ್ನು ಮೈಸೂರು ಕಬ್ಬಿಣ ಕಾರ್ಖಾನೆಯ ಆಡಳಿತ ಮಂಡಳಿಯ ಸದಸ್ಯರನ್ನಾಗಿ ನೇಮಕ ಮಾಡಲಾಯಿತು. 1927 ರಲ್ಲಿ ಮೈಸೂರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾಗಿ ನೇಮಕಗೊಂಡರು. ಇಲ್ಲಿನ ಶ್ರೀಗಂಧದ ಕಾರ್ಖಾನೆಯಲ್ಲಿ ನಡೆದ ಹಗರಣವು ವಿಚಾರಣೆಗೆ ಒಳಪಟ್ಟಿತ್ತು. ಇದಕ್ಕೆ ಸಂಬಂಧಿಸಿದಂತೆ ಸರಕಾರವು ಇವರನ್ನು ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳಿಗೆ ಕಳುಹಿಸಿಕೊಟ್ಟಿತ್ತು. ಇವರು ಕೈಗೊಂಡ ಸೂಕ್ತ ಕಾನೂನು ಕ್ರಮದಿಂದಾಗಿ ಸರ್ಕಾರಕ್ಕೆ ಬರಬೇಕಾದ ಬಾಕಿ ಹಣವೆಲ್ಲ ಪಾವತಿ ಆಯಿತು. ಇದರಿಂದ ಸಂತೋಷಗೊಂಡ ಮಹಾರಾಜರು ಇವರಿಗೆ 1936 ರಲ್ಲಿ 'ರಾಜಮಂತ್ರ ಪ್ರವೀಣ' ಎಂಬ ಬಿರುದನ್ನು ಕೊಟ್ಟು ಗೌರವಿಸಿದರು.

ಇವರು ದಿವಾನರಾಗಿದ್ದ ಸಮಯದಲ್ಲಿ ಎರಡನೇ ಮಹಾಯುದ್ಧವು ಪ್ರಾರಂಭವಾಯಿತು. ಅದರ ಪರಿಣಾಮ ನಮ್ಮ ದೇಶದ ಮೇಲೂ ಉಂಟಾಗಿತ್ತು. ಆಹಾರ ಮತ್ತಿತರ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿ ಸಾಮಾನ್ಯ ಜನರ ಜೀವನ ಬಹಳ ದುಸ್ತರವಾಗಿತ್ತು. ಆಗ ಇವರು ಬೆಂಗಳೂರು ಮತ್ತು ನಮ್ಮ ರಾಜ್ಯದ ಇತರ ಪ್ರದೇಶಗಳಲ್ಲೂ ಆಹಾರ ಪದಾರ್ಥಗಳು ಎಲ್ಲರಿಗೂ ದೊರಕುವಂತೆ ಮಾಡಲು ಮೊದಲ ಬಾರಿಗೆ ರೇಷನ್ ಕಾರ್ಡ್ ಬಳಕೆಯನ್ನು ಜಾರಿಗೆ ತಂದರು. ಕೃಷಿ ಕ್ಷೇತ್ರದ ತಜ್ಞರು ರಾಜ್ಯದ ಮೂಲೆಮೂಲೆಗಳಿಗೂ ಹೋಗಿ ರೈತರಿಗೆ ಸುಧಾರಿತ ವಿಧಾನದಿಂದ ಹೆಚ್ಚು ಬೆಳೆ ಬೆಳೆಯುವ ಕ್ರಮದ ಬಗ್ಗೆ ತಿಳುವಳಿಕೆ ನೀಡಿದರು. ಮಾಧವರಾವ್ ಅವರಿಗೆ ಗ್ರಾಮೀಣ ಕ್ಷೇತ್ರಗಳ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಅಪಾರವಾದ ಕಾಳಜಿ ಇತ್ತು. ರಾಜ್ಯದ ವಿವಿಧ ಭಾಗಗಳಿಗೆ ಪ್ರವಾಸ ಹೋದಾಗ ಗ್ರಾಮ ಪಂಚಾಯಿತಿಯ ಕಚೇರಿಯಲ್ಲೇ ಕುಳಿತು ಗ್ರಾಮಸ್ಥರ ಕುಂದುಕೊರತೆಗಳನ್ನು ತಾಳ್ಮೆಯಿಂದ ಆಲಿಸುತ್ತಿದ್ದರು. ಅಲ್ಲಿನ ಅನುಕೂಲಸ್ಥರು, ಶ್ರೀಮಂತರು ಮುಂತಾದವರನ್ನು ಕರೆಸಿ ಆಸ್ಪತ್ರೆ, ಶಾಲೆ, ದೇವಸ್ಥಾನ ಮುಂತಾದ ಸಾರ್ವಜನಿಕ ಸೇವಾಕಾರ್ಯಗಳಿಗೆ ಧನಸಹಾಯ ಮಾಡಲು ಪ್ರೇರೇಪಿಸುತ್ತಿದ್ದರು. ತಮ್ಮ ಹಳ್ಳಿಯ ಬಗ್ಗೆ ಇವರು ವಹಿಸುತ್ತಿದ್ದ ಆಸಕ್ತಿಯನ್ನು ಕಂಡು ಅವರೆಲ್ಲರೂ ಸಂತೋಷದಿಂದಲೇ ತನು–ಮನ–ಧನಗಳನ್ನು ಅದರ ಅಭಿವೃದ್ಧಿಗೆ ನೀಡುತ್ತಿದ್ದರು.

ಆಗ ಎದುರಾಗಿದ್ದ ಮತ್ತೊಂದು ಸಮಸ್ಯೆಯೆಂದರೆ ಯುದ್ಧವನ್ನು ಎದುರಿಸುವ ಅದರ ಪರಿಣಾಮಗಳನ್ನು ನಿವಾರಿಸಿಕೊಳ್ಳುವ ಬಗ್ಗೆಯೂ ಜನರಲ್ಲಿ ಅರಿವು ಮೂಡಿಸುವ ಬಗ್ಗೆ ಬ್ರಿಟಿಷ್ ಸರ್ಕಾರ ಆದೇಶ ನೀಡಿತ್ತು. ಇವರು ಆಗ ನ್ಯಾಷನಲ್ಡಿಫೆನ್ಸ್ಫೋಸ್ ಎಂಬ ರಾಷ್ಟ್ರೀಯ ರಕ್ಷಣಾಬಲ ಸಂಸ್ಥೆಯನ್ನು ಪ್ರಾರಂಭಿಸಿದರು. 1942 ರ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಯುದ್ಧದಲ್ಲಿ ಬಳಸುವ ಸಾಮಗ್ರಿಗಳನ್ನು

ಸಾರ್ವಜನಿಕರು ನೋಡಿ ಅವುಗಳ ಬಗ್ಗೆ ಜ್ಞಾನ ಪಡೆದುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು.

ಮಾಧವರಾಯರನ್ನು ಬಹಳ ಹತ್ತಿರದಿಂದ ಕಂಡ ಹಾಗೂ ಅವರ ಅಭಿಮಾನಕ್ಕೆ ಪಾತ್ರವಾಗಿದ್ದ ಡಾ. ಡಿವಿಜಿ ಯವರು...'ನಮ್ಮ ನಾಡಿನ ಜನ ಉತ್ತಮ ಸಂಸ್ಕಾರವನ್ನು ಉಳ್ಳವರಾಗಿರಬೇಕು, ನಡೆ–ನುಡಿ ಆಚಾರ ವಿಚಾರಗಳಲ್ಲಿ ಸಭ್ಯತೆ ಇರಬೇಕು, ಗೌರವಯುತವಾದ ಜೀವನ ನಡೆಸಬೇಕು ಎಂಬುದು ಅವರ ಅಭಿಲಾಷೆಯಾಗಿತ್ತು...' ಎಂದಿದ್ದಾರೆ.

ಇವರ ವೈವಿಧ್ಯಮಯ ಸೇವೆಯ ಪರಿಯನ್ನು ಗುರುತಿಸಿ 1942 ರಲ್ಲಿ ಮಹಾರಾಜರು 'ಪ್ರಧಾನ ಶಿರೋಮಣಿ' ಎಂದೂ 1943 ರಲ್ಲಿ ಬ್ರಿಟಿಷ್ ಸರ್ಕಾರವು ಇವರಿಗೆ 'ಕಂಪ್ಯಾನಿಯನ್ ಆಫ್ ಇಂಡಿಯನ್ ಎಂಪೈರ್' ಎಂಬ ಬಿರುದನ್ನು ಕೊಟ್ಟು ಗೌರವಿಸಿದರು. ಹೀಗೆ ಅಪಾರವಾದ ಕಾರ್ಯದಕ್ಷತೆ ಮುಂತಾದ ಸದ್ಗುಣಗಳನ್ನು ಹೊಂದಿದ್ದ ಇವರು 1945 ಆಗಸ್ಟ್ 7 ರಂದು ದಿವಾನ್ ಪದವಿಯಿಂದ ನಿವೃತ್ತರಾದರು.

ಆದರೆ ಸರಕಾರ ಇವರನ್ನು ಬಿಡಲಿಲ್ಲ. 1952 ರಲ್ಲಿ ಬೆಂಗಳೂರಿನ ಸರ್ವಾಂಗೀಣ ಬೆಳವಣಿಗೆಯ ಬಗ್ಗೆ ವಿಸ್ತೃತ ಅಧ್ಯಯನ ಮಾಡಲು ಆಗ ಸರಕಾರ ರಚಿಸಿದ 'ದಿ ಬೆಂಗಳೂರು ಡೆವಲಪ್‌ಮೆಂಟ್ ಕಮಿಟಿ' ಸಮಿತಿಯ ಮುಖ್ಯಸ್ಥರನ್ನಾಗಿ ಇವರನ್ನು ನೇಮಿಸಲಾಯಿತು. ಎರಡು ವರ್ಷಗಳ ನಂತರ 1954 ರಲ್ಲಿ ಈ ಸಮಿತಿಯು ಹದಿನೆಂಟು ಅಧ್ಯಾಯಗಳ ಒಂದು ಬೃಹತ್ಪ್ರಮಾಣದ ವರದಿಯನ್ನು ಪ್ರಕಟಿಸಿತು. 'ಗ್ರೇಟರ್ ಬೆಂಗಳೂರು' ಎಂದೇ ಪ್ರಸಿದ್ಧವಾದ ಈ ವರದಿ ಮಾಧವರಾಯರ ಮಾರ್ಗದರ್ಶನದಲ್ಲಿ ಈ ಸಮಿತಿಯು ಬೆಂಗಳೂರು ನಗರವು ಮುಂದಿನ ಹಲವಾರು ದಶಕಗಳ ನಂತರ ಎಲ್ಲ ಕ್ಷೇತ್ರಗಳಲ್ಲೂ ಕಾಣಬಹುದಾದ ಬೆಳವಣಿಗೆಗೆ ತಕ್ಕಂತೆ ಯೋಜನೆಗಳನ್ನು ರೂಪಿಸಲು ಸಲಹೆ ನೀಡಿತ್ತು. ಇದರಲ್ಲಿ ಅವರೆಲ್ಲರಿಗೂ ಈ ನಗರದ ಅಭಿವೃದ್ಧಿಯ ಬಗ್ಗೆ ಇದ್ದ ಆಸಕ್ತಿ, ಕಾಳಜಿ ಮತ್ತು ಶ್ರದ್ಧೆ ಇವುಗಳು ಸ್ಪಷ್ಟವಾಗಿ ಕಂಡುಬರುತ್ತದೆ.

ದಿವಾನ್ ಸರ್ ಮಿರ್ಜಾ ಅವರಂತೆಯೇ ನಗರದ ಸೌಂದರ್ಯದ ಬಗ್ಗೆ ಅಪಾರವಾದ ಆಸಕ್ತಿಯಿದ್ದ ಮಾಧವರಾಯರು ಲಾಲ್ಬಾಗಿನ ನಿರ್ದೇಶಕರಾಗಿದ್ದ ರಾವ್ ಬಹದ್ದೂರ್ ಹೆಚ್. ಸಿ ಜವರಾಯ ಅವರನ್ನು ರಾಜ್ಯದ ಕೈತೋಟಗಳ ಇಲಾಖೆಯ ನಿರ್ದೇಶಕರನ್ನಾಗಿ ನೇಮಿಸಿ ನಮ್ಮ ನಾಡಿನ ಹಸಿರು ಸಂಪತ್ತು ಶ್ರೀಮಂತಗೊಳ್ಳಲು ಕಾರಣರಾದರು. ಡಾ. ಬಿ. ಆರ್. ಅಂಬೇಡ್ಕರ್‌ರವರ ನೇತೃತ್ವದಲ್ಲಿ ಭಾರತೀಯ ಸಂವಿಧಾನದ ಕರಡು ಪ್ರತಿಯನ್ನು ಸಿದ್ಧಗೊಳಿಸುವ ಸಮಿತಿಯಲ್ಲಿ ಮಾಧವರಾಯರು ಇದ್ದರೆಂಬುದು ಹೆಮ್ಮೆಯ ಸಂಗತಿ.

ಮಾಧವರಾಯರದು ಸರಕಾರದ ಸೇವೆಗೆ ಮುಡಿಪಾದ ಮನೆತನ ಎನ್ನಬಹುದು. ಏಕೆಂದರೆ ಇವರ ಒಬ್ಬ ಮಗ ಎನ್. ನರಸಿಂಹರಾವ್ ಸಿಂಗ್ ಲಿಂಡ್ಡೆವಲಪ್ಮೆಂಟ್ ಇಲಾಖೆಯ ಕಾರ್ಯದರ್ಶಿಗಳಾಗಿಯೂ ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ . ಮತ್ತೊಬ್ಬ ಮಗ ಎನ್. ಲಕ್ಷ್ಮಣರಾಯರು ಬೆಂಗಳೂರು ನಗರ ಪಾಲಿಕೆಯ ಆಡಳಿತಾಧಿಕಾರಿಯಾಗಿ ಇಲ್ಲಿನ ಪಾರ್ಕ್ಗಳು, ಕೆರೆಗಳು ಕಲ್ಯಾಣಿಗಳು ಮುಂತಾದುವುಗಳ ಅಭಿವೃದ್ಧಿಯ ಬಗ್ಗೆ ವಿಶೇಷ ಆಸಕ್ತಿ ತೋರಿ ಈ ನಗರವು ಮತ್ತೆ ಗ್ರೀನ್ಸಿಟಿ ಎಂಬ ಬಿರುದನ್ನು ಪಡೆಯಲು ಕಾರಣರಾದರು. ಸೌತ್ ಎಂಡ್ಸ ರ್ಕಲ್ನಿಂದ ಜೆಪಿ ನಗರದ ಕಡೆಗೆ ಹೋಗುವ ಸುಮಾರು ಮೂರು ಕಿಲೋಮೀಟರ್ ಉದ್ದದ ರಸ್ತೆಯ ಎರಡೂ ಬದಿಯಲ್ಲಿರುವ ಹಸಿರು ರಾಶಿಗೆ ಲಕ್ಷ್ಮಣರಾವ್ ಉದ್ಯಾನವನ ಎಂದೇ ಹೆಸರಿಡಲಾಗಿದೆ.

ಈ ಇಬ್ಬರು ಮಹಾನ್ ಆಡಳಿತಗಾರರನ್ನು ನಾನು ಭೇಟಿ ಮಾಡಿ ಸಂದರ್ಶನ ಮಾಡಿದ್ದುಂಟು. ಗ್ರೇಟರ್ ಬೆಂಗಳೂರು ಜೆರಾಕ್ಸ್ ಕಾಪಿಯನ್ನು ಅಧ್ಯಯನ ಮಾಡಲು ನನಗೆ ನೀಡಿದವರು ಎನ್ ಲಕ್ಷ್ಮಣರಾಯರೇ.

ಹೀಗೆ ರಾಜ್ಯ ಮತ್ತು ನಗರದ ಅಭಿವೃದ್ಧಿಗೆ ತಾವು ಶ್ರಮಿಸಿದ್ದದ್ದಲ್ಲದೆ ತಮ್ಮ ಮಕ್ಕಳನ್ನು ಅದರಲ್ಲಿ ತೊಡಗಿಸಿದ ಮಾಧವರಾಯರು 1972ರ ಆಗಸ್ಟ್ 28 ರಂದು ದೈವಾಧೀನರಾದರು. ಬಸವನಗುಡಿಯ ಎಂ.ಎಸ್. ಕೃಷ್ಣರಾವ್ ಪಾರ್ಕ್ ಎದುರಿಗೆ ನೆಟ್ಟಕಲ್ಲಪ್ಪ ವೃತ್ತದಿಂದ ಆರ್ಮುಗಂ ವೃತ್ತದವರೆಗೆ ಇರುವ ರಸ್ತೆಗೆ ಇವರ ಹೆಸರನ್ನೇ ಇಟ್ಟು ಗೌರವಿಸಲಾಗಿದೆ.

## ಉಚಿತ ಸಾಮೂಹಿಕ ಉಪನಯನ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಂಗಸಂಸ್ಥೆಯಾದ ಬೆಂಗಳೂರಿನ ವಿಪ್ರವೃಂದ (ರಿ.) ವು ದಿನಾಂಕ 08.06.2023ರಂದು ದೇವಗಿರಿ ವರಪ್ರದ ಶ್ರೀ ವೆಂಕಟೇಶ್ವರ ದೇವಸ್ಥನದ ಬನಶಂಕರಿ 2ನೇ ಹಂತ, ಬೆಂಗಳೂರು ಇಲ್ಲಿ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಉಚಿತ ಸಾಮೂಹಿಕ ಉಪನಯವನ್ನು ಏರ್ಪಡಿಸಿರುತ್ತದೆ. ಉಪನಯನಕ್ಕೆ ನೋಂದಾಯಿಸಲು ಕೊನೆಯ ದಿನಾಂಕ 25.05.2023

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಬಿ.ವಿ. ರಮೇಶ್ : 9880596436, ಕೆ.ಎ. ತಾರಾ : 9448220979
ಕೆ.ಎಂ.ವಿನಯಕುಮಾರ್ : 9591338868 ಟಿ.ಎಸ್. ಶ್ರೀಧರ ಪಂಡಿತ್ : 9901066197

ದೇವಸ್ಥಾನದ ಕಛೇರಿ : 080–26919703

# ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಾಹ್ಮಣರ ಪಾತ್ರ

## ಅಪ್ರತಿಮ ರಾಷ್ಟ್ರಭಕ್ತ ಗೋಪಾಲ ಕೃಷ್ಣ ಗೋಖಲೆ

– ಛಾಯಾಪತಿ ಕೆ. ಎನ್.



ಮಾತೃ ಭೂಮಿಯ ಸೇವೆಯನ್ನು ಶ್ರದ್ದೆಯಿಂದಲೂ ಸ್ವಾರ್ಥತ್ಯಾಗಪೂರ್ವಕವಾಗಿ ಕೈಗೊಳ್ಳುವುದು ಈಗ ಅವಶ್ಯಕ.ಈ ಸೇವೆಗಿಂತಲೂ ಉತ್ತಮವಾದ ಅಥವಾ ಶ್ರೇಷ್ಠವಾದ ಅಥವಾ ಶ್ರೇಯಸ್ಕರವಾದ ಅಥವಾ ಪವಿತ್ರವಾದ ಸೇವಾಧರ್ಮ ಬೇರೆ ಯಾವುದಿದೆ. ಭಾರತದ ಹಿತಕ್ಕಾಗಿ ಶ್ರಮಿಸುವುದೆಂದರೆ ನಮ್ಮ ಜನ್ಮಭೂಮಿಗಾಗಿ ,ನಮ್ಮ ತಾತ ಮುತ್ತಾತಂದಿರ ಭೂಮಿಗಾಗಿ ,ನಮ್ಮ ಮಕ್ಕಳ ಮೊಮ್ಮಕ್ಕಳ ಭೂಮಿಗಾಗಿ, ಶ್ರಮಪಡುವುದೇ ಅಲ್ಲವೇ?. ಇಂತಹ ಉದಾತ್ತ ಶ್ರೇಷ್ಠ ವಿಚಾರಗಳನ್ನು ಸಮಾಜಕ್ಕೆ ಕೊಟ್ಟವರೇ ರಾಷ್ಟ್ರೀಯ ನೇತಾರರಲ್ಲಿ ಅಗ್ರ ಪಂಕ್ತಿಯಲ್ಲಿದ್ದ ಮಹನೀಯರಾದ ಗೋಪಾಲಕೃಷ್ಣ ಗೋಖಲೆಯವರು.. ಬಡತನದ ಬೇಗೆಯಲ್ಲಿ ಬೆಂದು ಹೊಟ್ಟೆ ತುಂಬಿಸಿಕೊಳ್ಳಲು ಶಕ್ತಿ ಇಲ್ಲದಿದ್ದರೂ ತಲೆಯಲ್ಲಿ ವಿದ್ಯೆ ತುಂಬಿಸಿಕೊಂಡು ಸಮಾಜದ ಹಿತಕ್ಕೋಸ್ಕರ ಬಾಳುವ ಸಮರ್ಪಣಾ ಭಾವನೆ ಬಹುತೇಕ ಬ್ರಾಹ್ಮಣರಲ್ಲೇ ಹೆಚ್ಚು ಎಂದು ಹೇಳಿದರೆ ತಪ್ಪಾಗಲಾರದು. ವಿದ್ಯೆ ದಾಹದ ಮುಂದೆ ಹಸಿವಿನ ದಾಹ ಪಕ್ಕಕ್ಕೆ ಸರಿಯುತ್ತದೆ.ಇದು ಬ್ರಾಹ್ಮಣರಿಗೆ ದೇವರು ಕೊಟ್ಟ ವರವಿರಬಹುದು. ಅದಕ್ಕೆ ಜ್ವಲಂತ ಉದಾಹರಣೆ ಗೋಪಾಲಕೃಷ್ಣ ಗೋಖಲೆಯವರು. ಹೊಟ್ಟೆ ತುಂಬಿಸಿಕೊಳ್ಳಲು ಹಣ ಸಂಪಾದಿಸಬೇಕೆಂಬ ಹಂಬಲ ಸಹಜ, ಆದರೆ ಜ್ಞಾನದ ಹಸಿವನ್ನು ಹಿಂಗಿಸಿಕೊಳ್ಳಲು ಸೀಮೆಎಣ್ಣೆ ದೀಪಕ್ಕೂ ಪರದಾಡಬೇಕಾದಗ ಬೀದಿ ದೀಪದ ಕೆಳಗೆ ಓದಿ ಮುಂದೆ ಬಂದು ಸ್ವಂತಕ್ಕಿಂತ ಸಮಾಜದ ದೇಶದ ಹಿತಕ್ಕೆಂದು ದುಡಿಯುವುದು ಬ್ರಾಹ್ಮಣನ ಸಹಜ ಗುಣ. ಇದೇ ದಾರಿಯಲ್ಲಿ ಜೀವನ ಸವೆಸಿದವರು ಗೋಪಾಲಕೃಷ್ಣ ಗೋಖಲೆಯವರು. ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಸತ್ಯಾಗ್ರಹ ಜೈಲುವಾಸ ಇವುಗಳಲ್ಲಿ ಹೆಚ್ಚು ಭಾಗಿಯಾಗದಿದ್ದರೂ ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ನಾಯಕರಾಗಿದ್ದರು. ಸೌಮ್ಯವಾದಿಗಳಾಗಿ ಸಮಾಜ ಸುಧಾರಣೆಗೆ ಹೆಚ್ಚು ದುಡಿದವರು.ಆ ಮೂಲಕ ಜನರಿಗೆ ಹೋರಾಟದ ಕಿಚ್ಚನ್ನು ಹಚ್ಚಿದವರು. ಬ್ರಿಟಿಷ್ ಸರ್ಕಾರದ ಜೊತೆ ಸಂಘರ್ಷಕ್ಕೆ ಇಳಿಯದೆ ಸೌಹಾರ್ದಯುತವಾಗಿ ನಡೆಯುತ್ತಾ ನವ ವಿದ್ಯಾವಂತ ಜನರಿಗೆ ಸರ್ಕಾರ ಮತ್ತು ಆಡಳಿತ ಕ್ಷೇತ್ರದಲ್ಲಿ ಪ್ರಾತಿನಿಧ್ಯ ದೊರಕಿಸಿ ಕೊಡುವುದೇ ಅವರ ಮುಖ್ಯ ಧ್ಯೇಯವಾಗಿತ್ತು. ಮಹಾತ್ಮ ಗಾಂಧೀಜಿಯವರಿಗಿಂತ ಮೂರು ವರ್ಷ ದೊಡ್ಡವರಾಗಿದ್ದ ಗೋಖಲೆಯವರಿಂದ ಗಾಂಧೀಜಿಯವರೇ ಮಾರ್ಗದರ್ಶನ ಪಡೆಯುತ್ತಿದ್ದರು.ಅವರಿಬ್ಬರಿಗೂ ಅಭಿಮಾನ ಪೂರಕವಾದ ಗಾಢವಾದ ಸ್ನೇಹವಿತ್ತು. ಒಮ್ಮೆಯಂತೂ ಗಾಂಧೀಜಿಯವರು ಗೋಖಲೆಯವರು ಧರಿಸುತ್ತಿದ್ದ ಕೊರಳ ವಸ್ತ್ರವನ್ನು ಸ್ವಚ್ಛ ಮಾಡಿಕೊಡುವೆನೆಂದು ಕೇಳಿದ್ದರು. ಗಾಂಧೀಜಿಯವರನ್ನು ಕಾಂಗ್ರೆಸ್ಗೆ ಪರಿಚಯ ಮಾಡಿಕೊಟ್ಟವರೇ1 ಗೋಖಲೆಯವರು. 2902ರ ಕೊಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಸ್ಥಿತಿ–ಗತಿ ಕುರಿತು ನಿರ್ಣಯ ಮಂಡಿಸಲು ಗಾಂಧೀಜಿಯವರಿಗೆ ಅನುವು ಮಾಡಿಕೊಟ್ಟವರೇ ಗೋಖಲೆಯವರು. ಅಲ್ಲಿದ್ದ ಹೆಚ್ಚಿನ ಜನರಿಗೆ ಗಾಂಧೀಜಿಯವರ ವ್ಯಕ್ತಿತ್ವವು ಗಣ್ಯವೆಂದು ಗೊತ್ತಿರಲಿಲ್ಲ.ಇವರಿಗಿಂತ ಕಿರಿಯ ಗಾಂಧಿಯನ್ನು ಗೋಖಲೆ ಬೆಂಬಲಿಸಿ ಮುಂದೆ ತಂದದ್ದು ಗೋಖಲೆಯ ವಿಶಾಲ ಭಾವನೆಯನ್ನು ತೋರಿಸುತ್ತದೆ. ಗಾಂಧೀಜಿ ಮತ್ತು ಗೋಖಲೆಯವರಲ್ಲಿ ಗುರು ಶಿಷ್ಯ ಬಾಂಧವ್ಯವಿತ್ತು. ಒಮ್ಮೆಯಂತೂ ಗಾಂಧೀಜಿಯವರ ಆಮಂತ್ರಣದ ಮೇರೆಗೆ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿಯ ಭಾರತೀಯರ ದುಸ್ಥಿತಿಯನ್ನು ಗಾಂಧಿಯಿಂದ ತಿಳಿದುಕೊಂಡು ಭಾರತದಲ್ಲಿನ ಸ್ಥಿತಿಗತಿಗಳನ್ನ ಗಾಂಧೀಜಿಯವರಿಗೆ ತಿಳಿಸಿದರು. ಭಾರತಕ್ಕೆ ಗಾಂಧೀಜಿ ಬರುವಂತೆ ಪ್ರೇರೇಪಿಸಿದ್ದು ಗೋಖಲೆಯವರೇ.1915ರಲ್ಲಿ ಗಾಂಧೀಜಿ ಭಾರತಕ್ಕೆ ಬಂದರು.ಗಾಂಧೀಜಿಯವರ ಮಾರ್ಗವನ್ನು ಪ್ರಶಸ್ತಗೊಳಿಸಿದವರು ಗೋಖಲೆಯವರೆ. ಬ್ರಿಟಿಷರೊಂದಿಗೆ ಸಮಾಲೋಚಿಸಬೇಕಾದ ಸಭೆಗಳಿಗೆ ಗಾಂಧೀಜಿ ಹೋಗುವ ಮುನ್ನ ಗೋಖಲೆಯವರ ಸಲಹೆ ಸೂಚನೆ ಪಡೆಯುತ್ತಿದ್ದರು.

ಸರ್.ಎಂ. ವಿಶ್ವೇಶ್ವರಯ್ಯನವರಿಗೂ ಗೋಖಲೆಯವರಿಗೂ 25 ವರ್ಷಕ್ಕಿಂತ ಹೆಚ್ಚು ಕಾಲ ಆತ್ಮೀಯ ಸ್ನೇಹವಿತ್ತು.ಗೋಖಲೆಯ ಬಗ್ಗೆ ಸರ್. ಎಂ. ವಿಶ್ವೇಶ್ವರಯ್ಯನವರು ಅಭಿಪ್ರಾಯ ಹೀಗಿತ್ತು. ಗೋಖಲೆಯವರು ಅಗಾಧ ಶ್ರಮವಹಿಸಿ ಕೆಲಸ ಮಾಡುತ್ತಿದ್ದರು, ಅದ್ಭುತವಾದ ಚಿತ್ತಸ್ಥೈರ್ಯ ಹೊಂದಿದ್ದರು,ಮೇಧಾ ಶಕ್ತಿ ಇದ್ದು ಅವರು ತಾಳ್ಮೆಯವರಾಗಿದ್ದರು, ಯಾವುದೇ ವಿಷಯವನ್ನು ಕೂಲಂಕಶವಾಗಿ ವಿಮರ್ಶಿಸುತ್ತಿದ್ದರು, ಯಾವತ್ತೂ ವಿಪರೀತ ಭಾವನೆಗಳಿಗೆ ಎಡೆಗೊಡುತ್ತಿರಲಿಲ್ಲ.

ಗೋಖಲೆಯವರ ಮಹಾನ್ ವ್ಯಕ್ತಿತ್ವ ಡಿ.ವಿ.ಜಿ.ಯವರಲ್ಲಿ ಆವರಿಸಿಕೊಂಡಿತ್ತು.ಆದ್ದರಿಂದಲೇ 1945ರಲ್ಲಿ ಬೆಂಗಳೂರಿನಲ್ಲಿ *ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ*ಸ್ಥಾಪಿಸಿದರು.ಏಳು ದಶಕಗಳಿಂದ ಇದು ಜನಜಾಗೃತಿ ಕೆಲಸ ಮಾಡುತ್ತಿದೆ .

ಗೋಖಲೆಯವರಿಗೆ ಒಬ್ಬ ಪರಮ ಗುರು ಲಭಿಸಿದ್ದರು.ಅವರೇ ಮಹದೇವ ಗೋವಿಂದ ರಾನಡೆ.ಗುರು ಶಿಷ್ಯರ ಸಮಾಗಮವಾದದ್ದೆ ಒಂದು ವಿಶೇಷಸಂದರ್ಭಧಲ್ಲಿ. ಗೋಖಲೆಯವರು ನ್ಯೂ –ಇಂಗ್ಲಿಷ್ ಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದರು.ಆ ಶಾಲೆಯ ಒಂದು ಸಮಾರಂಭಕ್ಕೆ ಸ್ವಾಗತಿಸಲು ಪ್ರಮುಖ ದ್ವಾರದಲ್ಲಿ ಗೋಖಲೆಯವರೇ ಸ್ವಾಗತಕಾರರಾಗಿ ನಿಂತ್ತಿದ್ದರು.ಆಮಂತ್ರಿತರು ತಮಗೆ ನೀಡಿದ ಆಮಂತ್ರಣ ಪತ್ರಿಕೆಜೊತೆಯಲ್ಲಿ ತಂದು ತೋರಿಸಿ ಒಳಗೆ ಹೋಗಬೇಕಿತ್ತು. ರಾನಡೆಯವರು ಆಗಮಿಸಿದಾಗ ಗೋಖಲೆಯವರು ಅವರನ್ನು ಪ್ರವೇಶ ಪತ್ರ ಕೇಳಿದರು.ಜೇಬು ತಡಕಾಡಿದರು ಸಿಗಲಿಲ್ಲ ತರುವುದನ್ನು ಮರೆತಿದ್ದರು. ಗೋಖಲೆಯವರು ಅವರನ್ನು ಒಳಗೆ ಬಿಡಲಿಲ್ಲ. ಇರುಸುಮುರಿಸಿನ ಪರಿಸ್ಥಿತಿ ನಿರ್ಮಾಣವಾಯಿತು.ಇಬ್ಬರಿಗೂ ಪರಿಚಿತ ವ್ಯಕ್ತಿಯೊಬ್ಬರು ಅಲ್ಲಿಗೆ ಬಂದರು. ಇವರು ಮಹದೇವ ಗೋವಿಂದ ರಾನಡೆ ಎಂದು ಪರಿಚಯಿಸಿದರು.ಹಾಗಾಗಿ ಅಪ್ರಿಯ ಪ್ರಸಂಗ ತಪ್ಪಿತು. 21 ವರ್ಷದ ಯುವಕನಿಗೂ ಅವರಿಗಿಂತ 24 ವರ್ಷ ಹಿರಿಯರಾದ ರಾನಡೆಯವರೆಗೂ ಆದ ಪ್ರಥಮ ಭೇಟಿಯಲ್ಲೇ ಪರಸ್ಪರ ಆಕರ್ಷಿತರಾದರು.ಯುವ ಗೋಖಲೆಯಲ್ಲಿದ್ದ ಚುರುಕು ಬುದ್ಧಿ, ವಿವೇಕಯುತ ಉತ್ಸಾಹ,ನಮ್ರತೆ, ಕರ್ತವ್ಯತತ್ಪರತೆ, ಹೊಣೆಗಾರಿಕೆ, ಸೇವಾನಿಷ್ಠೆ,ಇವುಗಳನ್ನ ರಾನಡೆಯವರು ಮೆಚ್ಚಿಕೊಂಡರು.ಕಾಲಕ್ರಮೇಣ ಗೋಖಲೆಯವರು ರಾನಡೆಯವರ ಪರಮ ಶಿಷ್ಯರಾದರು. ಗೋಖಲೆಯವರು ಸಾರ್ವಜನಿಕ ಜೀವನದಲ್ಲಿ, ವಿಧ್ಯಾಕ್ಷೇತ್ರದಲ್ಲಿ, ಪತ್ರಿಕಾರಂಗ, ಸಾರ್ವಜನಿಕ ಕ್ಷೇಮಾಭಿವೃದ್ಧಿ,ಪತ್ರವ್ಯವಾಹಾರ, ಅರ್ಥವಿಚಾರ ಹೀಗೆ ಎಲ್ಲಾ ವಿಚಾರದಲ್ಲೂ ತರಬೇತು ಕೊಟ್ಟವರೇ ರಾನಡೆಯವರು. ಆದ್ದರಿಂದಲೇ ಗೋಖಲೆಯವರು ಪ್ರಸಿದ್ಧರಾದರು. ಆದುದರಿಂದಲೇ ಅಂದು ಪ್ರಸಿದ್ಧರಾಗಿದ್ದ ತಿಲಕರು, ರಾನಡೆ, ಫಿರೋಜ್ ಷಾ ಮೆಹತಾ,ಮೊದಲಾದ ಅಗ್ರನಾಯಕರ ಪಂಕ್ತಿಯಲ್ಲಿ ಗೋಖಲೆಯವರು ಒಬ್ಬರೆಂದು ಪ್ರಸಿದ್ಧರಾದರು.ಕಾರ್ಯ ಕ್ಷೇತ್ರ ವಿಶಾಲವಾಗಿ ಅವರ ವ್ಯಕ್ತಿಗಾಂಭೀರ್ಯ ಸೇವಾತತ್ಪರತೆ, ಬ್ರಿಟಿಷ್ ಸರ್ಕಾರಕ್ಕೂ ಮತ್ತು ರಾಷ್ಟ್ರಕ್ಕೂ ಮಾನ್ಯವೆನಿಸಿದವು.ಅವರು ಮುಂಬೈ ವಿಶ್ವವಿದ್ಯಾಲಯದ ಗೌರವ ಸದಸ್ಯರಾಗಿ ನೇಮಕಗೊಂಡರು.ಆಗ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ಮಾರ್ಪಾಟುಗಳನ್ನು ಮಾಡಿದರು. ಅಲ್ಲದೆ ಪುಣೆ ಪುರಸಭೆ ಸದಸ್ಯರಾಗಿ ಚುನಾಯಿತರಾದರು ಅಧ್ಯಕ್ಷರೂ ಆದರು. ಅತಿ ಶೀಘ್ರವಾಗಿ ಸ್ವಾತಂತ್ರ್ಯ ಲಭಿಸಬೇಕು ಎಂದು ಆಗ್ರಹಿಸುತ್ತಿದ್ದವರು ತೀವ್ರಗಾಮಿಗಳು ಮತ್ತು ಕ್ರಾಂತಿಕಾರಿಗಳು ಆದರೆ ಅವರೆಲ್ಲರೂ ಆಲಕ್ಷದ ಕಡೆಗೆ ಪ್ರಯತ್ನಿಸುತ್ತಿದ್ದರು ಸುಧಾರಣಾ ಪ್ರಕ್ರಿಯೆಯನ್ನು ನಿರ್ಲಕ್ಷಿಸಬಾರದೆಂದು ಹೇಳುತ್ತಿದ್ದವರು ಗೋಖಲೆಯವರು.

1866 ಮೇ 9ರಂದು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಕೋತಳುಕ ಎಂಬ ಪುಟ್ಟ ಗ್ರಾಮದಲ್ಲಿ ಚಿತ್ ಪಾವನ ಬ್ರಾಹ್ಮಣ ಪಂಗಡಕ್ಕೆ ಸೇರಿದ ಕೃಷ್ಣರಾವ್ ಗೋಖಲೆ ಮತ್ತು ತಾಯಿ ಸತ್ಯಭಾಮರ ಎರಡನೇ ಪುತ್ರನಾಗಿ ಜನಿಸಿ, ಕೇವಲ 49 ವರ್ಷ ಬದುಕಿ ಹೆಸರಾಂತ ಶಿಕ್ಷಕ ನಿರ್ಮಲಜೀವನದ ದೇಶಾಭಿಮಾನಿ, ದೇಶ ಸೇವಕ. ಅವರ ಜೀವನದ 19 ವರ್ಷಗಳು ಬಾಲ್ಯ ಮತ್ತು ವಿದ್ಯಾರ್ಜನೆಗೆ ಕಳೆದವು. ಉಳಿದ 30 ವರ್ಷ ಸ್ವಾರ್ಥರಹಿತ ದೇಶ ಸೇವೆಗೆ ಸಮರ್ಪಿತವಾದವು.ಪದವೀ ನಂತರ ಡೆಕ್ಕನ್ ಎಜುಕೇಶನ್ ಸೊಸೈಟಿಗೆ ಸೇರಿದರು.ಪೂನಾದ ಪ್ರಖ್ಯಾತ ವಿದ್ವಾಂಸ ಮತ್ತು ನ್ಯಾಯಶಾಸ್ತ್ರ ತಜ್ಞರಾಗಿದ್ದ ಮಹಾದೇವ ಗೋವಿಂದ ರಾನಡೇ ಇವರ ಗುರುಗಳಾದ ರಾನಡೆಯವರು ಪ್ರಾರಂಭಿಸಿದ ಪೂನಾ ಸಾರ್ವಜನಿಕ ಸಭಾ ಎಂಬ ಪ್ರಮುಖ ರಾಜಕೀಯ ಸಂಸ್ಥೆಯಲ್ಲಿ ಸೇರಿ ಅದರ ಕಾರ್ಯದರ್ಶಿಗಳಾದರು. 1891ರಲ್ಲಿ ಡೆಕ್ಕನ್ ಎಜುಕೇಶನ್ ಸೊಸೈಟಿಯ ಫರ್ಗ್ಯುಸನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು.1889 ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ನ ಸದಸ್ಯರಾದರು. 1895ರಲ್ಲಿ ಪೂನಾದಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ನ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾದರು.ಆಗ ಅವರು ಬಾಂಬೆ ಲೆಜಿಸ್ಲೇಟಿವ್ ಕೌನ್ಸಿಲ್ನ ಸದಸ್ಯರೂ ಆಗಿದ್ದರು. 1902ರಲ್ಲಿ ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್ ಗೆ ಸದಸ್ಯರಾಗಿದ್ದರು. ಗೋಖಲೆಯವರು ತಮ್ಮ ವ್ಯಕ್ತಿ ಜೀವನದ ಉತ್ತುಂಗ ಶಿಖರದಲ್ಲಿದ್ದಾಗಲೇ 1905ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ನ ಅಧ್ಯಕ್ಷರಾದರು. ಅದೇ ವರ್ಷದಲ್ಲಿ ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯನ್ನು ಸ್ಥಾಪಿಸಿದರು. ಅದು ರಾಷ್ಟ್ರೀಯ ಮಿಶನರಿಗಳಿಗೆ ತಮ್ಮನ್ನು ತಾವು ಭಾರತದ ಸೇವೆಯಲ್ಲಿ ತೊಡಗಿಸಿಕೊಳ್ಳುವ ಶಿಕ್ಷಣ ನೀಡುವ ಸಂಸ್ಥೆಯಾಗಿತ್ತು.ಹೀಗೆ ವಿದ್ಯಾ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಲ್ಲದೆ ಅವರು ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ವಿರೋಧಿಸಿದರು. ಮಹಿಳಾ ವಿಮೋಚನೆಗಾಗಿ ಮತ್ತು ಸ್ತ್ರೀ ಶಿಕ್ಷಣಕ್ಕಾಗಿ ಶ್ರಮಿಸಿದರು.

1902ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ಭೇಟಿ ನೀಡಿದರು. ಅಲ್ಲಿ ಗಾಂಧೀಜಿಯವರನ್ನು ಭೇಟಿಯಾಗಿ ಅಲ್ಲಿಯ ಭಾರತೀಯರ ಹಕ್ಕುಗಳಿಗಾಗಿ ಗಾಂಧೀಜಿ ಅಭಿಯಾನದ ಬಗ್ಗೆ ಚರ್ಚಿಸಿದರು. ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಲು ಗೋಖಲೆಯವರ ಮಾರ್ಗದರ್ಶನ ಸೂಚನೆಯೇ ಕಾರಣ.ಹೀಗೆ ತಾಯಿ ಭಾರತೀಯ ಸೇವೆಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ, ವಿದ್ಯಾ ಕ್ಷೇತ್ರದಲ್ಲಿ ಸಾಧನೆ,ಬ್ರಿಟಿಷ್ ಸರ್ಕಾರದ ಸೇವೆಯಲ್ಲಿ ಭಾರತೀಯರಿಗೆ ಪ್ರಾತಿನಿಧ್ಯ, ಸಾಮಾಜಿಕ ಪರಿವರ್ತನೆಯ ಆಂದೋಲನ ಹೀಗೆ ಹತ್ತಾರು ಮುಖಗಳಲ್ಲಿ ತಾಯಿನಾಡಿನ ಸೇವೆ ಮಾಡಿ ಫೆಬ್ರವರಿ 19.1915 ರಂದು ಅವರ ಪ್ರಾಣ–ಪುಷ್ಪ ತಾಯಿ ಭಾರತೀಯ ಪಾದಪದ್ಮಗಳಲ್ಲಿ ಲೀನವಾಯಿತು.ಕೇವಲ 49 ವರ್ಷ ಬದುಕಿ ಸಮಾಜಕ್ಕೆ ಹೊರೆಯಾಗದೆ ದೇಶಕ್ಕೆ ಇನ್ನೂ ಅಪೇಕ್ಷಿತ ವ್ಯಕ್ತಿಯಾಗಿ ಕಣ್ಮರೆಯಾದರು. ಆದರೆ ಜನಸಾಗರದ ಕಣ್ಣುಗಳಲ್ಲಿ ಪ್ರತಿಬಿಂಬವಾಗಿ ಚಿರಕಾಲ ಉಳಿದರು.ಅವರ ಜೀವನ ಗಂಗೆಯಲ್ಲಿ ಒಂದೆರಡು ಉದ್ದರಣೆ ಉದಕವನ್ನು ನಾನಿಲ್ಲಿ ಮಂಡಿಸಿದ್ದೇನೆ.

*ಭಾರತ್ ಮಾತಾ ಕೀ ಜೈ*

# ದೈವ ಮತ್ತು ಪುರುಷ ಪ್ರಯತ್ನ

## ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು

**– ಡಾ. ಕೆ. ಎಲ್ ಶಂಕರನಾರಾಯಣ ಜೋಯ್ಸ್**

ದೇಹದ ಸಮಸ್ತ ವ್ಯಾಪಾರಗಳನ್ನು ಹೃದಯವು ನಿರ್ವಹಿಸುತ್ತಿದೆ, ಹೃದಯವು ದೇಹದ ಎಲ್ಲ ಭಾಗಗಳಿಗೆ ರಕ್ತವನ್ನು ಒದಗಿಸದಿದ್ದರೆ ಯಾವ ಭಾಗವೂ ಸಜೀವವಾಗಿರಲಾರದು. ಆದ್ದರಿಂದ ದೇಹದ ಸರ್ವ ಅವಯವಗಳ ಸಂರಕ್ಷಣೆ ಹೃದಯದಿಂದ ಎಂದು ಹೇಳುವುದುಂಟು. ಇದು ಯಥಾರ್ಥವಾದ ವಿಷಯವೇ ಆಗಿದೆ. ಆದರೆ ಇನ್ನೊಂದು ಹೆಜ್ಜೆ ಪರಿಶೀಲನೆಯನ್ನು ಮುಂದುವರಿಸಿದರೆ, ಶ್ವಾಸಕೋಶಕ್ರಿಯೆಯ ಮಹತ್ತ್ವವು ಮನದಟ್ಟಾಗುವುದು. ಉಸಿರಾಟವೇನಾದರೂ 5 ನಿಮಿಷಗಳ ಕಾಲ ನಿಂತುಹೋದರೆ ಹೃದಯಕ್ರಿಯೆಯೂ ನಿಂತು ಹೋಗುವುದು. ಎಲ್ಲ ಅವಯವಗಳೂ ಕ್ರಿಯಾಹೀನವಾಗಿ ಬಿಡುವುವು. ಆದ್ದರಿಂದ ಶ್ವಾಸಕೋಶವೇ ಎಲ್ಲ ದೇಹವ್ಯಾಪಾರವನ್ನು ವ್ಯವಸ್ಥೆಗೊಳಿಸಿದೆ ಎನ್ನಬೇಕಾಗುತ್ತದೆ. ಈ ಮಧ್ಯೆ ಹೃದಯಕ್ರಿಯೆಗೂ ಉಸಿರಾಟಕ್ಕೂ ಸಹ ಪರಸ್ಪರ ಸಹಕಾರವಿದ್ದೇ ಇದೆ ಎಂಬುದನ್ನು ಮರೆಯುವಂತಿಲ್ಲ. ಇನ್ನೊಂದು ಹಂತದ ಪರಿಶೀಲನೆ ಮಾಡಿದರೆ ಎಲ್ಲ ನರಸಮೂಹಕ್ಕೂ ಕೇಂದ್ರವಾದ ಮೆದುಳು ಶ್ವಾಸಕೋಶದ ಕ್ರಿಯೆಯನ್ನು ಸಹ ನಿಯಂತ್ರಿಸಿಕೊಂಡಿದೆ. ಮೆದುಳಿನ ವ್ಯಾಪಾರವು ಸ್ತಬ್ಧವಾದರೆ ಉಳಿದೆಲ್ಲ ವ್ಯಾಪಾರಗಳೂ ಆ ಕ್ಷಣದಲ್ಲೇ ಸ್ತಬ್ಧವಾಗಲಿದೆ. ಈ ದೃಷ್ಟಿಯಿಂದ ಮೆದುಳು ದೇಹದ ಎಲ್ಲ ವ್ಯಾಪಾರಗಳನ್ನೂ ಧರಿಸಿದೆ ಎನ್ನಬೇಕಾಗುತ್ತದೆ. ಇನ್ನೂ ಮುಂದುವರಿದು ಪರಿಶೀಲಿಸಿದಾಗ ಜೀವದ ಮಹತ್ತ್ವ ಅರಿವಾಗದಿರದು. ಜೀವವು ದೇಹದಲ್ಲಿ ಆವಾಸಮಾಡಿಕೊಂಡಿದ್ದಾಗ– ಮೆದುಳು, ಶ್ವಾಸಕೋಶ, ಹೃದಯ ಹೀಗೆ ಎಲ್ಲವೂ ಕ್ರಿಯಾಶೀಲವಾಗುತ್ತವೆ. ಜೀವವು ದೇಹವನ್ನು ತ್ಯಜಿಸಿದರೆ ಸಮಸ್ತ ವ್ಯಾಪಾರಗಳೂ ಮರೆಯಾಗುವುವು. ಈ ಹಿನ್ನೆಲೆಯಲ್ಲಿ ಜೀವವೇ ಎಲ್ಲವನ್ನೂ ಧರಿಸಿದೆಯೆನ್ನಬೇಕಾಗುತ್ತದೆ. ಜೀವವು ಮೂಲತಃ ಪರಮಾತ್ಮರೂಪವಾದ ಪರಂಜ್ಯೋತಿಯ ಒಂದು ಸ್ಫುಲಿಂಗವೇ ಆಗಿದೆ. ಈ ಹಿನ್ನೆಲೆಯಲ್ಲಿ ಪರಮಾತ್ಮನೇ ಈ ದೇಹದ–ಪಿಂಡಾಂಡದ ಎಲ್ಲ ವ್ಯಾಪಾರಗಳಿಗೂ ನಿಯಾಮಕನಾಗಿದ್ದಾನೆನ್ನಬೇಕಷ್ಟೆ. ಆ ಪರಂಜ್ಯೋತಿಯ ಶಾಸನದಂತೆ ಈ ದೇಹಯಂತ್ರವು ತನ್ನ ವ್ಯಾಪಾರವನ್ನು ನಡೆಸಲಿದೆ. ಆ ಪರಂಜ್ಯೋತಿಯ ಶಾಸನದಂತೆಯೇ ಬ್ರಹ್ಮಾಂಡದಲ್ಲೂ ಸಹ ಎಲ್ಲ ವ್ಯಾಪಾರಗಳೂ ಸಂಪನ್ನಗೊಳ್ಳುತ್ತವೆ. ಆ ಪರಂಜ್ಯೋತಿಯ ಶಾಸನವನ್ನೇ ಮೂಲತಃ ಜ್ಯೋತಿಶ್ಶಾಸ್ತ್ರವೆಂದು ತೆಗೆದುಕೊಳ್ಳಬೇಕು. ಅದೇ ಎಲ್ಲವನ್ನೂ ಧರಿಸಿದೆ.

ಒಬ್ಬ ರಾಜನು ಒಂದು ರಾಜ್ಯವನ್ನು ನಿರ್ವಹಿಸಬೇಕಾದರೆ ಪುರೋಹಿತ, ಮಂತ್ರಿ, ಸೇನಾಧಿಪತಿ ಮೊದಲಾಗಿ ತನ್ನದೇ ಆದ ಹಲವು ಪ್ರತಿನಿಧಿಗಳನ್ನು ನೇಮಿಸಿಕೊಂಡು ತನ್ನ ಕಾರ್ಯವನ್ನು ನಿರ್ವಹಿಸುತ್ತಾನಷ್ಟೆ. ಹೊರ ರೂಪದಲ್ಲಿ ಪುರೋಹಿತ, ಮಂತ್ರಿ, ಸೇನಾಧಿಪತಿಗಳು ಬೇರೆ ಬೇರೆಯಾದ ವ್ಯಕ್ತಿಗಳಾಗಿ ಗೋಚರಿಸಿದರೂ ಮೂಲತಃ ರಾಜನ ಪ್ರತಿನಿಧಿಗಳು. ರಾಜನ ಶಾಸನದ ಹರಿವೆಯ ಬೇರೆ ಬೇರೆ ಮಾಧ್ಯಮಗಳು. ಈ ದೇಹದಲ್ಲೂ ಸಹ ಪರಮಾತ್ಮನ ಶಕ್ತಿಯ ಮಾಧ್ಯಮಗಳಾಗಿ ಮೆದುಳು, ಶ್ವಾಸಕೋಶ, ಹೃದಯ ಇವೆಲ್ಲವೂ ಕಾರ್ಯವೆಸಗುತ್ತವೆ. ಪರಸ್ಪರ–ಸಾಮರಸ್ಯದಿಂದ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಹೊರಗಣ್ಣಿಗೆ ಮಿದುಳು, ಶ್ವಾಸಕೋಶ, ಹೃದಯಗಳು ಒಂದೊಂದೂ ಸ್ವತಂತ್ರ ಘಟಕಗಳಂತೆ ಕಂಡುಬಂದರೂ ಅವುಗಳೆಲ್ಲವೂ ಪರಂಜ್ಯೋತಿಯ ಆದೇಶವನ್ನು ನಿರ್ವಹಿಸುತ್ತಾ ಪರಂಜ್ಯೋತಿಯ ಪ್ರತಿನಿಧಿಗಳೇ ಆಗಿವೆ. ಮೆದುಳು ತನ್ನದಾದ ಒಂದು ಶಾಸನವನ್ನು ಸದಾ ಇಟ್ಟುಕೊಂಡಿದ್ದರೆ, ಶ್ವಾಸಕೋಶ, ಹೃದಯಗಳೂ ಸಹ ತಮ್ಮ ತಮ್ಮದೇ ಆದ ಶಾಸನಗಳನ್ನು ಮಾಡುತ್ತಲಿವೆ. ಆದರೆ ಇವೆಲ್ಲ ಶಾಸನಗಳೂ ಪರಂಜ್ಯೋತಿಯ ಸಂಕಲ್ಪವನ್ನು ಅನುಸರಿಸಿ ನಡೆಯುತ್ತಿರುವುದರಿಂದ ಪರಂಜ್ಯೋತಿಯ ಶಾಸನವೇ ಆಗಿದೆ. ಹೀಗೆ, ಈ ಪರಂಜ್ಯೋತಿಯ ಶಾಸನವನ್ನೇ ಮೂಲತಃ ಜ್ಯೋತಿಶ್ಶಾಸ್ತ್ರವೆಂದು ಮನಸ್ಸಿಗೆ ತಂದುಕೊಳ್ಳಬೇಕು.

ಒಂದೇ ಒಂದಾದ ಪರಂಜ್ಯೋತಿಯು ತಾನು ಸೃಷ್ಟಿಸಂಕಲ್ಪವನ್ನು ಮಾಡಿದಾಗ ಬ್ರಹ್ಮವಿಷ್ಣು ಮಹೇಶ್ವರಾತ್ಮಕವಾದ ಮೂರು ಜ್ಯೋತಿಗಳಾಗಿ ಆ ಮೂರು ಜ್ಯೊತಿಗಳೂ ಮೂವತ್ತಮೂರು ಕೋಟಿ ಜ್ಯೋತಿಗಳಾಗಿ ಒಂದು ಪರಂಜ್ಯೋತಿಯ ಕಡೆಯಿಂದ ರಚಿತವಾದ ಜ್ಯೋತಿಸ್ಸೂತ್ರವನ್ನು ವಿಸ್ತರಿಸಿಕೊಂಡು ಈ ಜಗತ್ತಿನ ಸೃಷ್ಟಿ–ಸ್ಥಿತಿ–ಲಯ ವ್ಯಾಪಾರಗಳನ್ನು ನಿರ್ವಹಿಸುತ್ತಲಿವೆ. ಬೆಳಗುವ ಸ್ವಭಾವದ ಮೇಲೆ ಬ್ರಹ್ಮವಿಷ್ಣುಮಹೇಶ್ವರಾದಿ ಮೂವತ್ತಮೂರುಕೋಟಿ ಜ್ಯೋತಿಗಳಿಗೂ ದೇವತೆಗಳೆಂಬ ಹೆಸರು ಬಂದಿದೆ. ಆ ಪರಂಜ್ಯೋತಿಯ ಶಾಸನವೇ ಈ ಎಲ್ಲ ದೇವತೆಗಳ ಶಾಸನವೂ ಆಗಿದೆ. ಅದೇ ಮೂಲತಃ ಜ್ಯೋತಿಶ್ಶಾಸ್ತ್ರವಾಗಿದೆ. ಈ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳದೇ ಜ್ಯೋತಿಶ್ಶಾಸ್ತ್ರದ ಬಗ್ಗೆ ಮಾಡುವ ಚಿಂತನೆ ಅರ್ಥಹೀನವಾಗುವುದು.

ದೇಹದ ವಿಜ್ಞಾನವನ್ನು ಚಿಂತಿಸಹೊರಟಾಗ ಭೌತಿಕವಾಗಿ ಮೆದುಳು, ಶ್ವಾಸಕೋಶ, ಹೃದಯಗಳು ದೇಹದ ವ್ಯವಸ್ಥೆಯನ್ನು ನಿರ್ವಹಿಸುತ್ತಿವೆ. ಆದರೆ ಅದರ ಹಿಂದೆ ದೈವಿಕವಾದ ಶಕ್ತಿಗಳು ಅಧಿಷ್ಠಾತೃದೇವತೆಗಳಾಗಿ ನಿಂತಿರುವುದರಿಂದ ಭೌತಿಕ ಅವಯವಗಳಲ್ಲಿ ಆ ವ್ಯಾಪಾರಗಳು ನಡೆದುಬರುತ್ತಿವೆ. ಈ ದೇವತಾಶಕ್ತಿಗಳೂ ಸಹ ಪರಮಾತ್ಮಪ್ರಕಾಶದಿಂದ ಪ್ರಕಾಶವನ್ನೂ, ಚೈತನ್ಯವನ್ನೂ ಪಡೆದು ಕಾರ್ಯಪರವಾಗಿದೆ. ಆದ್ದರಿಂದ ದೇಹದ ಆಗುಹೋಗುಗಳಿಗೆ ಕಾರಣವನ್ನು ಚಿಂತಿಸುವಾಗ ಭೌತಿಕವಾದ ಮೆದುಳು, ಹೃದಯಗಳನ್ನು ಚಿಂತಿಸುವಂತೆ ಅದಕ್ಕೂ ಚೈತನ್ಯವನ್ನು ಒದಗಿಸಿಕೊಡುತ್ತಿರುವ ದೈವೀಶಕ್ತಿಗಳತ್ತಲೂ ನಮ್ಮ ದೃಷ್ಟಿ ಹರಿಯಬೇಕು. ವಾಸ್ತವಿಕವಾಗಿ ಆ ದೇವತಾಶಕ್ತಿಗಳೇ ದೇಹಾವಯವಗಳಲ್ಲೆಲ್ಲ ತುಂಬಿ

ಸಮಸ್ತವಾದ ಆಗುಹೋಗುಗಳಿಗೂ ಕಾರಣವಾಗಿದೆ. ಇದು ಯೋಗದೃಷ್ಟಿಗೆ ನಿಲುಕುವ ಸತ್ಯಾರ್ಥವಾಗಿದೆ. ಈ ದೇವತಾಶಕ್ತಿಗಳು ಅವನವನ ಪುಣ್ಯಪಾಪಗಳ ಸಂಗ್ರಹಕ್ಕೆ ಅನುಗುಣವಾಗಿ ಪ್ರಸನ್ನತೆಯನ್ನೋ ಪ್ರಕೋಪವನ್ನೋ ಹೊಂದಿ ಸುಖದುಃಖಗಳನ್ನು ಲೆಕ್ಕಾಚಾರವಾಗಿ ಒದಗಿಸುತ್ತಿವೆ. ಅವುಗಳ ಆ ಲೆಕ್ಕಾಚಾರ ನಮ್ಮ ಮನಸ್ಸಿಗೆ ಬರುವಂತಾದರೆ 'ಗ್ರಹಚಾರ'ವೆಂದರೇನು? ಎಂಬುದುಮನವರಿಕೆಯಾದೀತು.

ಬ್ರಹ್ಮಾಂಡದಲ್ಲೂ, ಪಿಂಡಾಂಡದಲ್ಲೂ ಲೆಕ್ಕಾಚಾರವಾಗಿ ನಡೆಯುತ್ತಿರುವ ದೇವತಾಶಕ್ತಿಗಳ ವ್ಯಾಪಾರವನ್ನು ಅರಿತುಕೊಳ್ಳಲು ಅನುಕೂಲವಾಗುವಂತೆ ಅಲ್ಲೇ ಹುದುಗಿರುವ ಒಂದು ಸೂತ್ರವನ್ನು ಅವಲಂಬಿಸಿ ತಂದಿರುವ ಶಾಸ್ತ್ರವೇ ಜ್ಯೋತಿಶ್ಶಾಸ್ತ್ರವಾಗಿದೆ. ಒಂಭತ್ತು ಗ್ರಹಗಳು ಈ ದೇಹದಲ್ಲೇ ನೆಲೆಸಿರುವ ಒಂಭತ್ತು ದೇವತಾಶಕ್ತಿಗಳು. ಯಾವ ಈ ದೇಹದಲ್ಲಿ ಪೃಥ್ವೀ, ಅಪ್, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಭೂತಗಳಿವೆಯೋ ಮನಸ್ಸು ಎಂಬ ಇನ್ನೊಂದು ಅಂತರಂಗ ಸಾಧನವಿದೆಯೋ, ಅಂಗಿಯಾದ ಆತ್ಮನಿದ್ದಾನೆಯೋ ಇವುಗಳನ್ನು ಪ್ರತಿನಿಧಿಸುವ ಏಳು ಗ್ರಹರೂಪವಾದ ದೇವತಾಶಕ್ತಿಗಳು ಮತ್ತು ಎರಡು ಸಂಧಿಸ್ಥಾನ ಅಥವಾ ನಾಡೀಮರ್ಮಸ್ಥಾನಗಳಲ್ಲಿ ಕೆಲಸ ಮಾಡುವ ರಾಹುಕೇತುರೂಪವಾದ ಎರಡು ಶಕ್ತಿಗಳೂ ಸೇರಿ ಒಂಭತ್ತು ದೇವತಾಶಕ್ತಿಗಳು ಈ ಪಿಂಡಾಂಡವನ್ನು ಧರಿಸಿವೆ. ಗ್ರಹವೆಂಬ ಪದವು 'ಗೃಹ್ಣಾತೀತಿ ಗ್ರಹಃ' ಎಂಬಂತೆ ಈ ಬಾಳಾಟದ ವ್ಯವಸ್ಥೆಯನ್ನು ಹಿಡಿದಿರುವ ಅಥವಾ ಧರಿಸಿರುವ ಅಥವಾ ಇನ್ನೊಂದು ರೂಪದಲ್ಲಿ ಬಂಧಿಸಿರುವ ದೇವತಾಶಕ್ತಿಗಳನ್ನೇ ನಿರೂಪಿಸುತ್ತವೆ. ಈ ಗ್ರಹರೂಪೀದೇವತೆಗಳ ಪ್ರಸಾದ–ಪ್ರಕೋಪಗಳಿಂದಲೇ ಆರೋಗ್ಯ, ಅನಾರೋಗ್ಯ, ಸುಖದುಃಖ ಮೊದಲಾಗಿ ಘಟಿಸುತ್ತವೆ. ಈ ಶಕ್ತಿಗಳೇ ಅವನವನ ಜನ್ಮಾಂತರದ ಪಾಪ–ಪುಣ್ಯಾನುಗುಣವಾದ ಫಲವನ್ನು ಕಾಲಕಾಲದಲ್ಲಿ ಒದಗಿಸುತ್ತವೆ. ಈ ಜನ್ಮದಲ್ಲೂ ಸಹ ನಾವು ಎಸಗುವ ಶುಭಾಶುಭರೂಪವಾದ ಕರ್ಮಗಳು ಆ ದೇವತಾಶಕ್ತಿಗಳ ಪ್ರಸಾದಪ್ರಕೋಪಗಳಿಗೆ ಕಾರಣವಾಗಿ ಅನುಕೂಲ ಹಾಗೂ ಅನಾನುಕೂಲವಾದ ಪರಿಣಾಮವನ್ನುಂಟು ಮಾಡುತ್ತಿವೆ. ಒಬ್ಬ ಸಾವಧಾನಚಿತ್ತನಾದ ಮಾನವನು ತನ್ನೊಳಗಿರುವ ಈ ವ್ಯವಸ್ಥೆಯನ್ನು ಅರಿತುಕೊಳ್ಳಬಲ್ಲನು. ಜೀವನದ ಯಾವ ಆಗುಹೋಗುಗಳು ಹಿಂದಿನ ಜನ್ಮಗಳ ಪುಣ್ಯ–ಪಾಪಫಲವಾಗಿವೆಯೋ, ಅವುಗಳು ನಮ್ಮಲ್ಲೇ ಸಮ್ಮುದ್ರಿತವಾಗಿವೆ. ಅದನ್ನು ಅರಿಯಬಲ್ಲವನಿಗೆ ಕಾಲಕಾಲದಲ್ಲಿ ಏರ್ಪಡುವ ದೇವತಾಪ್ರಸಾದ– ಪ್ರಕೋಪಗಳ ಪರಿಚಯವು ಸಿಗುವುದರಲ್ಲಿ ಸಂದೇಹವಿಲ್ಲ. ವಾಸ್ತವಿಕವಾಗಿ ಹಾಗೆ ತನ್ನಲ್ಲೇ ಸಮ್ಮುದ್ರಿತವಾದ ಸತ್ಯಾರ್ಥಗಳನ್ನು ಗ್ರಹರೂಪೀ ದೇವತಾಶಕ್ತಿಗಳ ಅನುಗ್ರಹದಿಂದ ತಿಳಿಯಬಲ್ಲವನೇ ನಿಜವಾದ ಜ್ಯೋತಿಷ್ಕ.

ಈ ಪಿಂಡಾಂಡದಲ್ಲಿ ಹೇಗೆ ಒಂಭತ್ತು ದೇವತಾಶಕ್ತಿಗಳು ಕೆಲಸಮಾಡುತ್ತಾ ಪಿಂಡಾಂಡದ ವ್ಯವಸ್ಥೆಯನ್ನು ನಿರ್ವಹಿಸುತ್ತಿವೆಯೋ, ಬ್ರಹ್ಮಾಂಡದಲ್ಲೂ ಸಹ ಅದೇ ಒಂಭತ್ತು ಶಕ್ತಿಗಳು ಬ್ರಹ್ಮಾಂಡದ ವ್ಯವಸ್ಥೆಯನ್ನು ನಿರ್ವಹಿಸುತ್ತಿವೆ. ಆ ಶಕ್ತಿಗಳು ಯೋಗದೃಷ್ಟಿಗೆ ಗೋಚರಿಸುವ ಶಕ್ತಿಗಳು. ಚರ್ಮಚಕ್ಷುಸ್ಸಿಗೆ ಗೋಚರವಾಗುವ ಶಕ್ತಿಗಳಲ್ಲ. ಆದರೆ ಆ ಶಕ್ತಿಗಳ ಪ್ರತಿನಿಧಿಗಳಾಗಿ ಸೂರ್ಯ, ಚಂದ್ರ, ಕುಜ, ಬುಧ, ಗುರು, ಶುಕ್ರ, ಶನಿಗಳೆಂಬ ಏಳು ಗೋಲಕಗಳು ಹಾಗೂ ರಾಹುಕೇತುಗಳೆಂಬ ವೃತ್ತ ಸಂಧಿಗಳು ಏರ್ಪಟ್ಟಿವೆ. ಅವುಗಳು ಚರಾಚರಜಗತ್ತಿನ ಒಂದೊಂದು ದೇಹದಲ್ಲೂ ಕೆಲಸ ಮಾಡುತ್ತಿರುವ ಗ್ರಹರೂಪೀದೇವತಾಶಕ್ತಿಗಳನ್ನಾಗಿಯೇ ಭಾವಿಸಬೇಕು. ಅವುಗಳ ಸ್ಥಾನ, ಗತಿ, ಸ್ಥಿತಿಗಳ ಮೇಲೆ ಈ ಬ್ರಹ್ಮಾಂಡ ಹಾಗೂ ಪಿಂಡಾಂಡದ ಮೇಲೆ ದೇವತಾಶಕ್ತಿಗಳ ಪ್ರಸಾದ ಪ್ರಕೋಪಗಳನ್ನು ಅರಿತುಕೊಳ್ಳಬಹುದಾಗಿದೆ.

(ಮುಂದುವರೆಯುವುದು)


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು–ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

**ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,**

**ಬನಶಂಕರಿ 2ನೆ ಹಂತ, ಬೆಂಗಳೂರು–70.**

**ದೂರವಾಣಿ : 080–26770066/26771695**

**ಸಮಯ : ಸಂಜೆ 5.00 ರಿಂದ 7.00 ರವರೆಗೆ**

**ಮಂಗಳವಾರ ಮತ್ತು ಶನಿವಾರ**

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು : ಶ್ರೀಮತಿ ಜಯಲತಾ ಸತ್ಯನಾರಾಯಣ್**

**ಮೊ. : 9916325902**

**ಸದಸ್ಯರು**

**ಶ್ರೀಮತಿ ನಳಿನಿ ನಟರಾಜ್, ಮೊ. : 9481788495**

**ಶ್ರೀಮತಿ ಗಾಯತ್ರಿ ರಾವ್, ಮೊ>9980481245**

# "ಸತ್ಯ ಪ್ರಕಾಶ"

**– ಡಾ. ಪಾವಗಡ ಪ್ರಕಾಶರಾವ್**

**ಹೆಸರಾಂತ ಆಧ್ಯಾತ್ಮ ವಚನಕಾರ ಪಾವಗಡ ಪ್ರಕಾಶರಾವ್ ಅವರು ವಿಜಯ ಕರ್ನಾಟಕ ಪತ್ರಿಕೆಯ ಬೋಧಿವೃಕ್ಷ ಸತ್ಸಂಗದಲ್ಲಿ ಓದುಗರ ಪ್ರಶ್ನೆಗಳಿಗೆ ಉತ್ತರಿಸಿದ ಅಂಕಣ, ಬರಹಗಳ ಸಂಗ್ರಹ 'ಸತ್ಯ ಪ್ರಕಾಶ' ಈ ಪುಸ್ತಕದಿಂದ ಆಯ್ದ ಕೆಲವು ಪ್ರಶ್ನೆಗಳಿಗೆ ಡಾ. ಪಾವಗಡ ಪ್ರಕಾಶರಾವ್‌ರವರ ಉತ್ತರವನ್ನು ಇಲ್ಲಿ ಸಂಗ್ರಹಿಸಿ ಪ್ರಕಟಿಸಿದೆ. ಇದಕ್ಕೆ ಅನುಮತಿ ನೀಡಿದ ಡಾ.ಪ್ರಕಾಶ ರಾವ್‌ರವರಿಗೆ ವಿಪ್ರನುಡಿಯ ಕೃತಜ್ಞತೆಗಳು.**

**ಶ್ರಾದ್ಧ ಎನ್ನುವುದು ಆಚಾರಕ್ಕೆ ಸಂಬಂಧಿಸಿದ್ದು, ಒಂದೊಮ್ಮೆ ತಂದೆ ವಿಪ್ರನಾಗಿ ತಾಯಿ ಬೇರೊಂದು ವರ್ಣಿಯಾಗಿದ್ದರೆ, ಅವರಿಗೆ ಜನಿಸಿದ ಮಗನಿಗೆ ಶ್ರಾದ್ಧ ಮಾಡುವ ಅಧಿಕಾರ ಇರುತ್ತದೆಯೇ?**

ಯಾವುದೋ ಒಂದು ಅರ್ಥದಲ್ಲಿ ಎಲ್ಲ ಜನಾಂಗಗಳಲ್ಲೂ ಗತಿಸಿದ ಹಿರಿಯರನ್ನು ಸ್ಮರಿಸುವ ಯಾವುದೋ ಒಂದು ಕ್ರಿಯೆ ಇರುತ್ತದೆ. ನಮ್ಮಲ್ಲಿ ಅದು ಹೆಚ್ಚು ವಿವರವಾಗಿ, ಕ್ರಮಬದ್ಧವಾಗಿ ಇದೆ. ಪ್ರಶ್ನೆ ಇರುವುದು ಶ್ರಾದ್ಧದ ಬಗ್ಗೆ ಅಲ್ಲ. ಅದನ್ನು ಮಾಡುವ ಅಧಿಕಾರಿಯ ಬಗ್ಗೆ, ಅಧಿಕಾರದ ಬಗ್ಗೆ. ಗತಿಸಿದವನಿಗೆ ಮಗನನಿಲ್ಲದಿದ್ದರೆ ಯಾರು ಮಾಡಬೇಕೆಂಬ ಚರ್ಚೆ ನಡೆದು ಒಂದು ಪಟ್ಟಿಯನ್ನೇ ಕೊಟ್ಟಿದೆ ಶಾಸ್ತ್ರ. ಯಾರೂ ಇಲ್ಲದಿದ್ದರೆ ಸತ್ತವನ ಗೋತ್ರದವ ಯಾರಾದರೂ ಮಾಡಬಹುದೆಂದಿದೆ. ಹಣ ಕೊಟ್ಟಾದರೂ ಯಾರಿಂದಲಾದರೂ ಮಾಡಿಸಿ ಎನ್ನುತ್ತದೆ ಶಾಸ್ತ್ರ. ಅಂದಮೇಲೆ ಸತ್ತಾತನಿಗೆ ಮಗನಿದ್ದಾಗ ಪ್ರಶ್ನೆಯೇ ಇಲ್ಲ. ಆದರೆ ಸತ್ತ ವ್ಯಕ್ತಿಯು ಬ್ರಾಹ್ಮಣನಾಗಿದ್ದೂ, ಪತ್ನಿ ಅನ್ಯ ವರ್ಣೀಯಳಾಗಿದ್ದರೆ ಅವರಿಗೆ ಹುಟ್ಟಿದ ಮಗನಿಗೆ ಶ್ರಾದ್ಧ ಮಾಡುವ ಅಧಿಕಾರವಿದೆಯೇ ಎಂಬುದು ಪ್ರಶ್ನೆ. ಮಗ ಮಗನೇ. ಆ ಸತ್ತ ಅಪ್ಪನಿಗೆ ಹುಟ್ಟಿದಾತ. ಅದಕ್ಕೇ ಅವನನ್ನು 'ಯಜಮಾನಸ್ಯ ಪಿತುಃ' ಎನ್ನುವುದು. ಅಪ್ಪನ ಗೋತ್ರ ಅವನಿಗೆ ಪ್ರಾಪ್ತಿ. ಬ್ರಾಹ್ಮಣ ಅನ್ಯ ಜಾತಿಯ ಹೆಣ್ಣನ್ನು ವಿವಾಹವಾಗಕೊಡದೆಂದು ಶಾಸ್ತ್ರ ಹೇಳಿಲ್ಲ. ಹೀಗಾಗಿ ಶಾಸ್ತ್ರವೇ ಅನ್ಯ ಜಾತಿಯ ಹೆಣ್ಣನ್ನು ಮದುವೆಯಾಗಲಿಕ್ಕೆ ಒಪ್ಪಿಗೆ ಕೊಟ್ಟಿರುವಾಗ ಅವರಿಗೆ ಹುಟ್ಟಿದ ಮಗನಿಗೆ ಅಧಿಕಾರವಿಲ್ಲವೆ? ಖಂಡಿತ ಇದೆ. ಈ ಸಂದರ್ಭದಲ್ಲಿ ಒಂದು ಅಂಶವನ್ನು ಗಮನಿಸಬೇಕು. ಸತ್ತ ವ್ಯಕ್ತಿಗೆ ಬ್ರಾಹ್ಮಣ ಪತ್ನಿ, ಅಬ್ರಾಹ್ಮಣ ಪತ್ನಿ ಎಂದು ಇಬ್ಬರೂ ಇದ್ದರೆ, ಬ್ರಾಹ್ಮಣ ಹೆಂಡತಿಗೆ ಮಗನಿದ್ದರೆ, ಆಗ ಅಧಿಕಾರ ವಿರುವುದು ಅವನಿಗೇ. (ಈಗಿನ ಕಾನೂನಿನ ಪ್ರಕಾರ ಇಬ್ಬರು ಹೆಂಡಿರಿರಲು ಸಾಧ್ಯವೇ ಇಲ್ಲವಾದ್ದರಿಂದ ಪ್ರಸ್ತುತ ಆ ಪ್ರಶ್ನೆಯೇ ಉದ್ಭವಿಸುವುದಿಲ್ಲ.)

**ಜೀವದೊಳಗಿನ ಮನೋಮಯಕೋಶವನ್ನು ಪರಮಾತ್ಮನೆನ್ನಬಹುದೇ? ಹಾಗಾದರೆ ಛಾಂದೋಗ್ಯ ಉಪನಿಷತ್ ಹೇಳುವಂತೆ 'ಅನ್ನಮಯಂ ಹಿ ಸೋಮ್ಯಾ ಮನಃ' ಎಂಬುದರ ಅರ್ಥವೇನು?**

ಮನೋಮಯ ಕೋಶ ಹೇಗೆ ಪರಮಾತ್ಮನಾಗಲು ಸಾಧ್ಯ? ಅನ್ನಮಯ ಕೋಶದ ನಂತರ ಪ್ರಾಣಮಯ ಕೋಶ, ಆನಂತರ ಮನೋಮಯ ಕೋಶ, ಇದಾದ ನಂತರ ವಿಜ್ಞಾನಮಯ ಕೋಶ, ಕೊನೆಗೆ ಆನಂದಮಯ ಕೋಶ. ಮತ್ತೊಂದು ರೀತಿ ಹೇಳುವುದಾದರೆ, ಅನ್ನಮಯ ಕೋಶದೊಳಗೆ ಪ್ರಾಣಮಯ, ಅದರೊಳಗೆ ಮನೋಮಯ, ಅದರೊಳಗೆ ವಿಜ್ಞಾನಮಯ, ಅದರೊಳಗೆ ಆನಂದಮಯ ಕೋಶ. **'ಅನಂದೋ ಬ್ರಹ್ಮೇತಿ ವ್ಯಜಾನಾತ್'**. ಈ ಅನಂದಮಯ ಕೋಶದಲ್ಲಿ ಪರಮಾತ್ಮ ಇದ್ದಾನು, ಇರಬಹುದು. ಆಸಕ್ತಿ ಇದ್ದರೆ ತೈತ್ತಿರೀಯದ ಶಿಕ್ಷಾವಲ್ಲಿಯನ್ನು ಅಭ್ಯಾಸ ಮಾಡಿ. ಇನ್ನು ಛಾಂದೋಗ್ಯದ ಹೇಳಿಕೆ. **'ಅನ್ನಮಯಂ ಹಿ ಸೋಮ್ಯಾ ಮನಃ'**, ಇಲ್ಲಿ ಮನೋಮಯ ಕೋಶ ಪರಮಾತ್ಮನೆಂದು ಹೇಳಿದೆ? ಅನ್ನ ಹಾಗೂ ಮನೋಮಯಗಳ ನಂಟನ್ನು ಅದುಹೇಳುತ್ತದೆ. ದಯವಿಟ್ಟು ಆ ಇಡೀ ಭಾಗವನ್ನು ಅಧ್ಯಯನ ಮಾಡಿ, ಅನಂತರ ಆ ಸಂದರ್ಭ, ಸಂವಾದ ಹಾಗೂ ನೀವು ಅರ್ಥಮಾಡಿಕೊಂಡಿದ್ದು ಈ ಎಲ್ಲಾ ಬರೆಯಿರಿ, ನಾನು ಹೇಳಬಹುದಾದದ್ದು ಉಳಿದಿದ್ದರೆ, ಮತ್ತೆ ಬರೆವೆ.

**ಗುರು ಎಂದರೆ ಯಾರು? ಯಾರನ್ನು ಗುರು ಎಂದು ಗುರ್ತಿಸಬಹುದು? ಅವರಲ್ಲಿರಬಹುದಾದ ಗುಣಗಳೇನು?**

ಖಂಡಿತ ಉಪಾಧ್ಯಾಯರು, ಉಪನ್ಯಾಸಕರು, ಪ್ರಾಧ್ಯಾಪಕರು. . ಇವರು ಗುರುಗಳಲ್ಲ. ಅವರೇನಿದ್ದರೂ ಶಿಕ್ಷಕರು. ತಾವು ಪಡೆದ ಸಂಬಳಕ್ಕಾಗಿ ದುಡಿಯುವ ಯಾವುದೇ ಒಬ್ಬ ಕೆಲಸಗಾರನಿದ್ದಂತೆ. ಯಾರು ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಾರೋ, ಸೋಮಾರಿಗಳಲ್ಲವೋ, ತಮ್ಮ ಪಾಲಿನ ಕರ್ತವ್ಯಗಳನ್ನು ಸಂಪೂರ್ಣವಗಿ ಶ್ರದ್ಧೆಯಿಂದ ಯಾರು ಮಾಡುತ್ತಾರೋ, ಅವರನ್ನು ಸಮಾಜದ ಗೌರವಿಸುತ್ತದೆ. ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ಸ್ನೇಹದಿಂದ, ಆಡಂಬರವಿಲ್ಲದೆ, ಬೂಟಾಟಿಕೆಯಿಲ್ಲದೆ, ಅಧ್ಯಯನಶೀಲರಾಗಿ ಪಾಠ ಮಾಡುವ ಶಿಕ್ಷಕರೇ ಆದರಣೀಯ, ಗೌರವಾರ್ಹ, ಹಾಗಲ್ಲದವರು ವಿದ್ಯಾರ್ಥಿಗಳ ಮೂದಲಿಕೆಗೆ, ತಿರಸ್ಕಾರಕ್ಕೆ ಗುರಿಯಾಗುತ್ತಾರೆ. ಒಳ್ಳೆಯ ಉಪಾಧ್ಯಾಯರುಗಳು, ಪ್ರಭಾವೀ ಉಪನ್ಯಾಸಕರು, ಪಂಡಿತ ಪ್ರಾಧ್ಯಾಪಕರೂ ಮಾನ್ಯರೇ, ವಿದ್ಯಾರ್ಥಿ ಪ್ರಿಯರೇ, ದಾನದ ಪರಮ ಸೇವೆ ಮಾಡುವ ಮಹೋತ್ತಮರೇ, ಹಾಗೆಂದ ಮಾತ್ರಕ್ಕೇ ಇವರಾರೂ ಗುರುವಿನ ಪೀಠದಲ್ಲಿ ಕೂಡಲಾರರು (ವರ್ಣಮಾತ್ರಂ ಕಲಿಸಿದಾತಂ.. ಎಂಬ ಅತ್ಯತಿಶಯೋಕ್ತಿಯನ್ನು ಬದಿಗಿಡುತ್ತ) ಅವರನ್ನು ಶಿಕ್ಷಕರ ದಿನಾಚರಣೆಯಂದು ಗುರು ಬ್ರಹ್ಮ, ಗುರುರ್ವಿಷ್ಣುಃ, ಗುರುದೇವೋ ಮಹೇಶ್ವರಃ, ಗುರುಸ್ಸಾಕ್ಷತ್ ಪರಂಬ್ರಹ್ಮ ಎಂದು ಹೇಳುವುದೂ, ಅದನ್ನವರು ಕೇಳಿ, "ಓಹೋ! ನಾವು ಗುರುಗಳು" ಎಂದು ಉಬ್ಬುವುದೂ ಸರ್ವೇ ಸಾಮಾನ್ಯ. ಆದರೆ ಅದು ನಿಜವಲ್ಲ. ಗುರುವೆಂಬಾತ ಹಣಕ್ಕಾಗಿಯೇ ಒಲಿಯದ; ಲೌಕಿಕ ವಿದ್ಯೆಗಳಿಗಿಂದ ವಿಭಿನ್ನವಾದ, ಆಧ್ಯಾತ್ಮಿಕ ಜ್ಞಾನವನ್ನು ಪ್ರದಾನ ಮಾಡುವಾತ, ಶಿಷ್ಯನ ಬದುಕಿಗೆ ಬೆಳಕಾಗಬಹುದಾದ, ಅವನ ಜೀವನ ಸಮಸ್ಯೆಗಳಿಗೆ ಪರಿಹಾರ ತೋರಬಲ್ಲ ಶುದ್ಧ ವ್ಯಕ್ತಿಯೊಬ್ಬ ಗುರುವಾಗಬಲ್ಲ.

ಶ್ರೀ ಶ್ರೀ ಶಂಕರ ಭಗವತ್ಪಾದರು ನೀಡಿದ ಗುರುವಿನ ನಿರೂಪಣೆಯನ್ನು ನೋಡೋಣವೇ? "ಗುರು ಪರಮಶಾಂತ. ಅವನು ತ್ಯಾಗಿಯಾದ ಮಹಾತ್ಮ. ಪ್ರಕೃತಿಗೆ ವಸಂತ ಬಂದಂತೆ ಲೋಕ ಹಿತಕ್ಕಾಗಿ ಸಂಚರಿಸುವಾತ. ಮೊದಲು ತಾನು, ಸ್ವಯಂ, ಈ ಸಂಸಾರದ ಆಮಿಷ, ಹಣದ ವ್ಯಾಮೋಹ, ಸ್ವಾರ್ಥ ಕ್ರಿಯೆಗಳೆಂಬ ಕಪ್ಪು ಕುದಿಯುವ ಸಾಗರದಿಂದ ಪಾರಾಗಿ, ಯಾವುದೇ ಪ್ರತಿಫಲಾಪೇಕ್ಷೆಯೂ ಇಲ್ಲದೇ, ಬಳಿ ಬಂದವರನ್ನೂ ದಾಟಿಸುವಾತ."

(ಶಾಂತೋ ಮಹಾಂತೋ ನಿವಸಂತಿ ಸಂತೋ । ವಸಂತವಲ್ಲೋಕ ಹಿತಂ ಚರಂತಃ । ತೀರ್ಣಾಃ ಸ್ವಯಂ ಭೀಮ ಭವಾರ್ಣವಂ ಜನಾನ್ । ಅಹೇತುನಾನ್ಯಾಪಿ ತಾರಯಂತಃ ॥ )

ಒಂದೊಮ್ಮೆ ಈ ಗುಣಗಳು ಪ್ರಾರಂಭದಲ್ಲಿ ಬರೆದ, ಉಪಾಧ್ಯಾಯ-ಉಪನ್ಯಾಸಕ-ಪ್ರಾಧ್ಯಾಪಕರಲ್ಲಿದ್ದರೆ ಅವರೂ ಗುರುಗಳಾಗುತ್ತಾರೆ 1 ಆಶ್ಚರ್ಯವೆಂದರೆ ಒಮ್ಮೊಮ್ಮೆ ಅತ್ಯಂತ ಜನಸಾಮಾನ್ಯನೂ ಗುರುಸ್ಥಾನಕ್ಕೇರಬಲ್ಲ !!!

**ಯಜುರ್ವೇದ ಸಂಧ್ಯಾವಂದನಾ ಕ್ರಮದಲ್ಲಿ ಆಚಮನ ಕ್ರಿಯಾ ಭಾಗವು ಏಳು ಬರುತ್ತದೆ. ಪ್ರತಿಯೊಂದಕ್ಕೂ ಕಾರಣವಿರುವುದಾದರೆ ಏಳರ ವೈಶಿಷ್ಟ್ಯವೇನು?**

ಅಸಲು ಆಚಮನವೆಂದರೇನು? ಅದೊಂದು ಶುದ್ಧಿ ಕ್ರಿಯೆ. ಹಲವು ದೇವರ ನಾಮಗಳನ್ನು ಹೇಳಿಕೊಳ್ಳುತ್ತಾ ನಮ್ಮ ಒಂದೊಂದು ಅಂಗದಲ್ಲಿಯೂ ಸ್ಥಾಪಿಸುವ ಮಾರ್ಗ, ಅದು ದೈವಕ್ಕೆ 21 ಬಾರಿ ನಮಸ್ಕರಿಸುವ ವಿಧಿ. ಮೊದಲ ಮೂರು ಸ್ವಾಹಾಗಳಲ್ಲಿ ನೀರು ಕುಡಿದು, ಉಳಿದ 21 ಬಾರಿ ನಮಃ ಎಂದು ದೈವಕ್ಕೆ ಬಾಗುವ ಬಗೆ. ಈ 21ರಲ್ಲಿ ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಪಂಚ ಪ್ರಾಣಗಳು, ಪಂಚ ಉಪಪ್ರಾಣಗಳು ಹಾಗೂ ಮನಸ್ಸು ಎಂಬ 21 ಇಂದ್ರಿಯಗಳಿಗೆ ವಂದನಾರ್ಪಣೆ.

ಈ ಆಚಮನಮವನ್ನು ಆರಂಭ – ಅಂತ್ಯಗಳಲ್ಲಿ ಮಾಡಿದರೆ ಸಾಕು. ಏಳು ಅಥವ ನಾಲ್ಕು ಅಥವ ಹತ್ತು ಬಾರಿ ಮಾಡಿದರೂ ತಪ್ಪಿಲ್ಲ. ಅದು ಆಯಾ ದೇಶ ಸಂಪ್ರದಾಯಗಳನ್ನು ಅವಲಂಬಿಸಿದೆ.ಏಳೆಂಬ ಸಂಖ್ಯೆಗೆ ವಿಶೇಷ ಕಾರಣವಿಲ್ಲ. ಆಚರಣೆಯಲ್ಲಿರುವ ಸಂಧ್ಯಾವಂದನ ಕ್ರಿಯೆಯು ಒಂದೇ ಕಾಲದಲ್ಲಿ "ಇದಮಿತ್ಥಂ" ಎಂದು ಸಿದ್ಧವಾದುದಲ್ಲ. ಅದು ಕಾಲಕ್ರಮೇಣ ಬೆಳೆದದ್ದು. ಅದರ ಕರಡು ಮೊದಲು ರೂಪಿತವಾದಾಗ ಅರ್ಘ್ಯಪ್ರದಾನ ಮತ್ತು ಜಪಗಳಷ್ಟೇ ಇದ್ದಿರಬಹುದು. ಹಾಗೇ ಬೆಳೆದು ಇದೀಗ ಈ ರೂಪ ತಳೆದಿದೆ. ಅವಕಾಶವಿದ್ದವರು ಪೂರ್ಣವಾಗಿ ಮಾಡಲಿ, ಕಾಲ ಕೃಪಣತೆ ಇದ್ದರೆ ಅರ್ಘ್ಯಪ್ರದಾನ ಮಾಡಿದರೆ ಸಾಕು ಎಂಬುದು ಉದಾರ ದೃಷ್ಟಿ. ಈ ಹಿನ್ನೆಲೆಯಲ್ಲಿ ಆಚಮನ ಮುಖ್ಯ. ಆದರೆ ಇಂತಿಷ್ಟೇ ಎಂಬ ಕೊರಲುರುಲಿಲ್ಲ. ಕೆಲ ಯಜುರ್ವೇದ ಸಂಧ್ಯಾ ಪುಸ್ತಕದಲ್ಲಿಯೇ ನಾಲ್ಕು ಬಾರಿ ಸೂಚಿಸಿದ್ದಾರೆ. ಆ ಕಾರಣ ಸಂಖ್ಯೆಯನ್ನು ಬಿಟ್ಟು ಮಂತ್ರವನ್ನು ಸ್ವೀಕರಿಸಿ ಆಚರಿಸುವುದು ಜಾಣತನ.

**ವಿನಾಯಕ ದೇವರು ಗೃಹಸ್ಥರೋ ಅಥವ ಬ್ರಹ್ಮಚಾರಿಗಳೋ ? ಇದಕ್ಕೆ ಕಾರಣ ವಿನಾಯಕ ದೇವರ ಪೂಜೆಯಂದು ನಮ್ಮ ಸ್ನೇಹಿತರೊಬ್ಬರು ಒಂಟಿ ಜನಿವಾರವನ್ನು ಅವರು ಹಾಕಿಕೊಂಡದ್ದುಂಟು. ಕೇಳಿದಾಗ ಅವನು ಗಣಪತಿ ದೇವರು ಬ್ರಹ್ಮಚಾರಿಯೆಂದು ಹೇಳುತ್ತಾರೆ. ಹೌದೇ ?**

ನಾವು ಯಾರೂ ಗಣಪತಿಯನ್ನು ಕಂಡಿಲ್ಲ. ಆತನ ವಿಗ್ರಹಗಳನ್ನೋ, ಚಿತ್ರಗಳನ್ನೋ ನೋಡಿದ್ದೇವೆ. ಕಥೆಗಳನ್ನು ಕೇಳಿದ್ದೇವೆ. ಶ್ರೀರಾಮರಿಗೇ ಹಲವು ಹೆಂಡಿರನ್ನು ಕೊಟ್ಟವರು ನಾವು. ಆಂಜನೇಯನ ಹೆಂಡತಿ ಸುವರ್ಚಲೆಯೆಂದವರು ನಾವು. ಹನುಮಂತನನ್ನು ಭಾರತೀ ರಂನನೆಂದು ಕರೆದವರೂ ನಾವೇ. ನಮಗೆ ಬ್ರಹ್ಮಚರ್ಯದಲ್ಲಾಗಲೀ, ಆ ಸಂಯಮದಲ್ಲಾಗಲೀ ನಂಬಿಕೆಯೇ ಇಲ್ಲ. ಹೀಗಾಗಿ ಗಣಪತಿಗೂ ಸಿದ್ದಿ–ಬುದ್ಧಿಯರನ್ನು ಕೊಟ್ಟು ಮದುವೆ ಮಾಡಿದ್ದೇವೆ? ಹಾಗೆಂದು ಅವರು ಹೆಣ್ಣುಗಳಲ್ಲ, ಸಾನೆಯ ಸಿದ್ದಿ, ಸುಜ್ಞಾನದ ಬುದ್ಧಿ ಎನ್ನುವವರೂ ಇದ್ದಾರೆ. ಹೇಗಾದರೂ ಇರಲಿ. ಗಣಪತಿ ಒಂಟಿ ಜನಿವಾರ ಹಾಕಿಕೊಳ್ಳುವುದಕ್ಕೂ, ನಿಮ್ಮ ಮಿತ್ರರು ಒಂಟಿ ಯಜ್ಞೋಪವೀತ ಧರಿಸುವುದಕ್ಕೂ ಏನು ಸಂಬಂಧ? ಗಣಪತಿ ಇಲಿ ಮೇಲೆ ಹತ್ತುತ್ತಾನೆಂದು ನಿಮ್ಮ ಮಿತ್ರನು ಹತ್ತುತ್ತಾರೇನು ಹೆಗ್ಗಣವನ್ನಾದರೂ? ವಿನಾಯಕ ಸೊಂಟಕ್ಕೆ ನಾಗರಹಾವು ಸುತ್ತಿದನೆಂದು, ಇವರೂ ಸರ್ಪವನ್ನು ಬಿಗಿಯುತ್ತಾರೋ ನಡುವಿಗೆ? ಅಥವಾ ಲಂಬೋದರನನ್ನು ಕಂಡು ಬೊಜ್ಜು ಬೆಳೆಸುತ್ತಾರೋ? ಸ್ವಾಮಿ, ನೀವೇಕೆ ದೈವವನ್ನು ಅನುಸರಿಸುವಿರಿ? ಎಂದಿಗಾದರೂ ಅದು ಸಾಧ್ಯವೇ?


ಜಾಹಿರಾತು

# ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ

ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು

ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ

**ದೂರವಾಣಿ : 2672 2267, 98866 55755**

# ಹೊರನಾಡು ಶ್ರೀ ಅನ್ನಪೂರ್ಣೇಶ್ವರೀ ದೇವಿ ಪುನಃ ಪ್ರತಿಷ್ಠಾ ಸ್ವರ್ಣಮಹೋತ್ಸವ ಹಾಗೂ ಬ್ರಹ್ಮ ಕುಂಭಾಭಿಷೇಕ ಮಹೋತ್ಸವ



















PERIODICAL RATE
VIPRANUDI KANNADA MONTHLY
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 24-05-2023 Date of Publishing 22-05-2023

## ಹೃತ್ಪೂರ್ವಕ ಕೃತಜ್ಞತೆಗಳು

ಈ ಚುನಾವಣೆಯಲ್ಲಿ ಅತ್ಯಧಿಕ ಬಹುಮತದಿಂದ ನನ್ನನ್ನು ಜಯಶೀಲನನ್ನಾಗಿ ಚುನಾಯಿಸಿದ ಕ್ಷೇತ್ರದ ಎಲ್ಲಾ ಸಮುದಾಯದ ಮತದಾರರಿಗೂ ಹಾಗೂ ವಿಶೇಷವಾಗಿ ನನ್ನನ್ನು ಬೆಂಬಲಿಸಿದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಸದಸ್ಯರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.



**ಡಾ|| ಉದಯ್ ಬಿ. ಗರುಡಾಚಾರ್**

**ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ**

If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar